
ಸಂಪುಟ 23 ಸಂಚಿಕೆ 21
ಮೇ 27, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪ್ರೆಕ್ಷ್ಯಾರಂಗ



ಪ.ಬಂಗಾಳ:

ವಿಶ್ವ ವಿಕ್ರಮ ಸಾಧಿಸಿದ ಎಡರಂಗ

ವಿಧಾನಸಭಾ ಚುನಾವಣೆಗಳು

ಹೀನಾಯ ಸೋಲುಂಡ ಬಿಜೆಪಿ ಕೂಟ

ಸಿನಿಮಾ ವಿಮರ್ಶೆ: 'ಜಿಪುಣ ನನ್ನ ಗಂಡ'

ಎಡರಂಗಕ್ಕೆ ಬಲ ತುಂಬಿದ ಪಂಚಾಯತ್ ಚುನಾವಣೆ

ಎರಡು ಸಂಯುಕ್ತರಂಗ ಸರಕಾರಗಳು ಇದ್ದಾಗ ಕ್ರಮವಾಗಿ ಸುಧೀನ್ ಕುಮಾರ್ ಮತ್ತು ನಿರಂಜನ ಸೇನ್ ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದರು.

ಎಡರಂಗ ಅಧ್ಯಕ್ಷ ಪ್ರಮೋದ್ ಬಾಬು

ಎಡರಂಗದ ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವಂತೆ ಕಾ. ಪ್ರಮೋದ್ ದಾಸ್ ಗುಪ್ತರನ್ನು ಕೋರಲಾಯಿತು. ಮೊದಮೊದಲು ಅವರು ಖಂಡತುಂಡವಾಗಿ ನಿರಾಕರಿಸಿದರು. ರಂಗದ ಇತರ ಅಂಗಪಕ್ಷಗಳೂ ಆಗ್ರಹಿಸಿದಾಗ ಅವರು ಒಪ್ಪಿಕೊಂಡರು ರಂಗದ ಅಧ್ಯಕ್ಷರಾಗಿ ನೀಡಿದ ಕೊಡುಗೆಗಾಗಿ ಈ ರಾಜ್ಯದ ಜನರು ಪ್ರಮೋದ್ ದಾಸ್ ಗುಪ್ತರಿಗೆ ಚಿರಋಣಿ ಆಗಿರುತ್ತಾರೆ.

ಕೆಲವೇ ಆಯ್ದ ಜನರ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಎಲ್ಲಾ ಕಾನೂನುಗಳು ರೂಪಿತವಾಗಿದ್ದುದರಿಂದ ನಾವು ಮುಂದೆ ಕಷ್ಟ ಅನುಭವಿಸಬೇಕಾಗಿತ್ತು. ರಾಜ್ಯಕ್ಕೆ ಇರುವ ಅಧಿಕಾರಗಳೂ ಸೀಮಿತ. ಇದರಲ್ಲೂ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡುತ್ತಿತ್ತು. ಹಿಂದಿನ ಸರಕಾರ ಜನತೆಯ ಹಕ್ಕುಗಳನ್ನು ಕಿತ್ತುಕೊಂಡಿದ್ದು ಅದನ್ನು ಮರಳಿ ಕೊಡಿಸುವುದು ನಮ್ಮ ಆದ್ಯತೆಯಾಗಿತ್ತು.

ಹಿಂದಿನ ಸಂಯುಕ್ತ ರಂಗ ಸರಾಕರಗಳಂತೆ ಈ ಸರಕಾರವನ್ನು ವಜಾ ಮಾಡಲು ಅಥವಾ ಉರುಳಿಸಲು ಸಾಧ್ಯವಿಲ್ಲ ಎಂದು ನಾವು ತಿಳಿದೆವು. ಮೊದಲನೆಯದಾಗಿ, ಹಿಂದಿನ ಸಂದರ್ಭಗಳಿಗಿಂತ ಈ ಬಾರಿ ನಮ್ಮ ಬಲ ತುಂಬಾ ಹೆಚ್ಚಾಗಿತ್ತು. ರಂಗದ ಅಂಗಪಕ್ಷಗಳ ನಡುವಿನ ಒಗ್ಗಟ್ಟು ಕೂಡ ಈ ಬಾರಿ ಬಲವಾಗಿತ್ತು. ಜನತೆ ನಮ್ಮ ಜತೆಗಿದ್ದರು. ಆದ್ದರಿಂದಲೇ ರೈಟರ್ಸ್ ಬಿಲ್ಡಿಂಗ್‌ನಿಂದ ಮಾತ್ರವೇ ನಾವು ಆಡಳಿತ ನಡೆಸಬಾರದು ಎಂದು ನಾವು ಘೋಷಿಸಿದೆವು.

21 ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆವು. ಆದರೆ ನಮ್ಮ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿದ್ದ ಉಳಿದ ಕಾರ್ಯಕ್ರಮಗಳನ್ನು ಭಾಗಶಃ ಅನುಷ್ಠಾನಗೊಳಿಸಲು ಸಾಧ್ಯವಾಯಿತು. ಭೂ ಸುಧಾರಣೆ ನಮ್ಮ ಅತ್ಯಂತ ಪ್ರಾಧಾನ್ಯತೆಯ ವಿಷಯವಾಯಿತು.

ಆಪರೇಷನ್ ಬರ್ಗಾವನ್ನು ಜಾರಿಗೆ ತಂದೆವು. ಕೃಷಿ ಕೂಲಿಕಾರರಿಗೆ ಕನಿಷ್ಟ ವೇತನ ನಿಗದಿ ಮಾಡಿದೆವು. ಹಳ್ಳಿಗಳಲ್ಲಿನ ಮಹಾಜನ ಪದ್ಧತಿಯನ್ನು ಕಠಿಣವಾಗಿ ನಿಭಾಯಿಸಲಾಯಿತು.

ಒಟ್ಟು 1700 ಕಾಂಗ್ರೆಸ್ ಮತ್ತು ನಕ್ಸಲೀಯ ರಾಜಕೀಯ ಕೈದಿಗಳನ್ನು ಸರಕಾರ ಬಿಡುಗಡೆ ಮಾಡಿತು. ಬಹುತೇಕ 10,000 ಮೊಕದ್ದಮೆಗಳನ್ನು ವಾಪಸು ಪಡೆಯಲಾಯಿತು. 311(2)ನೇ ಸೆಕ್ಷನ್ ಅನ್ವಯ ರಿಟ್ರೆಂಚ್ ಮಾಡಲಾಗಿದ್ದ ಎಲ್ಲ ಕಾರ್ಮಿಕರಿಗೆ ಪುನಃ ಕೆಲಸ ಕೊಡಲಾಯಿತು.

ಎಡರಂಗವು ರಾಜ್ಯದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮರಳಿಸಿದ್ದು ಮಾತ್ರವೇ ಅಲ್ಲದೆ ಅವನ್ನು ಬಲಪಡಿಸಿತು ಕೂಡ. ಕಾರ್ಮಿಕರು ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ತೊಡಗುವ ಹಕ್ಕನ್ನು ನೀಡಲಾಯಿತು. ಪೋಲೀಸರಿಗೆ ಕೂಡ ಸಂಘ ರಚಿಸಿಕೊಳ್ಳುವ ಅವಕಾಶ ಕಲ್ಪಿಸಲಾಯಿತು. ಕಾರ್ಮಿಕರ ನ್ಯಾಯಸಮ್ಮತ ಮುಷ್ಕರವನ್ನು ಮುರಿಯಲು ಪೋಲಿಸರಿಗೆ ಅವಕಾಶ ನೀಡಲಿಲ್ಲ.

ಸ್ವಾಯತ್ತ ಮಹಾನಗರ ಪಾಲಿಕೆ ಮತ್ತು ಪುರಸಭೆಗಳಿಗೆ ದೀರ್ಘ ಸಮಯದಿಂದ ಚುನಾವಣೆಗಳು ನಡೆದಿರಲಿಲ್ಲ. ಈ ಪ್ರಕ್ರಿಯೆಗೆ ನಾವು ಚಾಲನೆ ನೀಡಿದೆವು. ಮೂರು ಹಂತದ ಪಂಚಾಯತ್ ವ್ಯವಸ್ಥೆ ಜಾರಿಗೊಳಿಸಲು ಹಾಗೂ ಅಧಿಕಾರ ವಿಕೇಂದ್ರೀಕರಣದ ಸರಿಯಾದ ದಿಕ್ಕಿನಲ್ಲಿ ಸೂಕ್ತ ಪ್ರಯತ್ನಗಳನ್ನು ಮಾಡಿದೆವು.

ಪಂಚಾಯತ್ ವ್ಯವಸ್ಥೆಯನ್ನು ಪುನರ್ ರೂಪಿಸುವುದರಲ್ಲಿ ಖ್ಯಾತ ಆರ್ಥಿಕ ತಜ್ಞ ಹಾಗೂ ನಮ್ಮ ಪಕ್ಷದ ಧುರೀಣ (ದಿವಂಗತ) ಸತ್ಯವ್ರತ ಸೇನ್ ಮಹತ್ವದ ಪಾತ್ರ ನಿರ್ವಹಿಸಿದರು.

ಜೂನ್ 4 ರಂದು ಪಂಚಾಯತಿ ಚುನಾವಣೆಗಳು ನಡೆದವು. ಒಟ್ಟು 55,952 ಪ್ರತಿನಿಧಿಗಳು ಚುನಾಯಿತರಾದರು. ಇಷ್ಟೊಂದು ವ್ಯಾಪಕ ಪ್ರಾತಿನಿಧ್ಯ ದೇಶದಲ್ಲಿ ಯಾವುದೇ ಮಟ್ಟದಲ್ಲಿ ಅದುವರೆಗೆ ಕಂಡುಕೇಳರಿಯದ ವಿದ್ಯಮಾನವಾಗಿತ್ತು. ಚುನಾವಣೆಯನ್ನು ಹಾಳುಗೆಡವಲು ಕಾಂಗ್ರೆಸ್ ಮತ್ತು ಜನತಾ ಪಕ್ಷ ಗರಿಷ್ಠ ಪ್ರಯತ್ನ ನಡೆಸಿದವು. ಸ್ಥಾಪಿತ ಹಿತಾಸಕ್ತರು ಗ್ರಾಮಸ್ಥರನ್ನು ಬೆದರಿಸಿದರು. ಆದರೆ ಜನರು ಮತ್ತೆ ನಮ್ಮಲ್ಲಿ ವಿಶ್ವಾಸವನ್ನು ತೋರ್ಪಡಿಸಿದರು. ಎಡರಂಗ ಅಭ್ಯರ್ಥಿಗಳು 38892 ಸ್ಥಾನಗಳಲ್ಲಿ ಗೆದ್ದು ಬಂದರು. ಕಾಂಗ್ರೆಸ್ ಬಣಗಳು ಕೇವಲ 6877 ಸ್ಥಾನಗಳನ್ನು ಗಳಿಸಿತು. ಪಕ್ಷೇತರರು 10812 ಸ್ಥಾನಗಳಲ್ಲಿ ಜಯಶಾಲಿಯಾದರು. ಪಂಚಾಯತ್ ಚಟುವಟಿಕೆಗಳ ಕ್ರೋಢೀಕರಣಕ್ಕಾಗಿ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಒಂದು ಊರು ಸಮಿತಿಯನ್ನು ರಚಿಸಲಾಯಿತು. ಜನತೆ ಸಂದರ್ಭಕ್ಕೆ ತಕ್ಕಂತೆ ಸ್ಪಂದಿಸಿತು. ಉತ್ತಮ ಜೀವನಕ್ಕಾಗಿ ಅವರು ಶೀಘ್ರವೇ ಬದಲಾವಣೆ ತರಲಿದ್ದರು.

ಪ್ರಥಮ ಪರೀಕ್ಷೆಯಲ್ಲೇ ಪಾಸ್

1978 ರ ವಿನಾಶಕಾರಿ ಪ್ರವಾಹದ ವೇಳೆ ಹೊಸದಾಗಿ ರಚಿತವಾದ ಪಂಚಾಯತಗಳು ಪ್ರವಾಹ ಪರಿಹಾರ ಕಾರ್ಯವನ್ನು ಪರಿಣಾಮಕಾರಿಯಾಗಿ ಸಂಘಟಿಸಿದವು. ರಾಜ್ಯದಲ್ಲಿ ಈ ಮುಂಚೆ ಎಲ್ಲಾ ಪ್ರವಾಹ ಬಂದಾಗ ಜನರು ನೆರವಿಗಾಗಿ ಹಾಹಾಕಾರ ಮಾಡುತ್ತಿದ್ದರು. ಈಗ ಆ ಪರಿಸ್ಥಿತಿ ಇರಲಿಲ್ಲ. ಪಂಚಾಯತ್ ವ್ಯವಸ್ಥೆ ಪ್ರಥಮ ಪರೀಕ್ಷೆಯಲ್ಲೇ ಅದ್ಭುತ ಯಶಸ್ಸು ಗಳಿಸಿತು. ಎಡರಂಗ ಸರಕಾರ ಪಂಚಾಯತಿಗಳ ಮೂಲಕವೇ ತನ್ನ ಭೂಸುಧಾರಣೆ ಕಾರ್ಯಕ್ರಮವನ್ನು ಆರಂಭಿಸಿತು. ಅಕ್ರಮವಾಗಿ ಹೊಂದಿದ್ದ ಜಮೀನನ್ನು ಭೂರಹಿತ ಜನರಿಗೆ ವಿತರಿಸಲು ಆರಂಭಿಸಲಾಯಿತು. ವಿದ್ಯುತ್ ಮತ್ತು ನೀರಾವರಿ ಮತ್ತಿತರ ಕ್ಷೇತ್ರಗಳಲ್ಲಿ ಕೂಡ ಪಂಚಾಯತಿಗಳು ಪರಿಣಾಮಕಾರಿ ಕಾರ್ಯ ನಿರ್ವಹಿಸಿದವು.

ಶಿಕ್ಷಣ ಕ್ಷೇತ್ರದಲ್ಲಿನ ಅರಾಜಕತೆಯನ್ನು ಕೊನೆಗಾಣಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಯಿತು. ಕಾಂಗ್ರೆಸ್- ಎಸ್‌ಯುಸಿಐ- ನಕ್ಸಲೈಟ್ ದುಷ್ಟಕೂಟಕ್ಕೆ ಇದು ಇಷ್ಟವಾಗಲಿಲ್ಲ. ಜನರನ್ನು ತಪ್ಪುದಾರಿಗೆಳೆಯಲು ಯತ್ನಿಸಿತು. ಆದರೆ ಜನರೇನೂ ಮೂರ್ಖರಾಗಿರಲಿಲ್ಲ.

ತ್ರಿಪುರಾ ಜಯಭೇರಿ

1978 ಉತ್ತಮ ವಿದ್ಯಮಾನಗಳ ಮಹಾಪೂರದ ವರ್ಷವಾಗಿತ್ತು. ಜನವರಿಯಲ್ಲಿ ತ್ರಿಪುರಾ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎಡರಂಗ ಭರ್ಜರಿ ಜಯಭೇರಿ ಬಾರಿಸಿತು. ಒಟ್ಟು 60 ಸ್ಥಾನಗಳ ಪೈಕಿ 56 ರಲ್ಲಿ ಅದು ಗೆದ್ದಿತು. ತ್ರಿಪುರಾದಲ್ಲಿ ಕಾಂಗ್ರೆಸ್ ಹಿಂದೆಂದೂ ಇಂತಹ ಹೀನಾಯ ಸೋಲನ್ನು ಅನುಭವಿಸಿರಲಿಲ್ಲ. ಪಶ್ಚಿಮ ಬಂಗಾಳದಲ್ಲಿ ನಾವು ಕೈಗೆತ್ತಿಕೊಂಡ ಕಾರ್ಯಕ್ರಮ ತ್ರಿಪುರಾ ಜನರ ಮೇಲೆ ಭಾರಿ ಪ್ರಭಾವ ಬೀರಿತ್ತು. ಅದು ಚುನಾವಣೆ ಫಲಿತಾಂಶದಲ್ಲಿ ಪ್ರತಿಬಿಂಬಿತವಾಗಿತ್ತು.

ಪಶ್ಚಿಮ ಬಂಗಾಳದಲ್ಲಿ ಎಡರಂಗ ಅಧಿಕಾರಕ್ಕೆ ಬಂದ ನಂತರ ಪಕ್ಷದ ರಾಜ್ಯ ಸಮ್ಮೇಳನ ಮೊದಲ ಬಾರಿಗೆ 1978 ರಲ್ಲಿ ನಡೆಯಿತು. ಫೆಬ್ರವರಿ 5 ರಿಂದ 9 ರವರೆಗೆ ಶಿಶಿರ ಮಂಚದಲ್ಲಿ ನಡೆದ ಈ 13ನೇ ರಾಜ್ಯ ಸಮ್ಮೇಳನದಲ್ಲಿ ಎಡರಂಗವನ್ನು ಪ್ರತಿ ಹಂತದಲ್ಲಿ ಬಲಪಡಿಸಲು ನಿರ್ಧರಿಸಲಾಯಿತು.

ಪಕ್ಷದ 10ನೇ ಮಹಾಧಿವೇಶನ ಏಪ್ರಿಲ್ 2 ರಿಂದ 8 ರವರೆಗೆ ಜಲಂಧರ್‌ನಲ್ಲಿ ನಡೆಯಿತು. ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಸರಕಾರ ಆಡಳಿತ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಈ ಮಹಾಧಿವೇಶನ ಮಹತ್ವದ್ದಾಗಿತ್ತು. ಉತ್ತರ ಭಾರತದಲ್ಲಿ ನಮ್ಮ ತಳವನ್ನು ಬಲಪಡಿಸಲು ಹಾಗೂ ನಮ್ಮ ಪಕ್ಷದ ಸಂಘಟನಾತ್ಮಕ ದೌರ್ಬಲ್ಯಗಳನ್ನು ಸರಿಪಡಿಸಿಕೊಳ್ಳುವ ಮಾರ್ಗೋಪಾಯಗಳ ಚರ್ಚೆಗಾಗಿ ವಿಶೇಷ ಪ್ಲೀನಮ್ ನಡೆಸಲು ನಿರ್ಧರಿಸಿದೆವು.

1978 ರ ಡಿಸೆಂಬರ್ 26 ರಿಂದ 30 ರವರೆಗೆ ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಸಾಲ್ಕಿಯಾದಲ್ಲಿ ಪ್ಲೀನಂ ನಡೆಯಿತು. ಅದರಲ್ಲಿ ಪಕ್ಷಕ್ಕೆ 'ಜನತಾ ಕ್ರಾಂತಿಕಾರಿ'ಯ ಸ್ವರೂಪವನ್ನು ನೀಡುವ ಮಹತ್ವದ ನಿರ್ಧಾರವನ್ನು ಕೈಗೊಳ್ಳಲಾಯಿತು.

ದಂಡಕಾರಣ್ಯ ನಿರಾಶ್ರಿತರ ಪ್ರಶ್ನೆ ಹಾಗೂ ಪ್ರವಾಹ ನಮ್ಮ ಮುಂದೆ ಕಠಿಣ ಸವಾಲಾಗಿ ಬರತೊಡಗಿತು. ದಂಡಕಾರಣ್ಯದಲ್ಲಿ ನೆಲಸಿದ 1.5 ಲಕ್ಷಕ್ಕೂ ಹೆಚ್ಚು ನಿರಾಶ್ರಿತರನ್ನು 1978 ರ ಏಪ್ರಿಲ್‌ನಲ್ಲಿ ಸುಂದರಬನ ಪ್ರದೇಶದ ಮರಿಚ್‌ಝುಪಿಗೆ ಸ್ಥಳಾಂತರಗೊಂಡರು. ಸ್ಥಾಪಿತ ಹಿತಾಸಕ್ತರು ಮತ್ತು ಪತ್ರಿಕೆಗಳ ಒಂದು ವಿಭಾಗ ಇವರನ್ನು ಬಳಸಿಕೊಂಡಿತು. ಕೇಂದ್ರ ಸರಕಾರ ಕೂಡ ನಿರಾಶ್ರಿತರ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ.

ಔಷಧ ಮತ್ತು ಕುಡಿಯುವ ನೀರನ್ನು ಸರಬರಾಜು ಮಾಡುವ ಮೂಲಕ ನಿರಾಶ್ರಿತರಿಗೆ ನೆರವಾಗಲು ನಾವು ಯತ್ನಿಸಿದೆವು. ಆದರೆ ಇದು ಬಹಳ ಕಷ್ಟದ ಕೆಲಸ ಹಾಗೂ ನಮಗೆ ನಿರ್ವಹಣೆ ಮಾಡಲು ಆಗದಂತ ಅಗಾಧ ಪ್ರಮಾಣದ್ದು ಎಂದು ನಮಗೆ ಸ್ಪಷ್ಟವಾಗತೊಡಗಿತು.

ಪ್ರಧಾನಿ ಮೊರಾರ್ಜಿ ದೇಸಾಯಿ ನೆರವು ನೀಡುವ ಒಲವು ತೋರಿದರು. ದಂಡಕಾರಣ್ಯಕ್ಕೆ ಮರಳುವವರಿಗೆ ಆರ್ಥಿಕ ಸಹಾಯ ನೀಡುವುದಾಗಿ ತಿಳಿಸಿದರು. ನಿರಾಶ್ರಿತರ ಜತೆನಾನು ಕೂಡ ಮಾತನಾಡಿದೆ. ನಮ್ಮ ದಣಿವರಿಯದ ಪ್ರಯತ್ನಗಳ ಫಲವಾಗಿ 1979 ರ ಮೇ ಹೊತ್ತಿಗೆ ಎಲ್ಲ ನಿರಾಶ್ರಿತರು ದಂಡಕಾರಣ್ಯಕ್ಕೆ ಮರಳಿದುರ.

1978 ರ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ರಾಜ್ಯದಲ್ಲಿ ಬಂದ ನೆರ ಹಾವಳಿಯಿಂದ ಆಗಿನ 16 ಜಿಲ್ಲೆಗಳ ಪೈಕಿ 12 ಜಿಲ್ಲೆಗಳ ಒಂದೂವರೆ ಕೋಟಿಗೂ ಹೆಚ್ಚು ಜನರು ತೊಂದರೆ ಪಟ್ಟರು. 2000 ಕೋಟಿ ರೂಪಾಯಿಯಷ್ಟು ಆಸ್ತಿಪಾಸ್ತಿ ನಷ್ಟವಾಯಿತು. ಬಹುತೇಕ 28 ಲಕ್ಷ ಎಕರೆ ಕೃಷಿ ಜಾಮೀನು ಮುಳುಗಡೆ ಆಯಿತು.ಪ್ರಧಾನಮಂತ್ರಿ ವೈಮಾನಿಕ ಸಮೀಕ್ಷೆ ನಡೆಸಿದರೂ ಕೇಂದ್ರ ಸರಕಾರ ಹೆಚ್ಚಿನ ನೆರವನ್ನೇನೂ ಕೊಡಲಿಲ್ಲ.

ಪ್ರವಾಹ ಸಂತ್ರಸ್ತರ ಪ್ರಾಣ ಕಾಪಾಡಲು ಹೋಗಿ ನಮ್ಮ ಪಕ್ಷದ ಆರು ಸಂಗಾತಿಗಳು ಪ್ರಾಣ ಕಳೆದುಕೊಂಡರು. ಜನರು ಕೂಡ ಪ್ರವಾಹ ಪರಿಹಾರ ಕಾರ್ಯದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದರು. ಆದರೆ, ಪ್ರವಾಹ ಪರಿಹಾರದಲ್ಲಿ ನಾವು ಪಕ್ಷಪಾತ ಮಾಡುತ್ತಿದ್ದೇವೆ ಎಂದು ಆಪಾದನೆ ಮಾಡುವುದನ್ನು ಕಾಂಗ್ರೆಸ್ ಪಕ್ಷ ಮತ್ತು ಪತ್ರಿಕೆಗಳು ನಿಲ್ಲಿಸಲಿಲ್ಲ. ಅದೃಷ್ಟವಶಾತ್ ಜನರು ಈ ಅಪಪ್ರಚಾರದ ಆಟದ ಉದ್ದೇಶವನ್ನು ತಿಳಿದುಕೊಂಡಿದ್ದರು.


ಪಕ್ಷದಿಂದ ಇಂದಿರಾಗಾಂಧಿ ವಜಾ

ಲೋಕಸಭೆ ಚುನಾವಣೆಯ ಹಿನ್ನೆಡೆಗೆ ನೈತಿಕ ಹೊಣೆಹೊತ್ತು, ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಇಂದಿರಾಗಾಂಧಿ ರಾಜಿನಾಮೆ ನೀಡಿದರು. ಕಾಂಗ್ರೆಸ್‌ನಲ್ಲಿ ಒಡಕು ಉಂಟಾಯಿತು. ಅಧ್ಯಕ್ಷ ಸ್ಥಾನಕ್ಕೆ ಭಿನ್ನಮತೀಯರು ಸಿದ್ಧಾರ್ಥ ಶಂಕರ ರಾಯರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದರು. ಬ್ರಹ್ಮಾನಂದ ರೆಡ್ಡಿ ಇಂದಿರಾಬಣದ ಅಭ್ಯರ್ಥಿಯಾಗಿದ್ದರು. ಆರುವರೆಗೆ ಇಂದಿರಾ ಕಟಾಬೆಂಬಲಿಗರಾಗಿದ ರಾಯ್ ತಿರುಗಿಬಿದು ಆಕೆಯ ಕಟು ಟೀಕಾಕಾರರಾಗಿದ್ದರು. ಎಐಸಿಸಿ ಅಧ್ಯಕ್ಷ-ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬ್ರಹ್ಮಾನಂದ ರೆಡ್ಡಿ ಸಾಕಷ್ಟು ಮತಗಳ ಅಂತರದಿಂದ ಗೆದ್ದರು. ಆದರೆ ಇಂದಿರಾಗಾಂಧಿ ಆದೇಶಗಳನ್ನು ಪಾಲಿಸದಿರಲು - ಆಕೆಯ ಇಷ್ಟಾನಿಷ್ಟಗಳಿಗೆ ತಾಳ ಹಾಕದಿರಲು ಬ್ರಹ್ಮಾನಂದ ರೆಡ್ಡಿ ನಿರ್ಧರಿಸಿದರು. ಹಾಗಾಗಿ ಸಹಜವಾಗಿಯೇ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕುವ ಯತ್ನ ಆರಂಭವಾಯಿತು. ಪಕ್ಷ ವಿರೋಧಿ ಚಟುವಟಿಕೆಗಳ ಆರೋಪದ ಮೇಲೆ ಇಂದಿರಾಗಾಂಧಿಯನ್ನು ಪಕ್ಷದಿಂದ ವಜಾ ಮಾಡಲಾಯಿತು.

1978 ರ ಜನವರಿ 1 ರಂದು ಆಕೆ ಕಾಂಗ್ರೆಸ್(ಐ) ಪಕ್ಷವನ್ನು ಸ್ಥಾಪಿಸಿದರು. ಬಹುತೇಕ ಸಂಸತ್ ಸದಸ್ಯರು ಬ್ರಹ್ಮಾನಂದ ರೆಡ್ಡಿ, ವೈ.ಬಿ.ಚವ್ಹಾಣ್ ಮತ್ತು ಸ್ವರಣ್ ಸಿಂಗ್ ನೇತೃತ್ವದ ಬಣದಲ್ಲಿದ್ದರು. ಹೀಗಾಗಿ ಚವಾಣ್ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರಾದರು.

(ಮುಂದುವರಿಯುವುದು)

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವ ಕುಂದಾಪುರ

ಧಾರವಾಹಿ: 65

ಕಳೆದ ಸಂಚಿಕೆಯಲ್ಲಿ 1977ರ ಚುನಾವಣೆಯಲ್ಲಿ ಜನತಾ ಪಕ್ಷದೊಂದಿಗೆ ಮುರಿದುಬಿದ್ದ ಹೊಂದಾಣಿಕೆ, ಎಡರಂಗದ ಐತಿಹಾಸಿಕ ಜಯ ಹಾಗೂ ಮುಖ್ಯಮಂತ್ರಿಯಾಗಿ ಜ್ಯೋತಿಬಸು ಪ್ರಮಾಣವಚನ ಸ್ವೀಕಾರ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಎಡರಂಗದ ಅಧ್ಯಕ್ಷರಾಗಿ ಪ್ರಮೋದ್ ದಾಸ್ ಗುಪ್ತ, ಎಡರಂಗ ಸರ್ಕಾರದ 21 ಅಂಶಗಳ ಕಾರ್ಯಕ್ರಮ. ಪಂಚಾಯತ್ ವ್ಯವಸ್ಥೆಗೆ ಪುನರ್ ರೂಪನೆ, ಆಪರೇಷನ್ ಬರ್ಗಾ, ತ್ರಿಪುರದಲ್ಲೂ ಎಡರಂಗದ ಜಯಭೇರಿ. ಕಾಂಗ್ರೆಸ್‌ನಿಂದ ಇಂದಿರಾಗಾಂಧಿ ಉಚ್ಚಾಟಣೆ ಈ ಬಗ್ಗೆ ಓದಿ.

ಧನ್ಯವಾದಗಳು ತಮಗೆ

ಆತ್ಮೀಯರೇ,

ಹೊಸ ಸ್ವರೂಪಕ್ಕೆ ಹೊಂದಿಕೊಂಡು ಹೊಸ ಹೆಸರು ನೋಡಿಸಲು ನಾವು ಮಾಡಿದ ಮನವಿಗೆ ರಾಜ್ಯದ ಎಲ್ಲೆಡೆಗಳಿಂದ ಅನೇಕ ಹೊಸ ಹೆಸರು ಹಾಗೂ ಉಪಯುಕ್ತ ಸಲಹೆಗಳು ದಿನದ ಗಡುವುದಾಟಿಯೂ ಹರಿದು ಬಂದಿವೆ. ಬರುತ್ತಲೇ ಇವೆ. ಇವೆಲ್ಲವನ್ನು ಜೂನ್ ಮೊದಲ ವಾರದಲ್ಲಿ ಪರಿಷ್ಕರಿಸಿ, ಅಂತಿಮಗೊಳಿಸಲಾಗುತ್ತಿದೆ.

ಕಾಳಜಿ, ಅಭಿಮಾನ, ಪ್ರೀತಿ ಇರಿಸಿ ಸ್ಪಂದಿಸಿದ ತಮಗೆಲ್ಲಾ ಧನ್ಯವಾದಗಳು.

ಸಂಪಾದಕರು.

ಮಂಗಳೂರು-ಮೇ 16-18

ಅಳಿಸಲಾಗದ ಹೆಜ್ಜೆ ಮೂಡಿಸಿದ ಮಹಿಳಾ ಸಮ್ಮೇಳನ

ವರದಿ : ಯಮುನಾ ಗಾಂವ್ಕರ್

ಅರಬ್ಬೀ ಸಮುದ್ರದ ಸುಂದರ ಕರಾವಳಿ ತಟವೂ, ಕರ್ನಾಟಕ ರಾಜ್ಯದ ಹಣಕಾಸು ಸಂಸ್ಥೆ-ಉದ್ಯಮಗಳ ಪ್ರಮುಖ ನಗರವೂ ಆದ ದ.ಕ. ಜಿಲ್ಲೆಯ ಮಂಗಳೂರು ಐತಿಹಾಸಿಕವಾಗಿ ತುಳುನಾಡೆಂದೇ ಮಹತ್ವ ಮತ್ತು ಖ್ಯಾತಿಗಳಿಸಿದೆ. ರಾಣಿ ಅಬ್ಬಕ್ಕ, ಸಾಮಾಜಿಕವಾಗಿ ಬಹಿಷ್ಕಾರಕ್ಕೊಳಗಾಗಿ, ಎದುರಿಸಿ, ಕಷ್ಟಗಳನ್ನು ಲೆಕ್ಕಿಸದೇ ಬದುಕಿನುದ್ದಕ್ಕೂ ತನ್ನತನವನ್ನು ಸಮರ್ಥಿಸುತ್ತಾ ಬದುಕಿದ, ಬಾಳಿದ 'ಸಿರಿ' ಮತ್ತು ಎಲ್ಲ ರೀತಿಯ ಸಾಂಪ್ರದಾಯಿಕ ಪದ್ಧತಿಯನ್ನು ದೂರಸರಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಕಮಲಾದೇವಿ ಚಟ್ಟೋಪಾಧ್ಯಾಯರಂಥ ವಿಶಿಷ್ಟ ಮಹಿಳೆಯರನ್ನು ನಾಡಿಗೆ ಪರಿಚಯಿಸಿದ್ದುದು ಮಂಗಳೂರು. ದ.ಕ. ಜಿಲ್ಲೆ ಅವಿಭಾಜಿತ ವಾಗಿದ್ದಾಗಿನಿಂದಲೂ ಸಾಹಿತ್ಯ, ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಗಳಲ್ಲಿ ಅಷ್ಟೇ ಅಲ್ಲ ಸಾಮಾಜಿಕ ಸಮಾನತೆಯಲ್ಲಿ ಸಾಕ್ಷರತಾ ಪ್ರಮಾಣದಲ್ಲಿ ಮುಂದಿದೆ. ಇದರಲ್ಲಿ ಕೂಡ ಮಹಿಳೆಯರದ್ದೇ ಮೇಲುಗೈ ಕೂಡ.

ಜಿಲ್ಲೆಯ ಉದ್ದಕ್ಕೂ ಹಂಚು ಕಾರ್ಖಾನೆ ಹಾಗೂ ಗೇರು ಬೀಜ ಸಂಸ್ಕರಣೆಗಳಲ್ಲಿ ವಾಣಿಜ್ಯ ವ್ಯವಹಾರ, ತರಕಾರಿ ಬೆಳೆಯುವಿಕೆ, ಮೀನಿನ ಮಾರಾಟ, ಗೃಹೋದ್ಯಮದಂತಿರುವ ಬೀಡಿ ಉದ್ಯಮ, ಕೃಷಿ ವಲಯಗಳಲ್ಲಿ ಮಹಿಳೆಯರೇ ಸ್ವತಃ ಕೆಲಸ ನಿಭಾಯಿಸುತ್ತಾರೆ. ಹಾಗೆಯೇ ಈ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬೆಳೆದಿದೆ. ಸಂಪನ್ಮೂಲಗಳ ಸದ್ಬಳಕೆಗೆ ಜಿಲ್ಲೆಯ ಪ್ರಜ್ಞಾವಂತರು ಹೆಚ್ಚು ಒತ್ತು ನೀಡುತ್ತಾರೆ.

ಜಿಲ್ಲೆಯಲ್ಲಿ ಜನಪರ ಚಳುವಳಿ ವಿಶಾಲವಾಗಿ ಬೆಳೆಯುತ್ತಿದೆ. ವಿದ್ಯಾರ್ಥಿ, ಯುವಜನ, ರೈತ-ಕಾರ್ಮಿಕರಾದಿಯಾಗಿ ಮಹಿಳೆಯರ ಪರ್ಯಂತ ವಿವಿಧ ಪ್ರಜಾಸತ್ತಾತ್ಮಕ ಸಾಮೂಹಿಕ ಸಂಘಟನೆಗಳು ದಿನೇ ದಿನೇ ಬಲಿಷ್ಟಗೊಳ್ಳುತ್ತಿದೆ.

ಇನ್ನೊಂದೆಡೆ ಜಾಗತೀಕರಣದ ದುಷ್ಪರಿಣಾಮಗಳಿಂದಾಗಿ ಈ ಜಿಲ್ಲೆಯ ಹಲವಾರು ಹಂಚಿನ ಕಾರ್ಖಾನೆಗಳು ಮುಚ್ಚಿವೆ. ಸರ್ಕಾರದ ನಿಯಮದಿಂದಾಗಿ ಬೀಡಿ ಉದ್ಯಮವು ಸಂಕಷ್ಟದಲ್ಲಿದೆ. ಸಾವಿರಾರು ಸಂಖ್ಯೆಯಲ್ಲಿ ಹಳ್ಳಿಯಲ್ಲಿ ಹಾಗೂ ನಗರದಲ್ಲಿ ನಿರುದ್ಯೋಗ ಹೆಚ್ಚುತ್ತಿದೆ. ಇದರಿಂದಾಗಿ ಮಹಿಳೆಯರು ತುಂಬಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ದಿನಂಪ್ರತಿ ಸ್ತ್ರೀಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿದೆ. ಹೆಣ್ಣು ಮಕ್ಕಳ ಸಂಖ್ಯೆ ಕೂಡ ಕಡಿಮೆಯಾಗುತ್ತಿರುವುದು 2001 ರ ಜನಗಣತಿ ದಾಖಲೆಯಿಂದ ಶ್ರುತಪಟ್ಟಿದೆ.

ಆಗೊಮ್ಮೆ ಈಗೊಮ್ಮೆ ಜಿಲ್ಲೆಯ ಪ್ರಮುಖ ಪ್ರದೇಶಗಳಲ್ಲಿ ಕೋಮುಗಲಭೆಗಳು ರಾಜ್ಯದ ಗಮನವನ್ನು ಸೆಳೆದಿವೆ. ತಾವೇ ಸಂಸ್ಕೃತಿ ರಕ್ಷಣೆಯ ಗುತ್ತಿಗೆದಾರರೆಂದು ಪುಂಕಾನುಪುಂಕವಾಗಿ ಮಾತಾಡುವ ಕೋಮುವಾದಿಗಳು ಈ ಜಿಲ್ಲೆಯಲ್ಲಿ ಇದ್ದಾರೆ. ಸಮಸ್ಯೆಗಳನ್ನು ಸೃಷ್ಟಿಸಿ ಜನಜೀವದೊಂದಿಗೆ ಚೆಲ್ಲಾಟವನ್ನು ಮಾಡುತ್ತಾರೆ. ಮಹಿಳೆಯರ ಮನಸುಗಳಿಗೆ ವಿಷವುಣಿಸಲು ಮುಂದಾಗಿದ್ದಾರೆ.

ಆದರೆ ಕ್ಷುಲ್ಲಕ ವಿಷಯಗಳಿಗೆ ತಲೆ ಹಾಕದೆ ಇರುವ ಜೀವಪರ ಮನಸ್ಸುಗಳೂ ಬಹಳಷ್ಟದ್ದವು ದ.ಕ. ಜಿಲ್ಲೆಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 4ನೇ ಕರ್ನಾಟಕ ರಾಜ್ಯ ಸಮ್ಮೇಳನವು ದಿ. 19.5.2001 ರಂದು ಪ್ರಾರಂಭಗೊಂಡಿತು.

ರಾಜ್ಯದ ಮೇಲ್ತುದಿ ಬೀದರದಿಂದಾರಭ್ಯ ಕೆಳಗಡೆ ಮಲೆನಾಡು, ಕರಾವಳಿ ಜಿಲ್ಲೆಗಳಿಂದ ಎಲ್ಲ ಭಾಗಗಳಿಂದ ವಿವಿಧ ರೀತಿಯ ವೈಶಿಷ್ಟ್ಯದಿಂದ ಕೂಡಿದ ಭಾಷಾ ವೈವಿಧ್ಯತೆಗಳಿರುವ ಸುಮಾರು 200 ಜನ ಮಹಿಳೆಯರು ಸಮ್ಮೇಳನಕ್ಕೆ ಪ್ರತಿನಿಧಿ-ವೀಕ್ಷಕರಾಗಿ ಬಂದಿದ್ದಾರೆ. ಜೊತೆಗೆ ತಾವು ಅನುಭವಿಸುತ್ತಿರುವ ಬಡತನದ ಬೇಗೆ, ದೌರ್ಜನ್ಯ, ಹಿಂಸೆ, ಕಿರುಕುಳದ ಕರಾಳತೆಗಳನ್ನು ಉಳಿದ ಸಹೋದರಿಯರ ಜೊತೆ ಹಂಚಿಕೊಂಡು ಏನಾದರೂ ಪರಿಹಾರ ಕಾಣಬೇಕೆಂದು ಬಂದ ಹಲವಾರು ಮುಖಗಳಿವೆ.

ರೈತ-ಕೃಷಿ ಕೂಲಿಕಾರ ಮಹಿಳೆಯರು, ಬೇರೆಯವರ ಮನೆಗಳಲ್ಲಿ ಮುಸುರೆ ತಿಕ್ಕುವವರು, ಗೃಹಿಣಿಯರು, ಬ್ಯಾಂಕ್, ಅಂಗನವಾಡಿ, ವಿಮೆ, ಪತ್ರಿಕೆಗಳಲ್ಲಿ ಕೆಲಸ ಮಾಡುವವರು ಸಂಘಟಿತ-ಅಸಂಘಟಿತ ವಿಭಾಗದ ಮಹಿಳಾ ಪ್ರತಿನಿಧಿಗಳು, ವಕೀಲರು, ಬಡತನದ ಬೇಗೆಯಲ್ಲಿ ಬೆಂದು ಬಸವಳಿದ ಲಂಬಾಣಿ ತಾಂಡದವರು, ಚೂರು ಗಂಜಿ ನೀರಿಗೂ ದುಡಿದೇ ತಿನ್ನಬೇಕಾದವರು, ಸಾಮಾಜಿಕ ಕಟ್ಟುಪಾಡಿಗೆ ತಲೆಬಾಗಿ ತಮ್ಮ ದೇಹವನ್ನು ಮತ್ತೊಬ್ಬರ ಸುಖಕ್ಕೆ ದಾರೆ ಎರೆದು ಈಗ ಪರ್ಯಾಯ ಮಾರ್ಗಕ್ಕಾಗಿ ಹೋರಾಟದ ಹಾದಿಯಲ್ಲಿರುವ ದೇವದಾಸಿಯರು, ಬೀಡಿ ಕಟ್ಟುವ ಮಹಿಳಾ ಪ್ರತಿನಿಧಿಗಳು ಇಲ್ಲಿಗೆ ಬಂದಿದ್ದರು.



ಉದ್ಘಾಟನಾ ಸಮ್ಮೇಳನದಲ್ಲಿ ಮಾತನಾಡುತ್ತಿರುವ ಬೃಂದಾ ಕಾರಟ್, ಪಕ್ಕದಲ್ಲಿ ಮೈಥಿಲಿ , ಡಾ. ಚಿನ್ನಪ್ಪಗೌಡ, ಸಾರಾ ಅಬೂಬ್ಬರ್ ಮುಂತಾದವರು

ಜಾಗತೀಕರಣ : ಮಹಿಳಾ ಸಬಲೀಕರಣವಲ್ಲ ದುರ್ಬಲೀಕರಣ

ಇಂದಿನವರೆಗೂ ಸಾಗಿದ ಹಾದಿಯನ್ನು ವಿಮರ್ಶಿಸುತ್ತಾ ಮುಂದೆ ದಿಟ್ಟ ಹೆಜ್ಜೆಯಿಡಲು ರೂಪುರೇಷೆಗಳನ್ನು ತಯಾರಿಸಲು ಬಂದಂಥವರು ಪ್ರತಿನಿಧಿಗಳು. ಅಖಿಲ ಭಾರತ ಉಪಾಧ್ಯಕ್ಷರೂ, ಬರಹಗಾರ್ತಿಯೂ ಆದ ಸಂಗಾತಿ ಮೈಥಿಲಿ ಶಿವರಾಮನ್‌ರವರು ಸಮ್ಮೇಳನ ಉದ್ಘಾಟಿಸಿದರು. ಅವರು ಮಾತನಾಡುತ್ತಾ

"ಭಾರತ ಸರ್ಕಾರ ಈ ವರ್ಷವನ್ನು ಮಹಿಳಾ ಸಬಲೀಕರಣ(ಸಶಕ್ತೀಕರಣ) ವರ್ಷ ಎಂದು ಘೋಷಿಸಿದೆ. ಆದರೂ ದೇಶದ ತುಂಬೆಲ್ಲಾ ಒಂದು ಊಟಕ್ಕೆ ಚಡಪಡಿಸಿ ದೈಹಿಕವಾಗಿ ಅಬಲರಾಗಿರುವ ಸ್ತ್ರೀಯರಿರುವುದು ಕಟುವಾಸ್ತವ. ಮಹಿಳೆಗೆ ಆಹಾರ, ಸರಿಯಾದ ಶಿಕ್ಷಣ ಆ ಮೂಲಕ ಬೌದ್ಧಿಕ ಸಬಲತೆ ಆದಲ್ಲಿ ಉದ್ಯೋಗ ಸಿಕ್ಕಲ್ಲಿ ಆರ್ಥಿಕವಾಗಿ ಸಶಕ್ತೀಕರಣವಾಗಲು ಸಾಧ್ಯ. ಲಕ್ಷಾಂತರ ಕಾರ್ಮಿಕರಿಗೆ ಉದ್ಯೋಗ ಇಲ್ಲದೇ ದೇಶದೆಲ್ಲೆಡೆ ಹಿಂಸೆ, ಸಾವು, ಆತ್ಮಹತ್ಯೆ ಹೆಚ್ಚುತ್ತಿದೆ. ಆದರೆ ದುಡಿಯುವ ಜನ ಬೆಳೆದ ಧಾನ್ಯ ದಾಸ್ತಾನಾಗಿ ಆಹಾರ ಸಂಗ್ರಹಣಾ ಕೇಂದ್ರಗಳಲ್ಲಿ 5 ಸಾವಿರ ಕೋಟಿ ಟನ್ ಗೋದಾಮಿನಲ್ಲಿ ಹಾಳಾಗುತ್ತಿದೆ. ಹೊಟ್ಟೆಗೆ ಆಹಾರವಿಲ್ಲದೇ ಸಾಯುತ್ತಿರುವವರಿಗೆ ಧಾನ್ಯಗಳನ್ನು ಕಡಿಮೆ ಬೆಲೆಗೆ ಕೊಡುವುದರ ಬದಲು ಸಮುದ್ರಕ್ಕೆ ಎಸೆಯುವಂಥ ಶಿಫಾರಸ್ಸು ನೀಡುವ ಸಂಸದೀಯ ಸಮಿತಿಗಳು ಇವೆ. ಸರ್ಕಾರ ಈ ಮೂಲಕ ಬಡ-ಜನಸಾಮಾನ್ಯರ ಮೇಲೆ, ಅವರ ಜೀವದ ರಕ್ಷಣೆಯ ಬದಲು ಬರೆ ಎಳೆಯುತ್ತಿದೆ. ನಮ್ಮನ್ನಾಳುವವರ ನೀತಿಗಳು ಮಹಿಳೆಯರ ಜೀವವನ್ನು ಜರ್ಜರಿತವನ್ನಾಗಿಸಿದೆ. ಜೊತೆಗೆ ಜಾಗತೀಕರಣದ ನೀತಿಯಿಂದಾಗಿ ಕಾರ್ಖಾನೆಗಳು ಮುಚ್ಚಿ ಮಹಿಳೆಯರ ನಿರುದ್ಯೋಗ ಜಾಸ್ತಿ ಆಗಿದೆ. ಕರ್ನಾಟಕದಲ್ಲಿ ಕೂಡ ಈ ನೀತಿಯ ದುಷ್ಪರಿಣಾಮ ಮೊದಲು ಮಹಿಳೆಯರ ಮೇಲಾಗಿದೆ. ಬೀಡಿ, ಹಂಚು ಉದ್ಯಮವು ಅವಸಾನದ ಅಂಚಿನಲ್ಲಿದೆ. ಮುಕ್ತ ಆಮದಿನಿಂದಾಗಿ ಬೆಳೆಗೆ ಬೆಲೆ ಇಲ್ಲದೇ ಕೃಷಿ ದಿವಾಳಿಯತ್ತ ಸಾಗಿದೆ. ಹಾಗಾಗಿ ಜನಪರ ನೀತಿಯನ್ನು ಜಾರಿಗೆ ತರಲು ಮಹಿಳಾ ಚಳುವಳಿಯನ್ನು ಇನ್ನಷ್ಟು ಬಲಿಷ್ಟಗೊಳಿಸಿ ನಿರಂತರ ಹೋರಾಟಗಳನ್ನು ಬೆಳೆಸಲು ಕರೆ ನೀಡಿದರು.

ಇತ್ತೀಚಿಗೆ ಕರ್ನಾಟಕದಲ್ಲಿ ನೇಮಕ ಮಾಡಿದ 'ಟಾಸ್ಕ್ ಫೋರ್ಸ್ -ಒಂದು `Cenre for women politics' ಸಲುವಾಗಿ ವರದಿ ಮಾಡಿದ್ದು ಅರ್ಥಪೂರ್ಣವಾಗಿದ್ದರೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮಹಿಳೆಯರ ಪ್ರಮಾಣ ಜಾಸ್ತಿ ಇದ್ದು ತರಬೇತಿಯಿಲ್ಲದ ಕಾರಣ ಈ ಮಹಿಳೆಯರೆಲ್ಲ ಪುರುಷರ proxy condidates (ಪ್ರಾತಿನಿಧಿಕ ಅಭ್ಯರ್ಥಿ)ಯೇ ಆಗಿರುತ್ತಾರೆ. ಅರ್ಥಾತ್ ವಸ್ತುಶಃ ಪುರುಷರೇ ಆಡಳಿತ ನಡೆಸುತ್ತಾರೆ. ಆದರೆ ಮಹಿಳೆಯೇ ಪ್ರಜ್ಞಾಪೂರ್ವಕವಾದ ಸಾಮರ್ಥ್ಯದಿಂದ ಆಡಳಿತ ನಡೆಸಲು ಸಾಧ್ಯವಾಗಬೇಕು. ಮಹಿಳೆ ಎಷ್ಟೇ ಸಬಲಳಾಗಲು ಸೈದ್ಧಾಂತಿಕವಾಗಿ ತಯಾರಾದರೂ ಸ್ಥಾನಿಕ ಸಮಾಜವಿರೋಧಿ ಶಕ್ತಿಗಳು ಇದನ್ನು ಸಹಿಸಲ್ಲ ಎನ್ನುತ್ತಾ ಕ್ರೂರವಾದ ಕೊಲೆಯಲ್ಲಿ ಪರ್ಯವಸಾನವಾದ ಮಧುರೈನ ಕೌನ್ಸಿಲರ್ ಲೀಲಾವತಿಯವರನ್ನು ನೆನಪಿಸಿದರು.

ಶ್ಲಾಘನೀಯ ಹೋರಾಟ

ದುಡಿಯುವ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯದ ಗಂಭೀರತೆ ಎಡೆಗೆ ಸಮ್ಮೇಳನದ ಗಮನ ಸೆಳೆದ ಅವರು ಸರ್ವೋಚ್ಚ ನ್ಯಾಯಾಲಯವು ತೀರ್ಪಿತ್ತಿದ್ದನ್ನು ಎಲ್ಲ ಸರ್ಕಾರಗಳೂ ಪಾಲಿಸಬೇಕು. ತಮಿಳುನಾಡಿನಲ್ಲಿ ಸರ್ಕಾರಿ ಆದೇಶದ ಮೂಲಕ ಮಹಿಳಾ ದೌರ್ಜನ್ಯದ ದೂರು ದಾಖಲು ಪಡಿಸಿಕೊಳ್ಳಲು ಅನುಮತಿ ನೀಡಿ ಇನ್ನೊಂದು ರೀತಿಯಿಂದ ಈ ಹಕ್ಕನ್ನೂ ಕಸಿದುಕೊಳ್ಳಲಾಗಿದೆ. ಅಪರಾಧ ಸಾಬೀತಾಗದಿದ್ದಲ್ಲಿ ದೌರ್ಜನ್ಯಕ್ಕೊಳಗಾದ ಮೇಲೆ ಕ್ರಮ ಕೈಗೊಳ್ಳಬಹುದಾದ ವಿರೋಧಾಬಾಸ ಪೂರ್ಣ ಸರ್ಕಾರಿ ಆದೇಶ ಬಂದಿರುವುದು ವಿಪರ್ಯಾಸ. ಈ ಆದೇಶವನ್ನು ಹಿಂದಕ್ಕೆ ಹಾಕಲು ಮಹಿಳಾ ಚಳುವಳಿ ಮಧ್ಯ ಪ್ರವೇಶಿಸಬೇಕು ಎನ್ನುತ್ತಾ ಕರ್ನಾಟಕದಲ್ಲಿ ಜೆಎಂಎಸ್ ಬಗೆ ಬಗೆಯ ಕಾರ್ಯಕ್ರಮ, ಹೋರಾಟ ಮಾಡಿ ಸಾಧನೆ ಮಾಡಿದ್ದನ್ನು ಶ್ಲಾಘಿಸಿದರು.

ಸ್ತ್ರೀ ವಿರೋಧಿ ನೆಲೆಗಳು - ಸೂಕ್ಷ್ಮ ಅವಲೋಕನ

ಅತಿಥಿಗಳಾದ ಮಂಗಳೂರು ವಿ.ವಿ. ಪ್ರಸಾರಾಂಗ ನಿರ್ದೇಶಕರಾದ ಡಾ|| ಚಿನ್ನಪ್ಪ ಗೌಡರು ಬಗೆ ಬಗೆಯಾಗಿ ಮಹಿಳೆಯ ಸಂಕಷ್ಟಗಳನ್ನು ಸ್ತ್ರೀಪರ ಕಾಳಜಿಯನ್ನು (ಒಬ್ಬ ಪುರುಷನಾಗಿ) ಹಂಚಿಕೊಂಡರು. ಬೇರೆಯವರು ಮನೆಯಲ್ಲಿ ಬಟ್ಟೆ ಒಗೆಯುವವಳ ಮಗನಾಗಿ ಬಡತನದಲ್ಲೇ ಕುಟುಂಬ ನಿರ್ವಹಣೆ ಮಾಡಿ ತನ್ನನ್ನು ಓದಿಸಿದ ತನ್ನ ತಾಯಿಯ ಬಗ್ಗೆ ಪ್ರಸ್ತಾಪಿಸಿದ ಅವರು, ಪುರುಷಪ್ರಧಾನ ವ್ಯವಸ್ಥೆಯು ಖಂಡಿತವಾಗಿಯೂ ಮರು ವಿಮರ್ಶಿಸಿ ಶೋಷಣೆ ಮಾಡುವ ಈ ವ್ಯವಸ್ಥೆಯನ್ನು ದೂರೀಕರಿಸಬೇಕಿದೆ. ಏಕೆಂದರೆ ಇಂದು ಶಿಕ್ಷಣ ಸಂಸ್ಥೆ ಕಟ್ಟುವವರು ಹುಡುಗರ ದೃಷ್ಟಿಯಿಂದಲೇ ನೋಡುತ್ತಾರೆ.

ಶುಚಿತ್ವ, ಶೌಚಾಲಯವಿಲ್ಲದ ಶೈಕ್ಷಣಿಕ ವ್ಯವಸ್ಥೆ ರೂಪಿಸಿದಾಗಲೇ ಹೆಣ್ಣು ಮನಸ್ಸಿನ ಮೇಲೆ ಅಗಾಧ ಪರಿಣಾಮ ಹಾಗೂ ಅಭದ್ರತೆ ಪ್ರಾರಂಭವಾಗುತ್ತದೆ. ಈ ಹಂತದಲ್ಲೇ ಆತ್ಮವಿಶ್ವಾಸ, ಸ್ವಾವಲಂಬನೆ ಮೂಡಿಸದ ಜೀವಪರ ವಾತಾವರಣ ಇಲ್ಲದಲ್ಲಿ ಮಹಿಳಾ ವಿಮೋಚನೆಗೆ ತೊಡಕಾಗುತ್ತದೆ. ಜೊತೆಗೆ ನಮ್ಮ ಮಕ್ಕಳು ಕನಸು ಕಾಣಲು ಅರ್ಹ ವಾತಾವರಣ ಇಲ್ಲದಿದ್ದ, ದುಡಿಯಲು ಮನಸ್ಸಿದ್ದು ಉದ್ಯೋಗ ಇಲ್ಲದ ಮನುಷ್ಯ ಸಂಬಂಧಕ್ಕೆ ಮಹತ್ವ ನೀಡದ ಉದಾರೀಕರಣವನ್ನು ಹಿಮ್ಮೆಟ್ಟಿಸದಿದ್ದರೆ ಬದಲಾವಣೆ ಅಸಾಧ್ಯ ಎಂದರು.

ನೂತನರಾಜ್ಯ ಪದಾಧಿಕಾರಿಗಳು

ಅಧ್ಯಕ್ಷರು	ನೀಲಾ ಕೆ.
ಉಪಾಧ್ಯಕ್ಷರು	ಎಸ್.ವರಲಕ್ಷ್ಮಿ
	ಎಸ್.ಸತ್ಯಾ
	ಸುರೇಖ ರಜಪೂತ
	ಪದ್ಮಿನಿ
	ಯಶೋಧ ವಿ.ಎಸ್.
ಪ್ರಧಾನ ಕಾರ್ಯದರ್ಶಿ	ಕೆ.ಎಸ್.ವಿಮಲ
ಸಹಕಾರ್ಯದರ್ಶಿಗಳು	ಪ್ರಭಾ ಎಸ್.
	ಅಮರುನ್ನೀಸಾ
	ಜಯಲಕ್ಷ್ಮಿ
	ಗಂಗಮ್ಮ ಬಿರಾದಾರ
	ಗೌರಮ್ಮ
ಖಜಾಂಜಿ	ಶಾರದಾ ಕೆ.ಎಸ್.

ವಿವರ ವರದಿ ಮುಂದಿನ ವಾರ

ಪುಟ 10 ನ್ನೂ ನೋಡಿ

ಮಹಿಳೆಯರ ಹಿತರಕ್ಷಣಯಲ್ಲಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ದೇಶಾದ್ಯಂತ 57 ಲಕ್ಷ ಸದಸ್ಯತ್ವ ಹೊಂದಿದೆ. ದೇಶದ ಎಲ್ಲಾ ರಾಜ್ಯಗಳಲ್ಲಿ ಸಂಘಟನಾ ಜಾಲವನ್ನು ಹೊಂದಿದೆ. ಕರ್ನಾಟಕದಲ್ಲಿ 15 ಜಿಲ್ಲೆಗಳಲ್ಲಿ 14 ಸಾವಿರ ಸದಸ್ಯತ್ವ ಹೊಂದಿರುವ ಪ್ರಗತಿಪರ ದೃಷ್ಟಿಕೋನದಿಂದ ಮಹಿಳೆಯರ ಸಮಸ್ಯೆಯನ್ನು ನಿವಾರಿಸಲು ಹೋರಾಟ ಮಾಡುವ, ಅವರ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸುವ ಏಕೈಕ ಮಹಿಳಾ ಸಂಘಟನೆ ಎಂದರೆ ಅತಿಯಲ್ಲ.

ಪ್ರಜಾಪ್ರಭುತ್ವ, ಸಮಾನತೆ, ಮಹಿಳಾ ವಿಮೋಚನೆಯ ಘೋಷಣೆಗಳೊಂದಿಗೆ ಎಲ್ಲ ಸ್ತರಗಳ ಮಹಿಳೆಯರನ್ನು ತನ್ನ ಸಂಘಟನೆಯಲ್ಲಿ ಸದಸ್ಯರನ್ನಾಗಿ ಜನವಾದಿ ಮಹಿಳಾ ಸಂಘಟನೆಯಲ್ಲಿ ಸದಸ್ಯರನ್ನಾಗಿ ಜನವಾದಿ ಮಹಿಳಾ ಸಂಘಟನೆ ಸ್ವೀಕರಿಸುತ್ತದೆ. ಜೆ.ಎಂ.ಎಸ್. ನ ಇತ್ತೀಚಿನ ಮುಖ್ಯ ಹೋರಾಟಗಳೆಂದರೆ ಮಹಿಳೆಯರಿಗೆ ಅಪಾಯಕಾರಿಯಾದ ಗರ್ಭನಿರೋದಕ ಕ್ವಿನಕ್ರೀನ್ ವಿರುದ್ಧ ಯಶಸ್ವಿ ಹೋರಾಟ, ಮಹಿಳೆಯರನ್ನು ಸರಕಾಗಿ ಲಂಬಿಸುವ ಗ್ರಾಹಕ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವಿಶ್ವಸುಂದರಿ ಸ್ಪರ್ಧೆ ವಿರುದ್ಧ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ, ಬಡತನ ಮತ್ತು ಹಿಂಸೆಯನ್ನು ವಿರೋಧಿಸಿ ಕಳೆದ 2000ನೇ ಇಸ್ವಿಯಲ್ಲಿ ಮಾರ್ಚ್ 8 ರಿಂದ ಅಕ್ಟೋಬರ್ 17 ರ ವರೆಗೆ ರಾಜ್ಯದ ಪ್ರಮುಖ ಭಾಗಗಳಲ್ಲಿ ವ್ಯಾಪಕ ಪ್ರತಿಭಟನೆ ನಡೆಸಿದೆ. ಕೊಳಚೆ ಪ್ರದೇಶವನ್ನು ನೆಲಸಮಗೊಳಿಸುವುದರ ವಿರುದ್ಧ ಯಶಸ್ವಿ ಹೋರಾಟ ಬೆಂಗಳೂರಲ್ಲಿ ಹಾಗೂ ನಾಗರೀಕ ಸೌಲಭ್ಯಗಳಿಗಾಗಿ, ಬೆಲೆ ಏರಿಕೆ ವಿರುದ್ಧ ಕೂಡ ಗಣನೀಯ ರೀತಿಯ ಹೋರಾಟ ನಡೆಸಿದೆ.

ರೈಲ್ವೆ ಅಭಿವೃದ್ಧಿ : ವಂಚಿಸುತ್ತಿರುವ ಸರ್ಕಾರಗಳು

ಎನ್.ಕೆ.ಉಪಾಧ್ಯಾಯ

ನಮ್ಮ ದೇಶದಲ್ಲಿರುವ 6000 ಕಿಲೋಮೀಟರ್ ಮೀಟರ್ ಗೇಜ್ ರೈಲ್ವೆ ಪೈಕಿ 2400 ಕಿ.ಮಿ. ಉದ್ದದ ದಕ್ಷಿಣ ಮಧ್ಯ ರೈಲ್ವೆಯನ್ನು ಬ್ರಾಡ್ ಗೇಜ್ ಆಗಿ ಪರಿವರ್ತಿಸುವ ಕೆಲಸವನ್ನು 8ನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಿರ್ಧರಿಸಲಾಗಿದೆ. ಕರ್ನಾಟಕದವರು ಕೇಂದ್ರದಲ್ಲಿ ರೇಲ್ವೆ ಮಂತ್ರಿಗಳಾಗಿದ್ದರೂ ಕೂಡ ಕರ್ನಾಟಕದಲ್ಲಿ ರೈಲ್ವೆ ಮಾರ್ಗಗಳ ರಚನೆ, ಹಳೇ ರೈಲ್ವೆಗಳ ಗೇಜ ಪರಿವರ್ತನೆಯತ್ತ ಗಮನಹರಿಸುವುದರಲ್ಲಿ ವಿಫಲರಾಗಿದ್ದರು. ಜಾಫರ್ ಶರೀಫರು ಕೇಂದ್ರದಲ್ಲಿ ರೇಲ್ವೆ ಮಂತ್ರಿಯಾದ ನಂತರ ಬೆಂಗಳೂರು-ಮೈಸೂರು ಬಿಜಾಪುರ ಸೋಲಾಪುರ ಬೆಂಗಳೂರು-ಬಂಗಾರಪೇಟೆ ಹುಬ್ಬಳ್ಳಿ, ಹೊಸಪೇಟೆ, ಲೊಂಡಾ-ಗೋವಾ ಮೊದಲಾದ ಕೆಲವು ರೈಲ್ವೆಗಳು ಗೇಜ್ ಪರಿವರ್ತನೆಗೊಂಡವು.

1993ರಲ್ಲಿ ಜಾಫರ್‌ಶರೀಫ್ ರೈಲ್ವೆ ಮಂತ್ರಿಯಾದಾಗ ಕರ್ನಾಟಕದತ್ತ ಸ್ವಲ್ಪ ಗಮನ ಹರಿಸಲಾಗಿತ್ತು. ಕರ್ನಾಟಕದಲ್ಲಿಯ ದಕ್ಷಿಣ ಮಧ್ಯ ರೈಲ್ವೆಯಲ್ಲಿ ಬಳ್ಳಾರಿ-ರಾಯದುರ್ಗ (300 ಕಿ.ಮಿ) ಗದಗ-ಬಿಜಾಪುರ (100 ಕಿ.ಮಿ), ಹೊಸಪೇಟೆ -ಗೋವಾ (489 ಕಿ.ಮಿ) ಮೀರಜ್-ಲೊಂಡಾ(188 ಕಿಮಿ) ರೇಲ್ವೆ ಗೇಜ್ ಪರಿವರ್ತನೆ ಮುಗಿದಿದೆ. ಆದರೆ ಇದರಲ್ಲಿ ಬಿಜಾಪುರ-ಗದಗ ರೈಲ್ವೆ ಗೇಜ್ ಪರಿವರ್ತನೆ, 93 ರಲ್ಲಿ ಅಡಿಗಲ್ಲು ಹಾಕಿದ್ದರೂ ಜಾಫರ್ ಶರೀಫ್‌ರ ನಿರ್ಗಮನದ ನಂತರ ನೆನೆಗುದಿಗೆ ಬಿದ್ದಂತಾಗಿದೆ. ಬಹಳಷ್ಟು ಹೋರಾಟ, ರೈಲ್ ರೋಕೋ, 2 ವಾಹನಗಳು ಸುಟ್ಟ ಘಟನೆ ನಂತರ 1996-97 ರಲ್ಲಿ ಸೋಲಾಪುರ-ಬಿಜಾಪುರ ಗೇಜ್ ಪರಿವರ್ತನೆಯಾಯಿತು. ಗೇಜ್ ಪರಿವರ್ತನೆಯಾದರೂ ಕೂಡ ಬಿಜಾಪುರ -ಸೋಲಾಪುರ ಮಧ್ಯೆ ರೇಲ್ ಓಡಾಡಲಿಲ್ಲ. ಮತ್ತೆ ಹೋರಾಟದ ಫಲವಾಗಿ ಪುಶ್‌ಪುಲ್ ರೇಲು ಓಡಾಡುತ್ತಿದೆ. 100 ಮೀಟರ್ ಗೇಜ್ ಪರಿವರ್ತನೆಯಿಂದಾಗಿ ಬಿಜಾಪುರ-ಸೋಲಾಪುರ ನಡುವಿನ ಪ್ಯಾಸಂಜರ್ ಗಾಡಿಯಿಂದ ಪ್ರತಿ ದಿನ ಒಂದು ಲಕ್ಷಕ್ಕೂ ಹೆಚ್ಚು ಉತ್ಪನ್ನ ಗೂಡ್ಸ್ ಗಾಡಿಯಿಂದಾಗಿ ಕೋಟ್ಯಾವಧಿ ರೂಪಾಯಿ ಲಾಭವಾಗುತ್ತಿಲ್ಲವೆಂದು ರೇಲ್ವೆ ಅಧಿಕಾರಿಗಳು ಹೇಳುತ್ತಿದ್ದಾರೆ.

ಚುನಾಯಿತ ಸದಸ್ಯರ ಅನಾಸ್ಥೆ

ಬಿಜಾಪುರ-ಗದಗ ಬ್ರಾಡ್‌ಗೇಜಾದರೆ ಬಿಜಾಪುರ, ಬಾಗಲಕೋಟೆಯಿಂದ ಬೆಂಗಳೂರಿಗೆ ಹೋಗಲು 91 ಕಿ.ಮಿ. ಸಮೀಪವಾಗುತ್ತದೆ. ಬಿಜಾಪುರದಿಂದ ಬೆಂಗಳೂರಿಗೆ ಗದಗ, ಗುಂತಕಲ್, ಕಲ್ಲೂರ, ಧರ್ಮಾವರಂ ಮಾರ್ಗವಾಗಿ 679 ಕಿ.ಮಿ., ಗದಗ, ಹೊಸಪೇಟೆ, ಗುಂಟಕಲ್, ಧರ್ಮಾವರಂ ಮಾರ್ಗವಾಗಿ 695 ಕಿ.ಮಿ., ಗದಗ, ಹುಬ್ಬಳ್ಳಿ, ಅರಸಿಕೆರೆ ಮಾರ್ಗವಾಗಿ 719 ಕಿ.ಮಿ. ಹುಟಗಿ, ವಾಡಿ, ಗುಂಟಕಲ್ ಮಾರ್ಗವಾಗಿ 770 ಕಿ.ಮಿ. ದೂರ ಇರುತ್ತದೆ. ದಿಲ್ಲಿ-ಬೆಂಗಳೂರು, ಬಿಜಾಪುರ-ಬೆಂಗಳೂರಿಗೆ 3 ರಿಂದ 4 ತಾಸು ಉಳಿತಾಯವಾಗುತ್ತದೆ. ಬಿಜಾಪುರ-ಗದಗ 200 ಕಿ.ಮಿ. ಗೇಜ್ ಪರಿವರ್ತನೆಗೆ ಬೇಕಾಗಿರುವುದು ಬರೇ ರೂ. 133.82 ಕೋಟಿ ಮಾತ್ರ. ವ್ಯಾಪಾರ, ಕೈಗಾರಿಕೆ, ಸಾರ್ವಜನಿಕರ ಹಿತಾದೃಷ್ಟಿಯಿಂದ ಈ ಮಾರ್ಗಪರಿವರ್ತನೆ ಅತ್ಯಗತ್ಯವಾಗಿದೆ. ಆದರೆ ಕೇಂದ್ರ ರಾಜ್ಯ ಸರ್ಕಾರಗಳ ನಿರಾಸಕ್ತಿ, ಚುನಾಯಿತ ಲೋಕಸಭೆ ಸದಸ್ಯರ ಅನಾಸ್ಥೆಯಿಂದಾಗಿ ಈ ಕೆಲಸ ಇನ್ನೂ ಪೂರ್ಣಗೊಂಡಿಲ್ಲ. ರಾಜ್ಯ ಸರ್ಕಾರ ಮತ್ತು ಲೋಕಸಭೆ ಸದಸ್ಯರ ರಾಜಕೀಯ ನಿರ್ಧಾರದ ಅಭಾವದಿಂದಾಗಿ ಬಿಜಾಪುರ-ಗದಗ ಗೇಜ್ ಪರಿವರ್ತನೆಗೆ ಮೀಸಲಿಟ್ಟಿದ್ದ ಹಣವನ್ನು ನರಸಿಂಹರಾಯರು ತಮ್ಮ ಮತಕ್ಷೇತ್ರವಾದ ನಂದ್ಯಾಲಕ್ಕೂ, ಕಲ್ಮಾಡಿಯವರು ರೈಲ್ವೆ ಮಂತ್ರಿಯಾದಾಗ ತಮ್ಮ ಮತ ಕ್ಷೇತ್ರಕ್ಕೂ ಉಪಯೋಗಿಸಿಕೊಂಡು ಈ ಕ್ಷೇತ್ರವನ್ನು ಬರಡಾಗಿಯೇ ಉಳಿಸಿದ್ದಾರೆ.

ಸಿಪಿಐ(ಎಂ) ಪಕ್ಷದಿಂದ ಹಾಗೆಯೇ ಇತರ ಸಂಘಟನೆಗಳಿಂದ ಹೋರಾಟ ನಡೆಯಿತು. ಕರ್ನಾಟಕ ರೇಲ್ವೆ ಯೋಜನೆಗಳಿಗೆ ಕೇಂದ್ರ ಸರಕಾರ ಹಣ ಬಿಡುಗಡೆಗಾಗಿ ಮಲತಾಯಿ ಧೋರಣೆ ಅನುಸರಿಸುತ್ತಿರುವದನ್ನು ಕಂಡ ಕರ್ನಾಟಕ ರಾಜ್ಯ ಸರ್ಕಾರ ಒಂದು ತಿಳುವಳಿಕೆಗೆ ಬಂದು, ರೇಲ್ವೆ ಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಸಮಕ್ಷಮ ರೈಲ್ವೆ ಮಾರ್ಗಗಳ ಅಭಿವೃದ್ಧಿಗಾಗಿ ಕರ್ನಾಟಕ ರೈಲ್ವೆ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಹೋದ ವರ್ಷ ಸೆಪ್ಟೆಂಬರ್ 27 ರಂದು ಸಹಿ ಮಾಡಲಾಗಿದೆ. 6 ತಿಂಗಳೊಳಗಾಗಿ ಈ ಮಂಡಳಿ ರಚನೆಯಾಗಬೇಕು, ಕಂಪನಿ ಕಾನೂನಿನಂತೆ ರಿಜಿಸ್ಟರಾಗಬೇಕು. (ಕೆ.ರೈಡ) ರಾಜ್ಯ ಸರ್ಕಾರ ಶೇ 26, ಕೇಂದ್ರ ಸರ್ಕಾರ ಶೇ 26, ಬ್ಯಾಂಕ್ ಮತ್ತಿತರ ಸಂಸ್ಥೆ ಮತ್ತು ಶೇರ್ ಮೂಲಕ ಶೇ 48 ರಷ್ಟು ಹಣ ಸಂಗ್ರಹಿಸಬೇಕು ಎಂಬ ಒಪ್ಪಂದವಾಗಿದ್ದರೂ, ಬಿಜಾಪುರದ ಬ್ಯಾಂಕುಗಳು 27 ಕೋಟಿಗೆ ರೂ. ಕೊಡಲು ಸಿದ್ದವಿದ್ದರೂ, ರಾಜ್ಯ ಸರ್ಕಾರ ತಾನು ಕೇಂದ್ರದೊಡನೆ ಮಾಡಿಕೊಂಡ ಒಪ್ಪಂದದಂತೆ ಮಂಡಳಿ ರಚಿಸಿಲ್ಲ. ರಾಜ್ಯ-ಕೇಂದ್ರ ಸರ್ಕಾರಗಳ ತಿಳುವಳಿಕೆ ಪತ್ರದಲ್ಲಿ ಹುಬ್ಬಳ್ಳಿ-ಅಂಕೋಲ ಹೊಸಮಾರ್ಗ ರೂ. 980 ಕೋಟಿ, ಗುಂಟಕಲ್-ಹೊಸಪೇಟೆ (ಡಬ್ಬಲ್ ಮಾರ್ಗ) ರೂ. 135 ಕೋಟಿ ಎಂದು ನಮೂದಿಸಲಾಗಿದೆ. ಎರಡೂ ಸರ್ಕಾರಗಳು ಏನೂ ಕ್ರಮ ಕೈಗೊಳ್ಳದೆ ಜನರಿಗೆ ಮೋಸ ಮಾಡುತ್ತಿದೆ.

ವ್ಯಾಪಕ ಹೋರಾಟದತ್ತ

ಬಿಜಾಪುರದಲ್ಲಿ ಗೇಜ್ ಪರಿವರ್ತನೆ ಕಮಿಟಿಯ ನೇತೃತ್ವದಲ್ಲಿ 20.3.2001 ರಿಂದ ಧರಣಿ ಸತ್ಯಾಗ್ರಹ ನಡೆಸಿ ದಿ. 31 ರಂದು ರೈಲ್ ರೋಕೋ ಮಾಡಿ ಧರಣಿ ಸತ್ಯಾಗ್ರಹವನ್ನು ಮೂರು ತಿಂಗಳು ಮುಂದೆ ಹಾಕಲಾಯಿತು. ಮೂರು ತಿಂಗಳೊಳಗೆ ರಾಜ್ಯ ಸರ್ಕಾರ ಮಂಡಳಿ ರಚಿಸಿ, ರಿಜಿಸ್ಟರ್ ಮಾಡಿ ಹಣ ಸಂಗ್ರಹಿಸದಿದ್ದರೆ, ಕೇಂದ್ರ ಸರ್ಕಾರ ಹಣ ಮಂಜೂರು ಮಾಡಿದ್ದಿದ್ದರೆ ತೀವ್ರ ಹೋರಾಟ ನಡೆಸುವ ನಿರ್ಣಯ ಮಾಡಲಾಗಿದೆ. ಈ ಹೋರಾಟದಲ್ಲಿ ಸಿಪಿಐ(ಎಂ), ಸಿಪಿಐ, ಜನವಾದಿ ಮಹಿಳಾ ಸಂಘಟನೆ ಪ್ರಧಾನ ಪಾತ್ರವಹಿಸಿವೆ. ನೂರಾರು ಮಹಿಳೆಯರು ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡದ್ದು ಮಾತ್ರವಲ್ಲ ರಸ್ತಾರೋಕೋ, ನಗರಸಭೆಗೆ ನೀರಿಗಾಗಿ ಘೆರಾವೋ ಮಾಡಿ ಮುಂಚೂಣಿಯಲ್ಲಿದ್ದು ಹೋರಾಟ ಸಮಿತಿಯಿಂದ ಮೆಚ್ಚಿಗೆ ಪಡೆದಿದೆ. ವ್ಯಾಪಾರಸ್ಥರು, ಬೇರೆ ಬೇರೆ ಮಹಿಳಾ ಸಂಘಟನೆಗಳೂ, ಪ್ರಮುಖ ನಾಗರೀಕರನ್ನೊಳಗೊಂಡ ಹೋರಾಟ ಸಮಿತಿ ರಚನೆಯಾಗಿ ಸ್ವತಃ ಕಾರ್ಯಕೈಗೊಂಡಿದೆ. ಬಿಜಾಪುರದಲ್ಲಿ ನಡೆದ ಹಲವಾರು ಹೋರಾಟಗಳಲ್ಲಿ ಶೇ 75 ರಷ್ಟು ಮಹಿಳೆಯರು ಭಾಗವಹಿಸಿರುವುದು ಇದು ಪ್ರಥಮ ಸಲ. ಹಾಗೆಯೇ ದಿ. 31 ರಂದು ನಡೆದ ರೈಲ್ ರೋಕೋದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಟಾಂಗಾ ಯುನಿಯನ್‌ನವರು ಭಾಗವಹಿಸಿರುವುದು ಮಹತ್ವ. 2000 ಇಸವಿಯೊಳಗೆ ಬಿಜಾಪುರ-ಗದಗ ಗೇಜ್ ಪರಿವರ್ತನೆ ಕೆಲಸ ಮುಕ್ತಾಯಗೊಳಿಸುವ ಆಶ್ವಾಸನೆ ನೀಡಲಾಗಿತ್ತು. ಹೋದ ವರ್ಷವೂ ಕೇಂದ್ರ ಸರ್ಕಾರ ಹಣ ನೀಡದಿರುವುದನ್ನು ಪ್ರತಿಭಟಿಸಿ ಬಿಜಾಪುರ-ಬಾಗಲಕೋಟ ಬಂದ್ ಮತ್ತು ರೈಲ್ ರೋಕೋ ಕಾರ್ಯಕ್ರಮ ಹಮ್ಮಿಕೊಂಡಾಗ ಬಾಗಲಕೋಟೆಯಲ್ಲಿ ಬಿಜೆಪಿ ಪ್ರಭಾವಿತ ವ್ಯಾಪಾರಸ್ಥರ ಸಂಘ ಕಾರ್ಯಕ್ರಮವನ್ನು ವಿಫಲಗೊಳಿಸಿತ್ತು. ಬಿಜಾಪುರದಲ್ಲಿಯೂ ಅದೇ ತಂತ್ರ ಹೂಡಿದಾಗ ಸಿಪಿಐ(ಎಂ) ಮತ್ತು ಇತರ ಸಾರ್ವಜನಿಕ ಸಂಘಟನೆಗಳು ಬಿಜೆಪಿಯ ಕುತಂತ್ರ ಬಯಲಿಗೆಳೆದು ಬಂದ್ ಮತ್ತು ರೈಲ್ ರೋಕೋ ಯಶಸ್ವಿಗೊಳಿಸಿದ್ದರು. ಈ ಸಲ ಬಿಜೆಪಿ ಮತ್ತು ಕಾಂಗ್ರೆಸ್‌ನವರು ಈ ಹೋರಾಟದಲ್ಲಿ ಪಾಲ್ಗೊಳ್ಳಲಿಲ್ಲ. ಆದರೆ ಹೋರಾಟವನ್ನು ಕೆಡಿಸಲು ಅವರಿಗೆ ಸಾಧ್ಯವಾಗಲಿಲ್ಲ.

○

ಜಾತಿ ಪದ್ಧತಿಯ ಬೇಲಿ ಕಿತ್ತಸೆದು

ಆಂಧ್ರದಲ್ಲಿ ಅಸ್ಪೃಶ್ಯತೆಯ ವಿರುದ್ಧ ಕಳೆದ ಹಲವಾರು ವರುಷಗಳಿಂದ ಸಮರ ನಡೆಯುತ್ತಿದೆ. ಇತ್ತೀಚೆಗೆ ರಾಜ್ಯದಾದ್ಯಂತ ವ್ಯಾಪಕ ಕಾರ್ಯಾಚರಣೆ ನಡೆಯಿತು. ಈ ಮಹತ್ತರ ಆಂದೋಲನದ ಒಂದೆರಡು ಘಟನೆಗಳ ವರದಿ ಇಲ್ಲಿವೆ.

ಇಲ್ಲಿಯವರೆಗೂ ಆ ಗ್ರಾಮದಲ್ಲಿ ದಲಿತರು ದ್ವಿತೀಯ ದರ್ಜೆ ಪ್ರಜೆಗಳು ಹೋಟೆಲ್‌ಗಳಲ್ಲಿ ಅವರಿಗಾಗಿ ಪ್ರತ್ಯೇಕ ಗ್ಲಾಸುಗಳು. ಆ ಗ್ಲಾಸುಗಳನ್ನು ಅವರೇ ತೊಳೆದಿಡಬೇಕು. ಹಳ್ಳಿಯ ದಲಿತ ಸರಪಂಚ್‌ಗೂ ಸೇರಿ ಈ ಪದ್ಧತಿ. ದಲಿತರು ತಮ್ಮ ಮನೆಗಳ ಬಳಿ ಇರುವ ಪೋಚಮ್ಮ ಮೈಸಮ್ಮ ಗುಡಿಗಳಿಗೆ ಹೋಗಬೇಕಷ್ಟೆ. ಗ್ರಾಮದಲ್ಲಿರುವ ರಾಮ, ಆಂಜನೇಯ ಸ್ವಾಮಿ ದೇವಸ್ಥಾನಗಳಿಗೆ ಹೋಗಲು ಅವಕಾಶವಿಲ್ಲ. ಹೋದರೂ ಹೊರಗಡೆಯಿಂದಲೇ ದೇವರಿಗೆ ಪ್ರಾರ್ಥನೆ ಸಲ್ಲಿಸಿ ಬರಬೇಕು.

ಈ ದಿನ ಪರಿಸ್ಥಿತಿ ಬದಲಾಗಿದೆ. ಗ್ರಾಮದಲ್ಲಿ ಮೇಲ್ಜಾತಿಯವರೊಂದಿಗೆ ದಲಿತರು ಹೋಟೆಲ್‌ಗಳಲ್ಲಿ ಟೀ ಕುಡಿದರು. ಎಲ್ಲರೊಂದಿಗೂ ದೇವಸ್ಥಾನಗಳಿಗೆ ಹೋದರು. ಜಾತಿ ಪದ್ಧತಿಯ ನಾಶಕ್ಕಾಗಿ ಟೊಂಕ ಕಟ್ಟಿದರು. ಜಾತಿ ಪದ್ಧತಿ ವಿರೋಧಿ ಹೋರಾಟ ಸಮಿತಿಯ ನೇತೃತ್ವದಲ್ಲಿ ರಂಗಾರೆಡ್ಡಿ ಜಿಲ್ಲೆಯ ವಿಕಾರಾಬಾದ್ ದಾರೂರ್ ಮಂಡಲದ ಐದು ಗ್ರಾಮಗಳಲ್ಲಿ ಆಂಧ್ರ ಜಾತಿ ಪದ್ಧತಿ ವಿರೋಧಿ ಹೋರಾಟ ಸಮಿತಿಯ ನಾಯಕ ಬಿ.ವಿ.ರಾಘವಲುರವರ ನಾಯಕತ್ವದಲ್ಲಿ ನಡೆದ ನೇರ ಕಾರ್ಯಾಚರಣೆಯು ದಲಿತರಿಗೆಷ್ಟೋ ಸ್ಥೈರ್ಯವನ್ನು ನೀಡಿದೆಯಲ್ಲದೆ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಎರಡು ಲೋಟ ಪದ್ಧತಿಯ ರದ್ದತಿಗೆ ಹೋರಾಟ ನೇರ ಕಾರ್ಯಾಚರಣೆ - ದಲಿತರೊಂದಿಗೆ ಆಲಯ ಪ್ರವೇಶ

ಸಮಿತಿಯ ನೇತೃತ್ವದಲ್ಲಿ ಅಧಿಕ ಸಂಖ್ಯೆಯ ಜನ ಪಾದಯಾತ್ರೆಯಲ್ಲಿ ಪಾಲ್ಗೊಂಡು, ಸ್ಪಂದಿಸಿದುದು ಬಹುಮುಖ್ಯವಾಗಿ ಯುವಕರನ್ನು ಉತ್ಸಾಹಭರಿತರನ್ನಾಗಿ ಮಾಡಿದೆ. ಅನಂತಪುರಂ ಜಿಲ್ಲೆಯ ಅಲ್ಲಿಪೂರ್ ಗ್ರಾಮವನ್ನು ಪ್ರವೇಶಿಸಿ 'ಎರಡು ಲೋಟ' ಪದ್ಧತಿಯನ್ನು ರದ್ದು ಮಾಡಿ ದಲಿತರೊಂದಿಗೆ ಗ್ರಾಮದಲ್ಲಿಯ ಎರಡು ದೇವಾಲಯಗಳನ್ನು ಪ್ರವೇಶಿಸಿದರು. ಅನಂತರ ತರಿಗೋಪುಲ ಗ್ರಾಮದಲ್ಲಿಯ ಹನುಮಾನ್, ವೀರಭದ್ರನ ದೇವಾಲಯಗಳಿಗೆ ಮೇಲ್ಜಾತಿಯವರೊಂದಿಗೆ ದಲಿತರು ಪ್ರವೇಶಿಸಿ ಅರ್ಚನೆಯನ್ನು ಮಾಡಿಸಿದರು. ಎಚ್ಚಿನೂರು, ಕೆರೆಳ್ಳಿ, ಜೈದಪಲ್ಲಿ ಗ್ರಾಮಗಳನ್ನು ಪ್ರವೇಶಿಸಿದ ಹೋರಾಟ ಸಮಿತಿಯ ಪಾದಯಾತ್ರೆ 'ಎರಡು ಲೋಟ' ಪದ್ಧತಿಯ ವಿರುದ್ಧ ಸಭೆ ನಡೆಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಬಿ.ವಿ.ರಾಘವಲು ಇನ್ನು ಮುಂದೆ 'ಈ ಗ್ರಾಮಗಳಲ್ಲಿ ಎರಡು ಲೋಟ ಪದ್ಧತಿ ಕಂಡು ಬಂದಲ್ಲಿ ಕಾನೂನು ಕ್ರಮಗಳ ಮೂಲಕ ಬಂಧನಕ್ಕೊಳಪಡಿಸಲಾಗುವುದೆಂದು ಎಚ್ಚರಿಸಿದರು.

ದಲಿತರು ದೇವಾಲಯಗಳನ್ನು ಪ್ರವೇಶಿಸಿದಲ್ಲಿ ದೇವಾಲಯಗಳನ್ನು ಅವರಿಗೇ ಬಿಟ್ಟು ಬಿಡುವುದಾಗಿ ಹೇಳುವರು. ದಲಿತರು ಉಪಯೋಗಿಸುವ ನೀರಿನ ಪಂಪ್‌ಸೆಟ್, ಅವರು ದುಡಿಯುವ ನೆಲ, ಪಶುಗಳು, ಬೆಳೆಗಳನ್ನು ಬಿಟ್ಟು ಬಿಡಬೇಕೆಂದು ಎಚ್ಚರಿಸಿದರು.

ಜಾತಿಪದ್ಧತಿ ವಿರೋಧಿ ಹೋರಾಟ ಸಮಿತಿಯ ಈ ಎಲ್ಲಾ ವೈವಿಧ್ಯಮಯ ನೇರ ಕಾರ್ಯಾಚರಣೆಯ ಕಾರ್ಯಕ್ರಮಗಳು ಸಾಕಷ್ಟು ಪ್ರಭಾವಕಾರಿಯಾಗಿ ಬೆಳೆದುಬರುತ್ತಿರುವುದು ಬಹುಸಂಖ್ಯಾತ ಜನತೆಗೆ ಸ್ಫೂರ್ತಿಯನ್ನು ನೀಡುತ್ತಿದೆಯಲ್ಲದೆ. ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಅದೆಷ್ಟೋ ಮಂದಿ ಜಾತಿ ಪದ್ಧತಿ ನಾಶಕ್ಕಾಗಿ ಮುಂದಾಗುವುದಾಗಿ ಘೋಷಿಸಿದ್ದಾರೆ.

- ಕೆ.ಎಸ್.ಲಕ್ಷ್ಮಿ

ಪ್ರತ್ಯೇಕ ಲೋಟ ರದ್ದತಿಗಾಗಿ ರಾಘವಲು ನೇತೃತ್ವ   ಪಿ. ರಾಮಯ್ಯ ನವರೊಂದಿಗೆ ದೇವಾಲಯ ಪ್ರವೇಶ



ವಿಶ್ವವಿದ್ಯಾಲಯಗಳಲ್ಲಿ ಜ್ಯೋತಿಷ್ಯ ಶಾಸ್ತ್ರ

ಅಜ್ಞಾನಕ್ಕೆ ವಿಜ್ಞಾನದ ಲೇಪ!

ಮೊನ್ನೆ ಒರಿಸ್ಸಾದಲ್ಲಿ ಬೀಸಿದ ಪ್ರಚಂಡ ಚಂಡಮಾರುತಕ್ಕೆ ಸಿಲುಕಿ ಸಹಸ್ರಾರು ಮಂದಿ ಪ್ರಾಣ ಕಳೆದುಕೊಂಡರು. ಕೋಟ್ಯಾಂತರ ರೂಪಾಯಿ ಆಸ್ತಿ-ಪಾಸ್ತಿ ನಾಶವಾದವು. ಹವಾಮಾನ ಇಲಾಖೆಯ ಮುನ್ಸೂಚನೆ ಬಿಟ್ಟರೆ ಯಾವ ಜ್ಯೋತಿಷಿಯೂ ಈ ಬಗೆಗೆ ಮುನ್ಸೂಚನೆ ಕೊಡಲಿಲ್ಲ. ಗುಜರಾತಿನಲ್ಲಿ ಸಂಭವಿಸಿದ ಭೀಕರ ಭೂಕಂಪದ ಕುರಿತು ಯಾವ ಭವಿಷ್ಯಕಾರರು ಭವಿಷ್ಯ ನುಡಿಯಲಿಲ್ಲ.

ವೀರಪ್ಪನನ್ನು ಪೋಲೀಸರು ಎಂದು ಹಿಡಿಯುತ್ತಾರೆ?', 'ತೆಹಲ್ಕಾ'ದ ಅಲ್ಲೋಲ ಕಲ್ಲೋಲದಿಂದ ತತ್ತರಿಸಿದ ವಾಜಪೇಯಿ ಸರಕಾರ ಎಂದು ಉರುಳಿ ಬೀಳುತ್ತದೆ. ಇದನ್ನು ಖಚಿತವಾಗಿ ಹೇಳುವವರು ಯಾರೂ ಇಲ್ಲ. ವಾಸ್ತವ ಹೀಗಿರುವಾಗ ಈ ದೇಶದ ವಿಶ್ವವಿದ್ಯಾಲಯಗಳಲ್ಲಿ ಜೋತಿಷ್ಯ ಶಾಸ್ತ್ರವನ್ನು ಕಲಿಸಲು ಹೊರಟಿದೆ ಸನ್ಮಾನ್ಯ ವಾಜಪೇಯಿಯವರ ಸರ್ಕಾರ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಕರ್ನಾಟಕದ ಕುವೆಂಪು ವಿ.ವಿ.ಸೇರಿದಂತೆ ದೇಶದಲ್ಲಿ 25 ವಿ.ವಿ. ಗಳಲ್ಲಿ 4 ಕೋರ್ಸನ್ನು ಆರಂಭಿಸಲಾಗುವುದಂತೆ.

ವಿಜ್ಞಾನದ ಶಿಕ್ಷಕ, ಅಜ್ಞಾನದ ಪ್ರತಿಪಾದಕ

ಶಿಕ್ಷಣದ ಖಾವೀಕರಣ

ಈ ದೇಶಕ್ಕೊಬ್ಬರು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಯಿದ್ದಾರೆ. ಡಾ. ಮುರುಳಿ ಮನೋಹರ ಜೋಶಿ. ವಿಜ್ಞಾನದ ಪ್ರಾಧ್ಯಾಪಕರಾಗಿದ್ದವರು. ಆದರೆ ಜೀವನದುದ್ದಕ್ಕೂ ಬರೀ ಅಜ್ಞಾನವನ್ನೇ ಪ್ರತಿಪಾದಿಸುತ್ತಾ ಬಂದವರು!


ಜ್ಯೋತಿಷ್ಯ ಶಾಸ್ತ್ರ ಮಾತ್ರವಲ್ಲ ವಾಸ್ತು ಶಾಸ್ತ್ರವನ್ನು ವಿಶ್ವ ವಿದ್ಯಾಲಯಗಳಲ್ಲಿ ಕಲಿಸಲಾಗುವುದಂತೆ. ಆಹಾ! ಆಹಾ ನಮ್ಮ ಸೌಭಾಗ್ಯವೆ! ಹಿಂದೊಮ್ಮೆ ಪಠ್ಯಕ್ರಮದಿಂದ ಮಾರ್ಕ್ಸ್‌ವಾದವನ್ನು ಕೈ ಬಿಡಲು ತೀರ್ಮಾನಿಸಿತ್ತು ಈ ಕೇಂದ್ರ ಸರ್ಕಾರ. ಮಾರ್ಕ್ಸ್‌ವಾದಿಗಳು ಮಾತ್ರವಲ್ಲ ದೇಶದ ಹಲವು ಪ್ರಜ್ಞಾವಂತ ಜನತೆ ತೀವ್ರವಾಗಿ ಇದನ್ನು ಪ್ರತಿಭಟಿಸಿದ ಮೇಲೆ ಆ ಕ್ರಮವನ್ನು ಕೈ ಬಿಡಲಾಯಿತು. ವಿಶ್ವವಿದ್ಯಾಲಯ ಧನ ಸಹಾಯ ಆಯೋಗವನ್ನು ಕೇಸರೀಕರಣಗೊಳಿಸಿರುವುದರಿಂದ ಇಂತಹ ಕೆಲಸ ಮತ್ತಷ್ಟು ಸರಾಗವಾಗಿದೆ ಸರ್ಕಾರಕ್ಕೆ.

ಜ್ಯೋತಿಷ್ಯ ಶಾಸ್ತ್ರ ಪರಂಪರೆಯನ್ನು ಹೇಗೆ ರಕ್ಷಿಸುತ್ತದೆ?

ಜ್ಯೋತಿಷ್ಯ ಶಾಸ್ತ್ರದ ಅಧ್ಯಯನದಿಂದ ನಮ್ಮ ಪ್ರಾಚೀನ ಪರಂಪರೆಯ ರಕ್ಷಣೆ ಮಾತ್ರವಲ್ಲ ದೇಶದ ಆಗುಹೋಗುಗಳನ್ನು ಹಾಗೂ ಜಗತ್ತಿನ ಆಗುಹೋಗುಗಳನ್ನು ಕೂಡ ನಾವು ಅರಿಯಲು ಸಾಧ್ಯವಾಗುತ್ತದೆ. ಈ ಮೂಲಕ ನಾವು ಈ ಜ್ಞಾನ(!)ವನ್ನು ಜಗತ್ತಿಗೆಲ್ಲಾ ಪಸರಿಸಲು ಸಾಧ್ಯವಾಗುತ್ತದೆ ಎನ್ನುತ್ತದೆ ಯುಜಿಸಿಯ ಸುತ್ತೋಲೆ.

ಈ ಮೂಢತೆಗೂ ಮಿತಿ ಇದೆಯೇ

ನಮ್ಮ ಪ್ರಾಚೀನ ಸಂಪ್ರದಾಯ, ನಂಬಿಕೆ, ವಿಚಾರ, ಆಚರಣೆಗಳು ತಿಳುವಳಿಕೆಗಳಲ್ಲವೂ ಸರ್ವಶ್ರೇಷ್ಠ, ವೈಜ್ಞಾನಿಕ, ಆಧುನಿಕ ಎಂದು ನಾವೀಗ ಕರೆಯಲಾಗುವ ವಿಜ್ಞಾನ-ತಂತ್ರಜ್ಞಾನ, ವಿಚಾರ ಎಲ್ಲವೂ ಸಾಕಷ್ಟು ಹಿಂದೆಯೇ ನಮ್ಮಲ್ಲಿತ್ತು, ನಮ್ಮನ್ನು ಮೀರಿಸುವವರು ಯಾರೂ ಇಲ್ಲ ಎಂಬುದು ಈ ಸನಾತನವಾದಿಗಳ ವಾದದ ಸಾರ. 'ಫಾರಿನ್' ನವರೇ ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ. ನಮ್ಮ ಸಂಪ್ರದಾಯ, ಆಚರಣೆ, ವಿಚಾರಗಳು 'ಫಾರಿನ್' ನಲ್ಲೂ ಜನಪ್ರಿಯವಾಗುತ್ತಿವೆ. ನಮ್ಮ ಮಹಾನ್ ಜ್ಞಾನ ಸಂಪತ್ತು, ಸಂಸ್ಕೃತಿಯನ್ನು ನೋಡಿ ವಿದೇಶಿಯರು ಮೂಗಿನ ಮೇಲೆ (ಒಳಗೆ) ಬೆರಳಿಟ್ಟುಕೊಳ್ಳುತ್ತಿದ್ದಾರೆ ಎಂದೆಲ್ಲಾ ಮಾತುಗಳನ್ನು ಹೇರಳವಾಗಿ ಇಂದು ಕೇಳುತ್ತಿದ್ದೇವೆ.



ಈ ಮಾತುಗಳೇ ಸಾರುತ್ತವೆ ನಮ್ಮದರ ಬಗೆಗೆ ನಮಗೆ ವಿಶ್ವಾಸವಿಲ್ಲ. ಆಳವಾದ ಕೀಳರಿಮೆಯಿಂದ ಹುಟ್ಟಿಕೊಂಡ ಮಾತುಗಳು ಇವು ಎಂದು. ವಿದೇಶಿಯರು ಎಂದರೆ ಎಲ್ಲರೂ ಸಾರಾಸಗಟಾಗಿ ವೈಜ್ಞಾನಿಕ ಮನೋಭಾವದವರು ಎಂದು ಅರ್ಥವೇ? 'ಫಾರಿನ್ನಲ್ಲೂ ನಮ್ಮಲ್ಲಿರುವಂತೆ ಮೂಢರು- ಮೂರ್ಖರು- ವಿತಂಡವಾದಿ ಗಳು ಮತಾಂಧರು ಇರುತ್ತಾರೆಂದು ಇವರಿಗೆ ಏಕೆ ಅರ್ಥವಾಗುವುದಿಲ್ಲವೋ?

ಭೂಮಿಯ ನೆರಳು ಚಂದ್ರನ ಮೇಲೆ ಬೀಳುವ, ಚಂದ್ರ ಗ್ರಹಣವನ್ನು, ಭೂಮಿ ಸೂರ್ಯನ ನಡುವೆ ಚಂದ್ರ ಅಡ್ಡಬರುವ ಸೂರ್ಯ ಗ್ರಹಣವನ್ನು, ರಾಹು ಕೇತುಗಳು ಸೂರ್ಯ-ಚಂದ್ರರನ್ನು ನುಂಗುವ ಎನ್ನುವ ಈ ಮಹಾ ಜೋತಿಷ್ಯ ಶಾಸ್ತ್ರಕ್ಕೆ ಎಂತಹ ವೈಜ್ಞಾನಿಕ ನೆಲೆ ಇದೆ ಎನ್ನುವುದನ್ನು ಸರಿಯಾಗಿ ಯೋಚಿಸಿದರೆ ಪ್ರೌಢಶಾಲೆಯ ವಿದ್ಯಾರ್ಥಿಯೂ ಸಹ ಅರ್ಥ ಮಾಡಿಕೊಳ್ಳಬಲ್ಲ.

> **ಹತ್ತಾರು ಶತಮಾನಗಳ ಸತತ ಅಧ್ಯಯನ ಈಗ ಜ್ಯೋತಿಷ್ಯ ಶಾಸ್ತ್ರ ಹಾಗೂ ಖಗೋಳ ವಿಜ್ಞಾನವನ್ನು ಪ್ರತ್ಯೇಕಿಸಿದೆ. ಈಗ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಈ ಪ್ರಯತ್ನ ಆರ್ಯಭಟರಂತಹ ವಿಜ್ಞಾನಿಗಳ ಬೃಹತ್ ಕೊಡುಗೆಗಳನ್ನು ಧ್ವಂಸಗೊಳಿಸುವ ಕೆಲಸವಾಗಿದೆ.**

ಪ್ರಾಚೀನ ಭಾರತದಲ್ಲಿ ಖಗೋಳ ಶಾಸ್ತ್ರ ಖಗೋಳ ವಿಜ್ಞಾನಕ್ಕೆ ಸಂಬಂಧಿಸಿ ಸಾಕಷ್ಟು ಉತ್ತಮ ಕೆಲಸ ನಡೆದಿದೆ. ಆದರೆ ಬಿಜೆಪಿ ಪ್ರತಿಪಾದಿಸುವುದು ಖಗೋಳ ವಿಜ್ಞಾನವನ್ನಲ್ಲ, ಜ್ಯೋತಿಷ್ಯ ಶಾಸ್ತ್ರವನ್ನು. ಈ ಎರಡಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಈ ವೈದಿಕ ಜ್ಯೋತಿಷ್ಯ ಶಾಸ್ತ್ರಕ್ಕೆ ಮಹರ್ಷಿ ಪರಾಶರ ರಚಿಸಿರುವ 'ಬೃಹತ್ ಪರಾಶರ ಹೊರ ಶಾಸ್ತ್ರ' ಗ್ರಂಥ ಆಧಾರವಾಗಿದೆ. ಭಾರತದಲ್ಲಿ ಸಾಕಷ್ಟು ಹಿಂದೆಯೆ ಆರ್ಯಭಟರಂತಹ ವಿಜ್ಞಾನಿ ಈ ಜ್ಯೋತಿಷ್ಯ ಶಾಸ್ತ್ರದಲ್ಲಿನ ವಿಚಾರಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಿದ್ದಾರೆ. ಹೀಗೆ ಹತ್ತಾರು ಶತಮಾನಗಳ ಸತತ ಅಧ್ಯಯನ ಈಗ ಜ್ಯೋತಿಷ್ಯ ಶಾಸ್ತ್ರ ಹಾಗೂ ಖಗೋಳ ವಿಜ್ಞಾನವನ್ನು ಪ್ರತ್ಯೇಕಿಸಿದೆ. ಈಗ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಈ ಪ್ರಯತ್ನ ಆರ್ಯಭಟರಂತಹ ವಿಜ್ಞಾನಿಗಳ ಬೃಹತ್ ಕೊಡುಗೆಗಳನ್ನು ಧ್ವಂಸ ಗೊಳಿಸುವ ಕೆಲಸವಾಗಿದೆ.

ಬಿಜೆಪಿಯ ವೇದ ಗಣಿತ!

ಉತ್ತರ ಪ್ರದೇಶ ಮತ್ತು ಬಿಜೆಪಿ ಆಳ್ವಿಕೆ ರಾಜ್ಯಗಳಲ್ಲಿ 'ವೇದಗಣಿತ' ಎಂಬ ಸ್ವಾಮಿ ಶ್ರೀ ಭಾರತಿ ಕೃಷ್ಣ ತೀರ್ಥಜಿ ಮಹಾರಾಜ್ ಎಂಬುವವರು 1965 ರಲ್ಲಿ ಬರೆದ ಪುಸ್ತಕವನ್ನು ಪಠ್ಯವನ್ನಾಗಿಸಿದೆ. 'ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ' 1983 ರಲ್ಲಿ ಸಂಶೋಧನಾ ಗ್ರಂಥವನ್ನು ಹೊರತಂದಿದೆ. ವೇದ ಗಣಿತದ ಕುರಿತು ಗಣಿತ ಇತಿಹಾಸಕಾರರು ತಜ್ಞರು 19ನೇ ಶತಮಾನದಲ್ಲಿ ಸಂಶೋಧನೆ ನಡೆಸಿದ್ದಾರೆ. ಇವೆಲ್ಲಾ ಸಾರುವುದೇನೆಂದರೆ ಆರ್.ಎಸ್.ಎಸ್. - ಬಿಜೆಪಿ ಈಗ ಪ್ರತಿಪಾದಿಸುತ್ತಿರುವ 'ವೇದಗಣಿತ'ಕ್ಕೂ ಆರ್ಯಭಟ, ವರಾಹಮಿಹಿರ, ಬ್ರಹ್ಮಗುಪ್ತ, ಭಾಸ್ಕರ ಮತ್ತಿತರರ ಕೊಡುಗೆಗಳಿಗೂ ಯಾವುದೇ ತಾಳಮೇಳವಿಲ್ಲ ಎಂಬುದು ಖ್ಯಾತ ಗಣಿತಶಾಸ್ತ್ರಜ್ಞ ಎಸ್.ಜಿ.ಧಣಿಯವರ ಅಭಿಪ್ರಾಯದಂತೆ ಬಿಜೆಪಿಯ 'ವೇದಗಣಿತ'ದ ಮೂಲ ವೇದಗಳಲ್ಲ. ಮತ್ತು ಈ ಗಣಿತದಿಂದ ಒಂದಷ್ಟು ಮನರಂಜನೆ ಗಿಂತ ಹೆಚ್ಚಿನ ಮಹತ್ವದ್ದೇನನ್ನೂ ನಿರೀಕ್ಷಿಸು ವಂತಿಲ್ಲ.

ವಿಧಿಮಾಯೆಗೆ ಒಪ್ಪಿಸುವ ಹುನ್ನಾರ

ರೆವಿನ್ಯೂ ಇಲಾಖೆ ನೌಕರನಿಗೆ ಇಂದು ಎಷ್ಟು ಲಂಚ ಸಿಗುತ್ತದೆ, ಬೆಳೆದ ಆಲೂಗಡ್ಡೆಗೆ ಬೆಲೆ ಸಿಗದೆ ಯಾವ ರೈತ ಆತ್ಮಹತ್ಯೆ ಮಾಡಿಕೊಳ್ಳಬೇಕು, ಏಳನೇ ತರಗತಿಯ ಮಗುವಿಗೆ ಪಬ್ಲಿಕ್ ಪರೀಕ್ಷೆಯೋ ಅಲ್ಲವೋ, ಸರಿಯಾದ ಆಸ್ಪತ್ರೆ- ವೈದ್ಯರಿಲ್ಲದ ನಗರ, ಗ್ರಾಮಗಳಲ್ಲಿ ಕಾಲರ ಹರಡುವುದೋ, ಮಲೇರಿಯಾ ಹರಡುವುದೋ? ಪ್ರೀತಿಸಿದ ಹುಡುಗಿ ಭೇಟಿಗೆ ಸಿಗುತ್ತಾಳೋ ಇಲ್ಲವೋ? ಇಂತಹ ವಿಚಾರಗಳನ್ನು ಗ್ರಹಗತಿಗಳು ನಿರ್ಧರಿಸುತ್ತವೆಯೇ? ಗ್ರಹಗಳ ಚಲನೆ ವ್ಯಕ್ತಿ-ಸಮಾಜದ ಪ್ರತಿಯೊಂದು ಬೆಳವಣಿಗೆಯ ಮೇಲೆ ಹೀಗೆ ಪರಿಣಾಮ ಬೀರುವುದು ಸಾಧ್ಯವೇ? ಮತ್ತು ಈ ಎಲ್ಲವನ್ನು ಮುಂಚಿತವಾಗಿಯೇ ಅರಿಯಲು ಸಾಧ್ಯವೇ? ಹಾಗಿದ್ದಲ್ಲಿ ಮನುಷ್ಯ ಪ್ರಯತ್ನ ಎಂಬುದಕ್ಕೆ ಬೆಲೆ ಏನಿದೆ ನಮ್ಮ ಬದುಕಲ್ಲಿ? ಎಲ್ಲವನ್ನು ಮೇಲಿರುವವನ ಆಟದಾಳಕ್ಕೆ ತಳಕು ಹಾಕುವ ವಿಧಿ ಮಾಯೆಗೆ ಒಪ್ಪಿಸುವ ಹುನ್ನಾರವಲ್ಲವೇ ಇದು.

ಭಾರತದ ಪ್ರಮುಖ ವಿಜ್ಞಾನಿಗಳು, ಶಿಕ್ಷಣ ಪ್ರೇಮಿಗಳು ಯುಜಿಸಿಯ ಈ ಕೃತ್ಯವನ್ನು ತೀವ್ರವಾಗಿ ಖಂಡಿಸಿದ್ದಾರೆ. ಬಾಹ್ಯಾಕಾಶ, ಅಣುವಿಜ್ಞಾನ, ವೈದ್ಯಕೀಯ ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಭಾರತ ಪ್ರಗತಿಯ ಹಾದಿಯಲ್ಲಿರುವಾಗ ವಿಶ್ವ ವಿದ್ಯಾಲಯಗಳಲ್ಲಿ ಜೋತಿಷ್ಯ ಶಾಸ್ತ್ರವನ್ನು ಕಲಿಸುವ ವಿಚಾರ ಭಾರತ ಅಂತರ ರಾಷ್ಟ್ರೀಯ ಮಟ್ಟದಲ್ಲಿ ತಲೆ ತಗ್ಗಿಸುವಂತೆ ಮಾಡುವ ಭಾರತದ ವೈಜ್ಞಾನಿಕ ಸಾಮಾಜಿಕ ಪ್ರಗತಿಯನ್ನು ಶತಮಾನಗಳಷ್ಟು ಹಿಂದಕ್ಕೊಯ್ಯುವ ಪ್ರತಿಗಾಮಿ ಕ್ರಮವಾಗಿದೆ.

- ಆರ್. ರಾಮಕೃಷ್ಣ

ಇದೊಂದು ಶಿಕ್ಷಣದ ಕೇಸರೀಕರಣದ ಹುನ್ನಾರ ಎಂದು ರಾಜ್ಯದ ಹಲವೆಡೆ ಬುದ್ಧಿಜೀವಿಗಳು, ಸಾಹಿತಿಗಳು ಟೀಕಿಸಿದ್ದಾರೆ.

★ ★ ★

ಇದು ಬಹಳ ಅವಿವೇಕದ ಕ್ರಮ. ಜ್ಯೋತಿಷ್ಯ ವಿಜ್ಞಾನವೇ? ಅಲ್ಲವೇ? ಎನ್ನುವ ಬಗ್ಗೆ ಚರ್ಚೆ ನಡೆಯುತ್ತಲೇ ಇದೆ. ಆದರೆ ನನಗೆ ಜ್ಯೋತಿಷ್ಯದಲ್ಲಿನಂಬಿಕೆಯಿಲ್ಲ, ಆಸಕ್ತಿಯೂ ಇಲ್ಲ. ಸಾಮಾನ್ಯ ಜನರ ಸಂಕಷ್ಟ ಕಾಲದಲ್ಲಿ ಆಸೆಯ ಬೀಜಗಳನ್ನು ಬಿತ್ತಿ ಚಮತ್ಕಾರ ನಡೆಸುವ ಜ್ಯೋತಿಷ್ಯವನ್ನು ವಿಜ್ಞಾನವೆಂದು ಕರೆಯಲು ಸಾಧ್ಯವೆ?

ಇದು ಜನರ ಅಜ್ಞಾನದೊಂದಿಗೆ ಬಹುಮಟ್ಟಿಗೆ ತಳಕು ಹಾಕಿಕೊಂಡಿರುವ ಶಾಸ್ತ್ರ. ಹಕ್ಕಿಪಿಕ್ಕಿ ಶಾಸ್ತ್ರವನ್ನು ಪಠ್ಯಕ್ರಮದಲ್ಲಿ ಸೇರಿಸುವುದು ಮೂರ್ಖತನ. ವಾಸ್ತವವನ್ನು ಎದುರಿಸುವ ಧೈರ್ಯ ಕಳೆದು, ಭವಿಷ್ಯತ್ತಿನ ಆಸೆಯನ್ನು ಪ್ರಲೋಭಿಸುವ ಜ್ಯೋತಿಷ್ಯವನ್ನು ಪಠ್ಯದಲ್ಲಿ ಸೇರಿಸುವುದು ಅನವಶ್ಯಕ.

- ಕವಿ ಡಾ|| ಜಿ.ಎಸ್.ಶಿವರುದ್ರಪ್ಪ

★ ★ ★

ಜ್ಯೋತಿಷ್ಯ ನಾನ್‌ಸೈನ್ಸ್. ಇದನ್ನು ಪಠ್ಯಕ್ರಮದಲ್ಲಿ ಸೇರಿಸುವ ಸರ್ಕಾರದ ನಿರ್ಧಾರ ಮತ್ತೊಂದು ನಾನ್‌ಸೆನ್ಸ್. ಇದು ಪೂರ್ತಿ ಅವೈಜ್ಞಾನಿಕ. ನವಗ್ರಹಗಳ ಕಲ್ಪನೆಯೇ ತಪ್ಪು. ವಿಶ್ವವಿದ್ಯಾಲಯಗಳಲ್ಲಿ ಇದನ್ನು ಹೇಳಿಕೊಡುವುದರಿಂದ ಮೂಢನಂಬಿಕೆ ವ್ಯವಸ್ಥಿತವಾಗುತ್ತದೆ. ಇದನ್ನು ಜಾರಿಗೆ ತರುತ್ತಿರುವವರಿಗೆ ತಲೆ ಇದೆಯೇ?

ಶಿಕ್ಷಣ ತಜ್ಞ ಡಾ| ಎಚ್.ನರಸಿಂಹಯ್ಯ

★ ★ ★

ದಡ್ಡತನದ ತೀರ್ಮಾನ, ಖಂಡಿತಾ ತಪ್ಪು. ಸ್ವದೇಶಿ ಅಂದ್ರೆ ಮೂಢನಂಬಿಕೆ ಅಂತ ಅರ್ಥ ಅಲ್ಲ

- ಪ್ರೊ. ಚಂದ್ರಶೇಖರ ಕಂಬಾರ

★ ★ ★

ಜ್ಯೋತಿಷ್ಯವನ್ನು ವಿ.ವಿ.ಗಳಲ್ಲಿ ಪಠ್ಯಕ್ರಮ ಮಾಡುವುದು ಖಂಡಿತ ಸರಿಯಲ್ಲ. ಇದಕ್ಕಿಂತ ಆದ್ಯತೆ ನೀಡುವ ವಿಷಯ ಬೇಕಾದಷ್ಟಿದೆ. ಈ ಕ್ರಮ ಕೇಂದ್ರ ಸರ್ಕಾರದ ಧೋರಣೆಯ ಪ್ರತಿಬಿಂಬ. ವಿಜ್ಞಾನವನ್ನು ಓದಿದವರೆಲ್ಲಾ ವೈಜ್ಞಾನಿಕ ಚಿಂತನೆ ಬೆಳೆಸಿಕೊಳ್ಳದ ಇಂದಿನ ಸ್ಥಿತಿಯಲ್ಲಿವಿಜ್ಞಾನವನ್ನು ಕಲಿಸುವ ರೀತಿಯೇ ಬದಲಾಗಬೇಕಾಗಿದೆ: ಉಪಗ್ರಹ ಹಾರಿಸುವಾಗಲೂ ಮುಹೂರ್ತ ನೋಡುವ ನಮ್ಮ ದೇಶದಲ್ಲಿ ಜ್ಯೋತಿಷ್ಯಕ್ಕೆ ಮಹತ್ವ ನೀಡುವುದಕ್ಕಿಂತ ವೈಜ್ಞಾನಿಕ ಮನೋಧರ್ಮ ಬೆಳೆಸಲು ಆದ್ಯತೆ ನೀಡುವುದು ಅಗತ್ಯ.

- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ
ಬರಗೂರು ರಾಮಚಂದ್ರಪ್ಪ

★ ★ ★

ವಿಶ್ವವಿದ್ಯಾಲಯಗಳಲ್ಲಿ ಸಾರ್ವಜನಿಕರ ಹಣವನ್ನು ಈ ರೀತಿ ವ್ಯಯ ಮಾಡಲು ಹೊರಟಿರುವುದು ಟೂಮಚ್

ಸಾಹಿತಿ ಹಾಗೂ ಪ್ರಗತಿಪರ ಚಿಂತಕ
ಕೆ.ಪಿ.ಪೂರ್ಣಚಂದ್ರ ತೇಜಸ್ವಿ

★ ★ ★

ಅದನ್ನು ಭೌತ ವಿಜ್ಞಾನದಂತೆ ಕಲಿಸುವುದು ಸರಿಯಲ್ಲ. ಜ್ಯೋತಿಷ್ಯ ಸುಳ್ಳು ಶಾಸ್ತ್ರ. ವಿಜ್ಞಾನಕ್ಕೆ ಇರಬೇಕಾದ ಪ್ರಮಾಣ ಇದಕ್ಕೆ ಇಲ್ಲ. ಇದು ಬರೀ ಊಹೆಯ ಮೇಲೆನಡೆಯುವ ಶಾಸ್ತ್ರ. ಕೆಲವರ ಉಪಜೀವನದ ಉಪಕರಣ. ಶಿಕ್ಷಣದ ಕೇಸರೀಕರಣದ ಒಂದು ಅಂಗವಾಗಿ ಕೇಂದ್ರ ಬಿಜೆಪಿ ಸರ್ಕಾರ ಇದನ್ನು ಜಾರಿಗೆ ತಂದು ಹುನ್ನಾರ ನಡೆಸಿದೆ. ಇದರ ವಿರುದ್ಧ ಹೋರಾಟ ಅಗತ್ಯ.

ಪ್ರೊ॥ ಚಂದ್ರಶೇಖರ ಪಾಟೀಲ
ಮಾಜಿ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

★ ★ ★

ಈ ಕ್ರಮ ವೈಜ್ಞಾನಿಕ ಚಿಂತನೆ ಬಿತ್ತಬೇಕು ಎನ್ನುವ ಸಂವಿಧಾನದ ಆಶಯಕ್ಕೆ ವಿರುದ್ಧ

ಕವಿ ಹಾಗೂ ಮಾಜಿ ಶಾಸಕ
ಡಾ. ಸಿದ್ದಲಿಂಗಯ್ಯ

★ ★ ★

ನಾಚಿಕೆಗೇಡಿನ ವಿಚಾರ. ಎಲ್ಲ ದೇಶಗಳು ಮುಂದೆ ಹೋಗುತ್ತಿದ್ದರೆ ನಾವು ಇಂತಹ ಕ್ರಮಗಳಿಂದ ಹಿಂದೆ ಹಿಂದೆ ಹೋಗುತ್ತಿದ್ದೇವೆ. ಹೀಗೆಹಿಂದಕ್ಕೆ ಹೋದರೆ ಕೊನೆಗೆ ಕೋತಿಗಳಂತೆ ಮರ ಹತ್ತಿ ಕೂರಬೇಕಾಗುತ್ತದೆ. ವಿಶ್ವವಿದ್ಯಾಲಯಗಳು ಪೂಜಾರಿಗಳನ್ನು ತಯಾರು ಮಾಡುವ ಕೇಂದ್ರಗಳಾದರೆ ಹೇಗೆ? ಇದನ್ನು ಕಲಿಸಿ ನಾವು ಜಗತ್ತಿನಲ್ಲಿ ತಲೆ ಎತ್ತಿಕೊಂಡು ತಿರುಗಾಡಲು ಸಾಧ್ಯವೇ?

ಡಾ. ಕೆ.ಮರುಳಸಿದ್ದಪ್ಪ, ಸಾಹಿತಿ

ವಿಧಾನಸಭಾ ಚುನಾವಣೆಗಳು - 2001

ಪ. ಬಂಗಾಳ

ವಿಶ್ವವಿಕ್ರಮ ಸಾಧಿಸಿದ ಎಡರಂಗ

ಕತ್ತಲೆಯ ಧಾಳಿಯನ್ನು ಹಿಮ್ಮೆಟ್ಟಿಸಿದ ಬೆಳಕುಂಡ ಜನ

ಪಶ್ಚಿಮ ಬಂಗಾಲದ ಜನತೆ ಹೊಸ ಇತಿಹಾಸವನ್ನೇ ಬರೆದಿದ್ದಾರೆ. 1977 ರಿಂದ 24ವರ್ಷಗಳ ಕಾಲ ನಿರಂತರವಾದ ಬೆಳಕಿನ ಹೊನಲಿನಲ್ಲಿ ಜೀವಿಸಿದ ಬಂಗಾಲದ ಜನತೆ ಕತ್ತಲೆಯಶಕ್ತಿಗಳು ಒಟ್ಟಾಗಿ ನಡೆಸಿದ ಧಾಳಿಯ ವಿರುದ್ಧ ಅಪ್ರತಿಮವಾಗಿ ಸೆಣಸಿದ್ದಾರೆ. 1971 ರಿಂದ 1977 ರವರೆಗೆ ಬಂಗಾಲವನ್ನು ಆವರಿಸಿದ್ದ ಗಾಡಾಂಧಕಾರ-ದೇಶ ಅನುಭವಿಸಿದ ತುರ್ತು ಪರಿಸ್ಥಿತಿಗಿಂತ ವಿಸ್ತಾರವಾದ, ಭೀಕರವಾದ ಹಿಂಸಾಕಾಂಡ ಮತ್ತು ಪ್ರಜಾಪ್ರಭುತ್ವದ ನಾಶದ ಅನುಭವವಿದ್ದ ಜನತೆ ಕತ್ತಲೆಯ ವಿರುದ್ಧ 24 ವರ್ಷಗಳ ಕಾಲ ಎದೆಗೊಟ್ಟು,ದೃಢವಾಗಿ ಹೋರಾಟ ಮಾಡಿದ್ದು ಸಹಜ.

ವಿಶ್ವವಿಕ್ರಮವನ್ನು ಸಾಧಿಸಿದ ಪಶ್ಚಿಮ ಬಂಗಾಳದಲ್ಲಿ ಎಡರಂಗದ ಮಹಾ ವಿಜಯ ಇದು ಪಶ್ಚಿಮ ಬಂಗಾಲದ ಜನತೆಗೆ ಹರುಷದ ಹೊನಲು ಉಕ್ಕಿಸುವ ಸಂಗತಿ. 24 ವರ್ಷಗಳ ಕಾಲ ನಿರಂತರವಾಗಿ ಹರಿದ ಬೆಳಕಿನ ಹೊನಲನ್ನು ಉಳಿಸಿಕೊಂಡೆವು ಎಂಬ ನೆಮ್ಮದಿ. ಇದು ಪ.ಬಂಗಾಲದ ಜನತೆ ಇಡೀ ದೇಶಕ್ಕೆ ಕೊಟ್ಟ ಕೊಡುಗೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಹಾವಳಿಯಿಂದ ಕಂಗೆಟ್ಟ ಭಾರತದ ರೈತರಿಗೆ, ಕಾರ್ಮಿಕರಿಗೆ, ಬ್ಯಾಂಕ್, ವಿಮೆ ಮೊದಲಾದವುಗಳ ಉದ್ಯೋಗಿಗಳಿಗೆ ಈ ಗೆಲವು ಒಂದು ಆಶಾಕಿರಣ. ತಮ್ಮ ಹೋರಾಟವನ್ನು ಉತ್ತುಂಗಕ್ಕೊಯ್ಯಲು ನೀಡಿದ ಉತ್ತೇಜನ.

ಭಾರತದ ಸಿಐಐ, ಫಿಕ್ಕಿ(ಭಾರತದ ಕೈಗಾರಿಕಾ ಮಾಲೀಕರ ಸಂಘಗಳು) ಗಳಿಗೆ, ಹಣದಾಹದ ಬಕಾಸುರರಿಗೆ ಒಂದು ದುಸ್ವಪ್ನ. ಭಾರತದಬಂಡವಾಳ ಶಾಹಿಗಳು ಮಾತ್ರವೇ ಅಲ್ಲ ವಿಶ್ವದ ಹಣಕಾಸು ಬಂಡವಾಳಿಗರಿಗೆ ಎನ್ರಾನ್, ಕೊಜೆಂಟ್ರಿಕ್ಸ್‌ಗಳಿಗೆ, ಮೈಕ್ರೊ ಸಾಫ್ಟ್,ಕಾರ್ಗಿಲ್, ಮಾನ್ಸಂಟೋ, ಕೋಕಾಕೋಲಗಳಿಗೆ ತಲೆನೋವು.ಇವುಗಳ ಏಜೆಂಟರಾದ ವಿಶ್ವಬ್ಯಾಂಕ್, ವಿಶ್ವವ್ಯಾಪಾರ ಸಂಸ್ಥೆಗಳಿಗೆ ಭಾರತವನ್ನು ಜಾಗತೀಕರಿಸುವ ದಾರಿಯಲ್ಲಿನ ದೊಡ್ಡ ಬಂಡೆಗಲ್ಲು ಎಡರಂಗದ ಈ ವಿಜಯ.

ವಿಶ್ವದಲ್ಲಿ ಪ್ರಜಾಪ್ರಭುತ್ವವೆಂಬ ಬಂಡವಾಳಶಾಹಿಗಳ ಆಳ್ವಿಕೆಯಲ್ಲಿ ಎಲ್ಲಿಯೂ ಕಂಡರಿಯದ ವಿಶ್ವದಾಖಲೆ ಪ.ಬಂಗಾಲದ ಎಡರಂಗದ ವಿಜಯ. ಜಗತ್ತಿನೆಲ್ಲಾ ಪ್ರಗತಿಪರಶಕ್ತಿಗಳಿಗೆ, ಕಮ್ಯುನಿಸ್ಟ್ ಪಕ್ಷಗಳಿಗೆ ಅಚ್ಚರಿ ತಂದ ಮಾದರಿ.

ಒಟ್ಟಿನಲ್ಲಿ ಭಾರತದ ಪಾಳೆಯಗಾರಿ ಹಾಗೂ ಬಂಡವಾಳಶಾಹಿ, ವಿಶ್ವದ ಬಂಡವಾಳಶಾಹಿಗಳೊಂದು ಕಡೆಯಾಗಿ ಭಾರತದ ಜನತೆಯೊಂದು ಕಡೆಯಾಗಿ ನಡೆದಿರುವ ಮಹಾ ಸಮರದಲ್ಲಿ ಜನತೆಗೆ ಸಂದ ವಿಜಯ.

ಭಾರತದ ಹಾಗೂ ವಿಶ್ವದ ಕತ್ತಲ ಶಕ್ತಿಗಳು ಹಾಗೂ ಭಾರತಕ್ಕೆ ಬೆಳಕನ್ನು ನೀಡ ಬಯಸುವ ಶಕ್ತಿಗಳ ನಡುವಣ ಮಹಾಸಮರದಲ್ಲಿ ಬೆಳಕಿಗೆ ಸಂದ ವಿಜಯ.

ಇಡೀ ಭಾರತ ಜನತೆ ಇಂದು ವಿಜಯದಿಂದ ಸ್ಫೂರ್ತಿ ಪಡೆಯಬೇಕಾಗಿದೆ.

ಸೇರಿಕೊಳಿ, ಕೂಡಿಕೊಳಿ, ಮುನ್ನುಗ್ಗುವ ಸಾಹಸಕ್ಕೆ ಕತ್ತಲೊಡನೆ ಹೂಡಿದ ಈ ಉತ್ಸಾಹದ ದಾಳಿಗೆ ಕೂಡಿಸಿರೆದೆ ಕೊರಲುಗಳನು ಹೊಸಬಾಳಿನ ಹಾಡಿಗೆ

ಜಿ.ಎನ್.ನಾಗರಾಜ್

	2001			1996
ಪಕ್ಷ	ಸ್ಥಾನಗಳು	ಚಲಾಯಿತ ಮತ	ಶೇಕಡವಾರು	ಸ್ಥಾನ
ಸಿಪಿಐ(ಎಂ)	143	1,33,98,680	36.59	150
ಸಿಪಿಐ	07	6,55,171	01.79	06
ಫಾರ್ವರ್ಡ್ ಬ್ಲಾಕ್	25	20,67,820	05.65	21
ಆರ್.ಎಸ್.ಪಿ	17	12,56,948	03.43	18
ಡಬ್ಲ್ಯುಬಿಎಸ್‌ಪಿ	04	2,46,407	00.67	1
ಡಿಎಸ್‌ಪಿ	02	1,40,374	00.38	2
ಎಂಎಫ್‌ಬಿ	01	69,186	00.18	2
ಆರ್‌ಸಿಪಿಐ	-	48,298	00.13	-
ಇತರೆ	-	36,834	00.10	9
ಎಸ್.ಪಿ.				3
ವಿಪ್ಲವಿ ಬಾಂ.ಕಾಂ.				1
ಎಡರಂಗ	**199**	**1,79,19,718**	**48.94**	**203**
ಕಾಂಗ್ರೆಸ್	26	29,16,858	07.97	82
ತೃಣಮೂಲ	60	1,12,29,170	30.67	
ಕಾಂಗ್ರೆಸ್ ಬಣ	**86**	**1,42,50,458**	**38.92**	
ಬಿಜೆಪಿ	-	19,00,759	05.19	
ಪಿಡಿಎಸ್	-	2,22,108	00.61	
ಜಿಎನ್‌ಎಲ್	3			
ಇತರೆ	6	22,49,925	06.14	

ಸುಳ್ಳಾದ ಮಾಧ್ಯಮಗಳ ಭವಿಷ್ಯ

ಮೂರನೇ ಎರಡರಷ್ಟು ಬಹುಮತ

ಸತತ ಆರನೇ ಬಾರಿಗೆ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಮೂರನೇ ಎರಡರಷ್ಟು ಸ್ಪಷ್ಟ ಬಹುಮತ ಪಡೆದ ಎಡರಂಗ ಸರಕಾರ ವಿಶ್ವದಾಖಲೆಯನ್ನೇ ಸ್ಥಾಪಿಸಿದೆ. ಶ್ರೀಮಂತ ಬಂಡವಾಳಿಗರ, ಸಾಮ್ರಾಜ್ಯಶಾಹಿ ಏಜೆಂಟರ ಕಪಟ ನಾಟಕಗಳಿಗೆ ತೆರೆ ಎಳೆದಿದೆ. ಮಾಧ್ಯಮಗಳಿಂದ 'ಗಾಳಿ' ತುಂಬಿಸಿಕೊಂಡ ತೃಣಮೂಲ-ಕಾಂಗ್ರೆಸ್ ಬೆಲೂನ್ 'ಟುಸ್' ಎಂದಿತು. ಕೋಮುವಾದಿ ಬಿಜೆಪಿ ಇದ್ದ ಒಂದು ಸ್ಥಾನವನ್ನೂ ಕಳೆದುಕೊಂಡಿತು.

ಸಿಪಿಐ(ಎಂ)ನಿಂದ ಹೊರಹಾಕಲ್ಪಟ್ಟ 'ಪ್ರಮುಖ' ಮುಖಂಡರು ಠೇವಣಿ ಇಲ್ಲದೆ ಮನೆಗೆ ತೆರಳಬೇಕಾಯಿತು.

ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ. ಹೆಚ್.ನರಸಿಂಹಯ್ಯನವರ ಮಾತಿನಲ್ಲಿ ಹೇಳುವುದಾದರೆ 'ಬೇರು ಮಟ್ಟದಲ್ಲಿ ಸೈದ್ಧಾಂತಿಕ ತಳಹದಿಯನ್ನು ಹಾಕಿದ, ಜನರೊಂದಿಗೆ ನಿಕಟ ಸಂಪರ್ಕ ಹೊಂದಿದ, ಬಂಗಾಳದ ಕಮ್ಯುನಿಸ್ಟರು ಮಹಾ ಸಾಧನೆಯನ್ನೇ ಮಾಡಿದರು ಹ್ಯಾಟ್ಸ್ ಆಫ್ ಬೆಂಗಾಲ್ ಪೀಪಲ್".

ಒಟ್ಟು 294 ಬಲದ ವಿಧಾನಸಭೆಯಲ್ಲಿ ಎಡರಂಗ 199 ಸ್ಥಾನಗಳನ್ನು ಗಳಿಸಿದೆ. ತೃಣಮೂಲ-ಕಾಂಗ್ರೆಸ್ ಕೂಟ 86.

ಉತ್ತರ ಬಂಗಾಳದಲ್ಲಿ (ಡಾರ್ಜಿಲಿಂಗ್ ಬಿಟ್ಟು) ಭರ್ಜರಿ ಜಯಗಳಿಸಿದ ಎಡರಂಗ ಕೂಚ್ ಬಿಹಾರ್ ಮತ್ತು ದಕ್ಷಿಣ ದಿವಾಚ್‌ಪುರ್ ಜಿಲ್ಲೆಗಳಲ್ಲಿ ವಿರೋಧಿಗಳಿಗೆ ಒಂದು ಸ್ಥಾನವನ್ನು ನೀಡಿಲ್ಲ. ಕಲ್ಕತ್ತದಲ್ಲಿ ತನ್ನ ಸ್ಥಿತಿಯನ್ನು ಉತ್ತಮಗೊಳಿಸಿದೆ. ಕಲ್ಕತ್ತದಲ್ಲಿ ತನ್ನ ಸ್ಥಿತಿಯನ್ನು ಉತ್ತಮಗೊಳಿಸಿದೆ.

ಮೂರನೇ ರಂಗಕ್ಕೆ ಸಹಾಯ - ಜ್ಯೋತಿಬಸು: ಎಡರಂಗದ ಭರ್ಜರಿ ವಿಜಯದ ನಂತರ ಕಿಕ್ಕಿರಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಮ್ರೇಡ್ ಜ್ಯೋತಿಬಸು ದೇಶದ ಒಳಗಿನ ಮತ್ತು ಹೊರಗಿನ ಕಮ್ಯುನಿಸ್ಟ್ ವಿರೋಧಿಗಳ ಕುತಂತ್ರವನ್ನು ದಿಟ್ಟವಾಗಿ ಎದುರಿಸಿದ ಬಂಗಾಳದ ಮತದಾರರನ್ನು ಮನಸಾರೆ ಅಭಿನಂದಿಸಿದರು. **ಮಾಧ್ಯಮಗಳ ಸುಳ್ಳು 'ಭವಿಷ್ಯ', 'ಜನಾಭಿಪ್ರಾಯ'ಗಳನ್ನು ಹುಸಿಗೊಳಿಸಿದ ಮತದಾರರು, ಕೋಮುವಾದಿ ಬಿಜೆಪಿ, ಪ್ರತ್ಯೇಕತವಾದಿ ಕಮ್ತಾಪುರಿ ಮತ್ತು ಜಾರ್ಖಂಡ್ ವಾದಿಗಳನ್ನು ಮೂಲೆಗುಂಪು ಮಾಡಿದ್ದಾರೆ** ಎಂದು ಹೇಳುತ್ತಾ, ರಾಷ್ಟ್ರೀಯ ಮಟ್ಟದಲ್ಲಿ ಮೂರನೇ ರಂಗವನ್ನು ಕಟ್ಟಲು ಇದು ಸಹಾಯವಾಗುವುದು ಎಂದು ಬಣ್ಣಿಸಿದರು.

ಎಡರಂಗ ಸರ್ಕಾರದ ಮುಂದಿರುವ ಸವಾಲುಗಳನ್ನು ವಿವರಿಸಿದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಆದ್ಯತೆ ನೀಡುವುದಾಗಿ ತಿಳಿಸಿದರು ಮತ್ತು ಭಾರಿ ಕೈಗಾರಿಕೆಗಳು ಹಾಗೂ ಸಂಪರ್ಕ ತಂತ್ರಜ್ಞಾನಕ್ಕೂ ಉತ್ತೇಜನ ನೀಡುವುದಾಗಿ ಹೇಳಿದರು.

ಶೈಲೇನ್ ದಾಸ್ ಗುಪ್ತಾ, ಅನಿಲ್ ಬಿಸ್ವಾಸ್ ಮುಂತಾದವರು ಮಾತನಾಡಿದರು. ಬಂಗಾಳದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಲು ಎಡರಂಗದ ಎಲ್ಲ ಮುಖಂಡರು ಜನತೆಯಲ್ಲಿ



ಮುಖ್ಯಮಂತ್ರಿಯಾಗಿ ಮತ್ತೆ ಪ್ರಮಾಣವಚನ ಸ್ವೀಕರಿಸುತ್ತಿರುವ ಬುದ್ಧದೇವ್, ರಾಜ್ಯಪಾಲ ಬಿರೇನ್ ಷಾ

ಐದು ರಾಜ್ಯಗಳ ಫಲಿತಾಂಶ

ಬಿಜೆಪಿ ಕೂಟದ ಹೀನಾಯ ಸೋಲು

ಕಳೆದ ವಾರ ನಡೆದ 5 ವಿದಾನ ಸಭಾ ಚುನಾವಣಾ ಫಲಿತಾಂಶ ಬಿಜೆಪಿ ಹಾಗೂ ಎನ್.ಡಿ.ಎ. ಸರ್ಕಾರಕ್ಕೆ ದೊಡ್ಡ ಪೆಟ್ಟು ನೀಡಿದೆ. ಐದೂ ರಾಜ್ಯಗಳಲ್ಲಿ ಬಿಜೆಪಿ ಮತ್ತು ಮಿತ್ರ ಪಕ್ಷಗಳು ಹೀನಾಯ ಸೋಲು ಅನುಭವಿಸಿವೆ. ಬಿಜೆಪಿಯ ಅತಿರಥ ಮಹಾರಥರೆಲ್ಲರೂ ಪ್ರಚಾರಕ್ಕಿಳಿದ ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಒಂದೇ ಒಂದು ಸ್ಥಾನವನ್ನು ಪಡೆಯಲಾಗಿಲ್ಲ. ತಮಿಳು ನಾಡಿನಲ್ಲಿ ಡಿ.ಎಂ.ಕೆ–ಬಿಜೆಪಿ ಮೈತ್ರಿಕೂಟ ಅನುಭವಿಸಿರುವ ಸೋಲು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಮೈತ್ರಿಕೂಟದ ಮೇಲೂ ಪ್ರತಿಕೂಲ ಪರಿಣಾಮ ಬೀರಲಿದೆ. ತಮಿಳು ನಾಡಿನಲ್ಲಿ ಹೆಚ್ಚು ಮಿತ್ರ ಪಕ್ಷಗಳನ್ನು ಹೊಂದಿದ್ದ ಎನ್.ಡಿ.ಎ. ಚುನಾವಣಾ ಫಲಿತಾಂಶದಿಂದ ತತ್ತರಿಸಿದೆ. ಎ.ಐ.ಎ.ಡಿ.ಎಂ.ಕೆ ಮತ್ತು ಮಿತ್ರ ಪಕ್ಷಗಳು ಪಡೆದಿರುವ ನಿಚ್ಚಳ ಬಹುಮತ ಡಿ.ಎಂ.ಕೆ–ಬಿಜೆಪಿ ಮೈತ್ರಿಕೂಟದ ದುರಾಡಳಿತಕ್ಕೆ ಕನ್ನಡಿಯಂತಿದೆ.

ಅಸ್ಸಾಂನಲ್ಲಿ ಕೊನೆಗಳಿಗೆಯಲ್ಲಾದ ಎ.ಜಿ.ಪಿ–ಬಿಜೆಪಿ ಅವಕಾಶವಾದಿ ಮೈತ್ರಿಕೂಟವನ್ನು ಜನತೆ ತಿರಸ್ಕರಿಸಿದ್ದಾರೆ. ಎ.ಜಿ.ಪಿ. ಸರ್ಕಾರದ ಕೆಟ್ಟ ಆಡಳಿತ ಮತ್ತು ಎರಡೂ ಪಕ್ಷಗಳ ನಡುವಿನ ಕಿತ್ತಾಟ ಕಾಂಗ್ರೆಸ್‌ಗೆ ಗೆಲ್ಲಿಸಲು ಅವಕಾಶ ಮಾಡಿಕೊಟ್ಟಿದೆ.

ಚುನಾವಣೆಯಲ್ಲಿ ಬಿಜೆಪಿಯ ಈ ಫಲಿತಾಂಶ ಜನರು ವಾಜಪೇಯಿ ಸರ್ಕಾರ ಅನುಸರಿಸುತ್ತಿರುವ ದೊಡ್ಡ ಬಂಡವಾಳಗಾರರು ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ಓಲೈಸುವಿಕೆ, ಭ್ರಷ್ಟಾಚಾರದ ಹಗರಣಗಳ ಸರಮಾಲೆ ಅದರಲ್ಲೂ ತೆಹೆಲ್ಕಾ ಬಹಿರಂಗ ಪಡಿಸಿದ ಹಗರಣ, ಇವುಗಳನ್ನು ತಿರಸ್ಕರಿಸಿರುವುದನ್ನು ತೋರಿಸುತ್ತದೆ. ಬಿಜೆಪಿ ಜೊತೆ ಸಖ್ಯ ಬೆಳೆಸಿರುವ ಪಕ್ಷಗಳು ಈಗಲಾದರೂ ಎಚ್ಚೆತ್ತುಕೊಂಡು, ಬಿಜೆಪಿಯಿಂದ ದೂರ ಸರಿದು ತಮಗಿರುವ ಜನ ಬೆಂಬಲವನ್ನು ರಕ್ಷಿಸಿಕೊಳ್ಳಬೇಕಾಗಿದೆ.

ಕೇಂದ್ರ ಸರ್ಕಾರದ ಇಂತಹ ವಿನಾಶಕಾರಿ ಆರ್ಥಿಕ ಧೋರಣೆಯ ವಿರುದ್ಧದ ತನ್ನ ಹೋರಾಟವನ್ನು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಪುನರುಚ್ಚರಿಸಿದೆ. ಇತ್ತೀಚಿನ ಅಮೇರಿಕಾ ಮಿಸ್ಸೈಲ್ ಕಾರ್ಯಕ್ರಮಕ್ಕೆ ತಲೆಬಾಗಿದ ಕೇಂದ್ರ ಸರ್ಕಾರದ ನಿಲುವನ್ನೂ ಪೊಲಿಟ್ ಬ್ಯೂರೋ ಖಂಡಿಸಿದೆ.

ಐದು ರಾಜ್ಯಗಳ ಈ ಚುನಾವಣಾ ಫಲಿತಾಂಶ ಮೂರನೇ ಪರ್ಯಾಯವನ್ನು ಬಲಪಡಿಸಬೇಕಾದ ಅನಿವಾರ್ಯವನ್ನು ಎತ್ತಿ ತೋರಿಸಿದೆ. ವಾಜಪೇಯಿ ಸರ್ಕಾರದ ವಿರುದ್ಧ ಸಂಯುಕ್ತ ಹೋರಾಟಗಳು ಹಾಗೂ ಚಳುವಳಿಯನ್ನು ಗಟ್ಟಿಗೊಳಿಸುತ್ತಾ ಇತ್ತೀಚೆಗೆ ರಚನೆಯಾಗಿರುವ ಜನತಾ ರಂಗವನ್ನು ರಾಷ್ಟ್ರೀಯ ಪರ್ಯಾಯವಾಗಿ ಬೆಳೆಸಲು ಶ್ರಮಿಸಬೇಕೆಂದು ಸಿ.ಪಿ.ಐ(ಎಂ) ಕರೆ ನೀಡಿದೆ.

ವಿಧಾನಸಭಾ ಚುನಾವಣೆಗಳು - 2001

ತಮಿಳುನಾಡು

ಧೂಳೀಪಟವಾದ ಡಿಎಂಕೆ-ಬಿಜೆಪಿ ಕೂಟ

ಎಸ್.ವೈ.ಗುರುಶಾಂತ್

ರಂಗು ರಂಗಿನ ರಾಜಕಾರಣ ಆದರೆ ಭಾರೀ ಹಣಾಹಣಿಯ ಚುನಾವಣ ಹೋರಾಟದಲ್ಲಿ ತಮಿಳುನಾಡಿನ ಜನತೆ ಅದ್ಭುತ ತೀರ್ಪನ್ನು ನೀಡಿದ್ದಾರೆ. 'ನನಗಾರು ಸಮರಿಲ್ಲ, ಸೋಲಿನ ಸೊಲ್ಲೇ ಇಲ್ಲ' ಎಂದು ಕೊಬ್ಬಿ ಮೆರೆಯುತ್ತಿದ್ದ ಬಿಜೆಪಿ ಮೈತ್ರಿಕೂಟದ ಡಿಎಂಕೆ ಕರುಣಾನಿಧಿ ಬಳಗವನ್ನು ದಯನೀಯವಾಗಿ ಸೋಲಿಸಿ ಧೂಳೀಪಟವಾಗಿಸಿದ್ದಾರೆ. ತಂತ್ರ-ಕುತಂತ್ರಗಳನ್ನು ತುಳಿದಿದ್ದಾರೆ. ಮತ್ತೆ ಜಯಲಲಿತರ ಎಐಡಿಎಂಕೆ ಕೂಟ 'ಸೆಕ್ಯುಲರ್ ಫ್ರಂಟ್' ಕಣ್ಣು ಕೋರೈಸುವಂತೆ ಅಧಿಕಾರಕ್ಕೆ ಬಂದಿದೆ. ಅಲ್ಲಿ ಜನ ತೀರ್ಮಾನಿಬಿಟ್ಟಿದ್ದಾರೆ. 'ಕೊಟ್ಟರೆ ಸರಿಯಾದ ಏಟನ್ನೇ ಕೊಟ್ಟುಬಿಡಬೇಕು' ಎಂದು. ಇದರಿಂದ ಆಳಿದವರು, ಆಳುವವರು ಎಚ್ಚೆತ್ತುಕೊಂಡಾರೆಯೇ?

ನಾಮಪತ್ರವನ್ನು ತಿರಸ್ಕರಿಸಿ ಜಯಲಲಿತಾ ಸ್ಪರ್ಧೆಯಲ್ಲೇ ಇರದಂತೆ ಮಾಡಿ, ಸೆಕ್ಯುಲರ್ ಫ್ರಂಟ್ ಸೋಲಿಸಲು ಏನೆಲ್ಲಾ ತಂತ್ರ-ಕುತಂತ್ರ ಹೆಣೆದರೂ ಜನತೆ ಅದನ್ನೆಲ್ಲಾ ಹರಿದೊಗೆದು ಡಿಎಂಕೆ ಕೂಟ ತಿರಸ್ಕರಿಸಿ, ಜಯಲಲಿತಾರನ್ನು ಗೆಲ್ಲಿಸಿದ್ದಾರೆ. ಎನ್‌ಡಿಎ ನಾಯಕರು ಪತ್ರಿಕೆಗಳಲ್ಲಿ ಏನೇ ಹೇಳಲಿ ಇದು ಎನ್‌ಡಿಎ ಕೂಟದ ನೀತಿಗಳಿಗೆ ಜನತೆ ನೀಡಿದ ಭಾರೀ ಪ್ರಹಾರ.

ಉಕ್ಕಿ ಹರಿದ ಜನರ ಉತ್ಸಾಹ:

ಈ ಹೋರಾಟದಲ್ಲಿ ಜನರ ಉತ್ಸಾಹ ಉಕ್ಕಿ ಹರಿದಿದೆ. ಟಿ.ವಿ.ಯ ಚಾನಲ್ ಒಂದರಲ್ಲಿ ಎಐಡಿಎಂಕೆ ಕೂಟದ ಗೆಲುವನ್ನು ಪ್ರಕಟಿಸುವಾಗ ಜನಜಂಗುಳಿಯನ್ನು ತಳ್ಳಿಕೊಂಡೇ ಹಣ್ಣು ಹಣ್ಣು ಮುದುಕಿಯೊಬ್ಬಳು ಎರಡು ಬೆರಳೆತ್ತಿ ವಿಜಯ ಸಂಕೇತವನ್ನು (V) ತೋರಿಸುತ್ತಿದ್ದಳು. ಲಾಲ್‌ಗುಡಿ ಕ್ಷೇತ್ರದ ಮತದಾರರು ಕುಡಿವ ನೀರನ್ನು ಒದಗಿಸಲಾಗದ ತಮ್ಮ ಶಾಸಕ, ಸಚಿವ ಎಂ.ಸಿ.ನೆಹರೂನನ್ನು ಸೋಲಿಸಲು ತಲಾ 25-50 ರೂ.ಗಳನ್ನೇ ಒಟ್ಟು ಮಾಡಿ ಹೋರಾಡಿದರಂತೆ. ಜನರ ಪ್ರತಿಕ್ರಿಯೆಗೆ ಇವು ಒಂದೆರಡು ಉದಾಹರಣೆ.

ಎಐಡಿಎಂಕೆ ಮೈತ್ರಿಕೂಟ 234 ಸದಸ್ಯತ್ವದ ವಿಧಾನಸಭೆಯಲ್ಲಿ 195 ಸ್ಥಾನ ಮಡಿಲಿಗೆ ಹಾಕಿಕೊಂಡು ಭಾರಿ ಗೆಲುವು ಸಾಧಿಸಿದೆ. 172 ಸ್ಥಾನಗಳಿಸಿದ್ದ ಡಿಎಂಕೆ 18 ಪಕ್ಷಗಳೊಂದಿಗೆ ಸೇರಿ ಕಸರತ್ತು ಮಾಡಿ 36 ಕ್ಕೆ ಕುಸಿದಿದೆ. ಎಐಡಿಎಂಕೆ ಕೂಟಕ್ಕೆ ಒಂದು ಕೋಟಿ 40 ಲಕ್ಷ ಮತಪಡೆದರೆ, ಡಿಎಂಕೆ ಕೂಟ 1 ಕೋಟಿ 8 ಲಕ್ಷ, ಅಂದರೆ ಸುಮಾರು 32 ಲಕ್ಷ ಮತಗಳ ವ್ಯತ್ಯಾಸವಿದೆ.

ತಮಿಳುನಾಡು ವಿಧಾನಸಭೆ-2001			
ಎಐಡಿಎಂಕೆ ರಂಗ	ಸ್ಪರ್ಧಿಸಿದ್ದ ಸ್ಥಾನಗಳು	ಪಡೆದದ್ದು	1996 ರಲ್ಲಿ
ಎಐಡಿಎಂಕೆ	141	132	4
ತ.ಮನಿಲ ಕಾಂಗ್ರೆಸ್	47	22	
ಕಾಂಗ್ರೆಸ್			39
ಪಿಎಂಕೆ	27	20	4
ಸಿಪಿಐ(ಎಂ)	8	6	1
ಸಿಪಿಐ	8	5	8
ಫಾರ್ವರ್ಡ್‌ಬ್ಲಾಕ್	1	1	
ಆರ್.ಎಸ್.ಪಿ	1	1	
ಐಎನ್‌ಎಲ್	1	1	
ಸ್ವತಂತ್ರ		1	5
ಒಟ್ಟು		195	
ಡಿಎಂಕೆ	167	27	172
ಬಿಜೆಪಿ	21	4	
ಟಿಎಂಸಿ ಡೆಮಾಕ್ರೆಟಿಕ್	-	2	
ದಲಿತ ಪ್ಯಾಂಥರ್ ಫೋರ್ಸ್	8	1	
ಪುದಿಯ ತಮಿಝುಗಂ	10		36

ಜನರ ತೀರ್ಪಿಗೆ ದ್ರೋಹ ಬಗೆದ ಡಿಎಂಕೆ

ಕೆಲವು ಪತ್ರಿಕೆ, ಟಿ.ವಿ.ಗಳಂತಹ ಮಾಧ್ಯಮಗಳು ಸಮೀಕ್ಷೆಯೆಂಬ ತಮ್ಮ ಮಾಲೀಕರ ಮನ ತಣಿಸುವ ಅಮೋಘ ಹಾಡುಗಾರಿಕೆಯಲ್ಲಿ 'ಕರುಣಾನಿಧಿ' ರಂಗವನ್ನೇ ಗೆಲ್ಲಿಸಿದರು. ಚುನಾವಣೆಗಳು ನಿರ್ಣಾಯಕ ಹಂತ ತಲುಪುತ್ತಿರುವಂತೆ, ಜಯಲಲಿತಾ ಕೂಟಕ್ಕೆ ಜನರು ಅಪಾರವಾಗಿ ಒಲಿದು, ಬೆಂಬಲಿಸುತ್ತಿರುವುದನ್ನು ಬಚ್ಚಿಡಲಾಗದೇ ಅತಂತ್ರ ಸ್ಥಿತಿ ಸೃಷ್ಟಿಸಿದರು. ಇವೆಲ್ಲಾ ತಲೆ ಕೆಳಗಾದಾಗ ಎಲ್ಲೆಲ್ಲೂ ಕಾಣುವಂತೆ ಸರ್ಕಾರ ವಿರೋಧಿ ಮನೋಭಾವದ ಛಾಪೆ ಬಿಚ್ಚಿದ್ದಾರೆ... ಆದರೆ ನಿಜವಾದ ಹೂರಣಗಳತ್ತ ಒಂದು ನೋಟವನ್ನು ಹರಿಸಬಹುದು.



ಪರ್ಯಾಯಕ್ಕಾಗಿ ಜನತೆ ಕೊಟ್ಟ ವಿಜಯ

ಹಿಂದಿನ ಚುನಾವಣೆಯಲ್ಲಿ ಜನರು ಜಯಲಲಿತಾ ಕೂಟವನ್ನು ಸಹ ಎಣಿಸಲಾರದಷ್ಟು ಹೀನಾಯವಾಗಿ ಸೋಲಿಸಿದ್ದರು(ಕೇವಲ 4 ಸ್ಥಾನ). ಕರುಣಾನಿಧಿಯವರಿಗೆ ಭಾರೀ ಬೆಂಬಲವನ್ನೇ ನೀಡಿದ್ದರು. ಆದರೆ ಜನರು ಇರಿಸಿದ ಅಗಾಧ ನಿರೀಕ್ಷೆಗಳಿಗೆ ಕಿಂಚಿತ್ತು ಸ್ಪಂದಿಸಲಿಲ್ಲ. ಸಮಸ್ಯೆಗಳನ್ನು ಬಗೆಹರಿಸಲಿಲ್ಲ. ರಾಷ್ಟ್ರದ ಹಿತ ಕಾಯಲೆಂಬ ಹಳಸಲು ಘೋಷಣೆ ಹೇಳಿ ಜನರ ತೀರ್ಪಿಗೆ ದ್ರೋಹ ಬಗೆದು ಕೋಮುವಾದಿ ಬಿಜೆಪಿಯ ಬಣ ಸೇರಿದರು. ಈ ಎನ್‌ಡಿಎ ಕೂಟ ದೇಶದ ಕೈಗಾರಿಕೆ, ಕೃಷಿ ರಂಗವನ್ನು ನಾಶಗೊಳಿಸತೊಡಗಿತು. ಐಎಂಎಫ್, ವಿಶ್ವಬ್ಯಾಂಕಿನ ನಿರ್ದೇಶನಕ್ಕೆ ಡಿಎಂಕೆ ಯ ಮುರಸೋಳಿಮಾರನ್ ಕೇಂದ್ರದಲ್ಲಿ ಸಚಿವರಾಗಿ ಸಮರ್ಥಿಸುವುದಷ್ಟೇ ಅಲ್ಲ ಅದನ್ನು ದಣಿಯದೇ ಜಾರಿಗೊಳಿಸಿದರು. ಭತ್ತ, ರಬ್ಬರ್, ಕಾಳುಗಳು, ಕಬ್ಬು, ಬಾಳೆಹಣ್ಣು, ತೆಂಗು, ಹತ್ತಿ, ತರಕಾರಿ ಬೆಲೆಗಳು ಕುಸಿದು ರೈತರು, ನೇಕಾರರು ತತ್ತರಿಸಿ ಆತ್ಮಹತ್ಯೆಗೀಡಾದಾಗ ಕರುಣಾನಿಧಿಯವರ ಬಾಯಿಯಲ್ಲಿ ಕರುಣೆಯ ಎರಡು ಮಾತು ಹೊರಡಲಿಲ್ಲ. ದೇಶದ ಆಸ್ತಿಯಾಗಿರುವ ಸಾರ್ವಜನಿಕ ಉದ್ದಿಮೆಗಳನ್ನು ಮಾರುವಾಗ, ಅದರಲ್ಲೂ ತೆಹಲ್ಕಾ ಬಯಲಿಗೆಳೆದ ಭಾರಿ ರಕ್ಷಣಾ ವ್ಯವಹಾರದ ಮಹಾ ದೇಶದ್ರೋಹ ಬಯಲಿಗೆ ಬಂದಾಗಲೂ ಕರುಣಾನಿಧಿ ವಾಜಪೇಯಿಯವರನ್ನೇ ನಾಚಿಕೆಯಿಲ್ಲದೆ ಸಮರ್ಥಿಸಿದರು. ತಮ್ಮ ಸಾಮರ್ಥ್ಯ, ಬಲ, ನೆಂಟಸ್ಥಿಕೆಯನ್ನಾದರೂ ಬಳಸಿ ರಾಜ್ಯಕ್ಕೆ ಸಲ್ಲಬೇಕಾದ ಹಣ, ಅಭಿವೃದ್ಧಿಯ ಸಂಪನ್ಮೂಲಗಳನ್ನು ತರಲಿಲ್ಲ.

ಜಯಲಲಿತಾ ಭ್ರಷ್ಟಾಚಾರದ ವಿರುದ್ಧ ಸಿಡಿದೆದ್ದ ಕರುಣಾನಿಧಿಯವರ ಸರ್ಕಾರದ ಭ್ರಷ್ಟಾಚಾರ ಮೇಲ್ ಮಟ್ಟದಿಂದ ಹಳ್ಳಿ ಹಳ್ಳಿಯ ತಳದವರೆಗೆ ಹಬ್ಬಿ ಜನರನ್ನು ಕಿತ್ತು ತಿನ್ನತೊಡಗಿತು.

ಕರುಣಾನಿಧಿ ನಂತರ ಮಹಾನಾಯಕನೆಂದು ಬಿಂಬಿಸಲಾಗುತ್ತಿರುವ, ಅವರ ಮಗ, ಮೇಯರ್ ಸ್ಟಾಲಿನ್ ಅಧಿಕಾರವಿರುವ ಮದ್ರಾಸ್ ನಗರದಲ್ಲೇ ಜನರು ಕುಡಿಯುವ ನೀರಿಗೆ ಹಾಹಾಕಾರವಿಡುವುದು, ಅತೀ ದುಬಾರಿ ಹಣ ತೆತ್ತು ಕೆಲವು ಲೀಟರ್ ನೀರು ಪಡೆಯಬೇಕಾದ ಸ್ಥಿತಿ ಬಂದೊದಗಿದೆ. ಕೊಯಮುತ್ತೂರು, ಮಧುರೈಯಂತಹ ನಗರಗಳಲ್ಲಿ ಅಗತ್ಯ ವಸ್ತುಗಳ ಬೆಲೆಯೇರಿಕೆಯ ಬಾಧೆಯಿಂದ ಬಡವರು, ಕೂಲಿಕಾರರ, ಜನಸಾಮಾನ್ಯರನ್ನು ಉಳಿಸಲಿಲ್ಲ ಸರ್ಕಾರ. ಅಭಿವೃದ್ಧಿಯ ಬಗ್ಗೆ ಏನೆಲ್ಲಾ ಮಾತನಾಡಿದರೂ ಗ್ರಾಮೀಣವನ್ನು ಒಳಗೊಂಡು ಶೂನ್ಯ ಸಾಧನೆ. ಖಜಾನೆಯೂ ಖಾಲಿ..ಮೇಲಾಗಿ ರೈತ ಕಾರ್ಮಿಕವಿರೋಧಿ ನೀತಿ. ಹೀಗೆ ಕರುಣಾನಿಧಿಯವರ ಸರ್ಕಾರ ಎನ್‌ಡಿಎ ಯ ಭಾಗವಾಗಿ ಬಿಜೆಪಿಯ ಕೂಟವನ್ನು ಬೆಂಬಲಿಸಿ ಅವುಗಳನ್ನು ಜಾರಿಗಿಳಿಸಿದ್ದರಿಂದಾಗಿ ಜನರಲ್ಲಿ ಅತೃಪ್ತಿ ಬೆಳೆಯಿತು. ಮಧ್ಯಮವರ್ಗದ ಜನರೂ ಸಹ ಡಿಎಂಕೆಯಿಂದ ಗಣನೀಯ ಪ್ರಮಾಣದಲ್ಲಿ ದೂರ ಸರಿದರು. ಕರುಣಾನಿಧಿಯವರನ್ನು ಉಳಿಸಲು ವಾಜಪೇಯಿ, ಅಡ್ವಾಣಿಯಂತಹ ನಾಯಕರ ದಂಡೇ ರಾಜ್ಯವೆಲ್ಲಾ ಸುತ್ತಿ ಕೂಗಾಡಿ ಹೆಣಗಿದರೂ ಕರುಣಾನಿಧಿಯವರ ಗಾದಿ ಉಳಿಸಲಾಗಲಿಲ್ಲ. ಹೀಗಿರುವಾಗ ಇದು ವಾಜಪೇಯಿ ಕೂಟದ ನೀತಿಗಳಿಗೆ ಜನ ಕೊಟ್ಟ ಪ್ರಬಲ ಪ್ರಹಾರವಲ್ಲವೇ?

ಪಾಂಡಿಚೇರಿ	
ಒಟ್ಟು ಸ್ಥಾನಗಳು	30
ಕಾಂಗ್ರೆಸ್ ಮೈತ್ರಿಕೂಟ	13
ಡಿಎಂಕೆ ಮೈತ್ರಿಕೂಟ	12
ಎಐಡಿಎಂಕೆ ಮೈತ್ರಿಕೂಟ	3
ಇತರೆ	2

ಈ ಬಾರಿ ಡಿಎಂಕೆ ಬಣ ಒಟ್ಟು 18 ಪಕ್ಷಗಳ ಕೂಟ. ದ್ರಾವಿಡ ಚಳುವಳಿಯಿಂದ ಬೆಳೆದು ಬಂದಿದ್ದರೂ ಕೋಮುವಾದಿಗಳೊಂದಿಗೆ 'ಮಧುಚಂದ್ರ' ನಡೆಸಲು ಹಿಂಜರಿಯದ ಕರುಣಾನಿಧಿ ಈ ಚುನಾವಣೆಯಲ್ಲಿ ತಮಿಳುನಾಡಿನ ಬಹುತೇಕ ಎಲ್ಲಾ ಜಾತಿಯ ಪಕ್ಷಗಳೊಂದಿಗೆ ಮೈತ್ರಿ ಏರ್ಪಡಿಸಿಕೊಂಡದು ಯಾದವ ಜಾತಿಯವರ ಮಕ್ಕಳ ತಮಿಳುದೇಶಂ, ಮೊದಲಿಯಾರ್‌ರ ನ್ಯೂಜೆಸ್ಟೀಸ್ ಪಾರ್ಟಿ, ಕೊಂಗನಾಡು ಮಕ್ಕಳಕಚ್ಚಿ, ದಲಿತ ಪ್ಯಾಂಥರ್ಸ್, ಪ್ರತಿಯ ತಮಿಝುಗಂ, ಮುಸ್ಲಿಂ ಯುನೈಟೆಡ್ ಜಮಾತ್ ಹಾಗೂ ವಣ್ಣಿಯೂರರ ಪಕ್ಷ..... ಇತ್ಯಾದಿ. ಜಾತಿ ಜಾತಿಗಳ ನಡುವೆ ಕಲಹಗಳು ತುಂಬಿರುವಾಗ ಈ ಐಕ್ಯತೆಗೆ ಅರ್ಥವೆಲ್ಲಿಯದು? ಎಂಬ ಪ್ರಶ್ನೆ ಹುಟ್ಟುತ್ತದೆ. ಈ ಪಕ್ಷಗಳು ಕೂಡ ಇತ್ತೀಚಿಗಿನವು. ಇಂತಹ ಜಾತಿ ಪಕ್ಷಗಳೊಂದಿಗಿನ ಹೊಂದಾಣಿಕೆ ಜನತೆಯಲ್ಲಿ ನಕಾರಾತ್ಮಕ ಭಾವನೆ ಹುಟ್ಟಿಸಿದೆ. ಆದರೆ ತಮ್ಮ ಜಾತಿಯ ಪಕ್ಷವೆಂದು ಹಲವು ಕಡೆ ಆ ಜನರೇನು ಮತ ನೀಡಿದಂತೆ ಕಾಣುವುದಿಲ್ಲ. ಅಂಡಿಯಾಪಟ್ಟಿ ಕ್ಷೇತ್ರದ ರಾಜಗೋಪಾಲಂಪಟ್ಟಿ ದಲಿ ಕಾಲೋನಿಯ ಮಹಿಳೆಯನ್ನು ಕೇಳಿದರೆ 'ದಲಿತ ಪಕ್ಷ ಡಿಎಂಕೆ ಜೊತೆಗಿರಬಹುದು. ಆದರೆ ನಾನ್ಯಾಕೆ ಓಟು ಹಾಕಲಿ. ನಮ್ಮ ಎಂಎಲ್‌ಎ(ಡಿಎಂಕೆ) ಆಶಿಯನ್ ಮಾಡಿಸಿರುವ ರಸ್ತೆಯು ಕೇವಲ ಮೇಲ್ಜಾತಿಯ ಹಿಂದುಗಳು ವಾಸಿಸುವಲ್ಲಿಗೆ ಮಾತ್ರ ಇದೆ. ನಮ್ಮದು ನೋಡಿ...". ಈ ಜಾತಿ ಪಕ್ಷಗಳು ಒಂದು ಸ್ಥಾನವನ್ನು ಗೆಲ್ಲಲ್ಲ ಬಿಡಿ.

ಇದು ಒಂದು ಕಡೆ, ಇನ್ನೊಂದೆಡೆ ಡಿಎಂಕೆಯ ಸುಮಾರು 74 ಹಾಲಿ ಶಾಸಕರಿಗೆ ಸ್ಪರ್ಧಿಸಲು ಟಿಕೇಟ್ ನೀಡಲಿಲ್ಲ, ಇವರೆಲ್ಲಾ ಒಂದಲ್ಲಾ ಒಂದು

ಪುಟ 10 ಕ್ಕೆ

ಜಯಲಲಿತ ಮುಖ್ಯಮಂತ್ರಿ ಆದದ್ದು ಸರಿಯೇ?

ಭ್ರಷ್ಟಾಚಾರದ ಆರೋಪದಲ್ಲಿ ಶಿಕ್ಷೆಗೆ ಒಳಗಾದವರು ಮುಖ್ಯಮಂತ್ರಿಯಾಗುವುದು ಎಷ್ಟು ಸರಿ? ಇದು ಸಂವಿಧಾನಾತ್ಮಕವೆ? ಎಂಬಿತ್ಯಾದಿ ಚರ್ಚೆಗಳು ಬಿರುಸಿನಿಂದ ನಡೆದೇ ಇವೆ. ಭ್ರಷ್ಟಾಚಾರದ ಹಗರಣದಲ್ಲಿ ಭಾಗಿಯಾಗಿ ಕೋರ್ಟ್ ಶಿಕ್ಷೆಯಾಗಿ ಜೈಲಿನ ಕಂಬಿ ಎಣಿಸಿದ ಕೇರಳದ ಬಾಲಕೃಷ್ಣ ಪಿಳ್ಳೆಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಿದ ಆಯೋಗವು ಜಯಲಲಿತಾ ನಾಮಪತ್ರಗಳನ್ನು ತಿರಸ್ಕರಿಸಿತು. ಅದೊಂದು ಕಡೆ, ಚುನಾವಣಾ ಫಲಿತಾಂಶ ಬರಬರುತ್ತಲೇ ಮುಂದೇನು? ರಾಜಭವನದ ಕ್ರಮವೇನು ಎಂಬ ಕುತೂಹಲ ಎಲ್ಲೆಡೆ. ಅಲ್ಲದೆ ಜನರು ನೀಡಿದ ಪ್ರಚಂಡ ಗೆಲುವು, ಬೆಂಬಲ, ಉತ್ಸಾಹಗಳನ್ನು ಕಂಡ ರಾಜ್ಯಪಾಲರು ಇನ್ನು ಹೆಚ್ಚಿನ ಅಪಾಯಕಾರಿ ಆಟಕ್ಕಿಳಿಯದೇ ಸರ್ಕಾರ ರಚಿಸಲು ಆಹ್ವಾನಿಸಿದರು. ಇದು ಸಂವಿಧಾನಾತ್ಮಕವಾಗಿ ಸರಿಯಾದ ಕ್ರಮ. ಗೆದ್ದ ಶಾಸಕರು ಜಯಲಲಿತಾರನ್ನೇ ನಾಯಕರನ್ನಾಗಿ ಆರಿಸಿದರು. ಇದು ರಾಜ್ಯಪಾಲರಿಗೂ ತಿಳಿಸಲಾಯಿತು. ಆ ಪಕ್ಷದ ಶಾಸಕರು ಆರಿಸಿದ ನಾಯಕರನ್ನೇ ಸರ್ಕಾರ ರಚಿಸಲು ಆಹ್ವಾನಿಸಬೇಕಾದದ್ದು ಸಂವಿಧಾನಾತ್ಮಕವಾದದ್ದು




ವಿಧಾನಸಭಾ ಚುನಾವಣೆಗಳು - 2001

ಕೇರಳ

ಯುಡಿಎಫ್ ಗೆಲುವು

ಒಗ್ಗೂಡಿದ ಕಾಂಗ್ರೆಸ್ ಮತ್ತು ಕೋಮುವಾದಿಗಳು

ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ ಸೋತಿದೆ. ಎಡರಂಗವನ್ನು ಸೋಲಿಸಲು ಜಾತಿ, ಮತ ಸಂಘಟನೆಗಳು, ಬಿಜೆಪಿ, ಆರ್.ಎಸ್.ಎಸ್. ಸಮೂಹ ಇವರೆಲ್ಲರೂ ಒಟ್ಟಾಗಿ ಸೇರಿರುತ್ತಾರೆ. ಬಿಜೆಪಿಯ ಕೇಂದ್ರ ನಾಯಕತ್ವ ತನ್ನ ಮನಸ್ಸಾಕ್ಷಿಯಂತೆ ಮತಚಲಾಯಿಸಲು ಆರ್.ಎಸ್.ಎಸ್., ಬಿಜೆಪಿ ಕಾರ್ಯಕರ್ತರಿಗೆ ಕರೆ ನೀಡಿದ ನಂತರ ಆರ್‌ಎಸ್‌ಎಸ್, ಬಿಜೆಪಿ ಕಾರ್ಯಕರ್ತರು ಯುಡಿಎಫ್ ಮುಖಂಡರಿಂದ ಹಣ ಪಡೆದು, ಯುಡಿಎಫ್ ಚಿಹ್ನೆ ಧರಿಸಿ, ಮತಗಟ್ಟೆಗಳಲ್ಲಿ ರಾಜ್ಯಾದ್ಯಂತ ಪ್ರಚಾರ ನಡೆಸಿರುತ್ತಾರೆ. ಹಲವಾರು ನಿರ್ದಿಷ್ಟ ಕ್ಷೇತ್ರಗಳಲ್ಲಿ ಓಟು ವರ್ಗಾಯಿಸಲಾಗಿದೆ. ಶೇ 3 ಮತ ಬಿಜೆಪಿಗೆ ಕಡಿಮೆಯಾಗಿದೆ. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನವರು ಹಿಂದೆ



ಕೈ ಜೋಡಿಸಿದ ಬಿಜೆಪಿ - ಕಾಂಗ್ರೆಸ್

ಉಗ್ರವಾದಿಯೆಂದು ಕರೆದಿದ್ದ, ಈಗ ಕೊಯಮತ್ತೂರು ಬಾಂಬ್ ಸ್ಫೋಟಕ್ಕೆ ಕಾರಣನಾಗಿ ಸೇಲಂ ಸೆಂಟರ್ ಜೈಲಿನಲ್ಲಿರುವ ಪಿಡಿಪಿ ನಾಯಕ ಮದಾನಿಯನ್ನು ಸೇಲಂ ಸೆಂಟರ್ ಜೈಲಿನಲ್ಲಿಭೇಟಿ ಮಾಡಿ ಯುಡಿಎಫ್ ಅಧಿಕಾರಕ್ಕೆ ಬಂದರೆ ಕೇಂದ್ರ ಗೃಹ ಸಚಿವರ ಮೇಲೆ ಒತ್ತಡ ತಂದು ಜೈಲಿನಿಂದ ಬಿಡಿಸುತ್ತೇವೆ ಎಂದು ಆಶ್ವಾಸನೆ ನೀಡಿ ಯುಡಿಎಫ್ ಬೆಂಬಲ ಗಳಿಸಿದ್ದಾರೆ.

ಕರ್ನಾಟಕದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ಸಹ ಕರ್ನಾಟಕದ ಹೆಂಡದ ದೊರೆಗಳ ಮೂಲಕ ಕೋಟ್ಯಾಂತರ ರೂಪಾಯಿ ಹಣವನ್ನು ಯುಡಿಎಫ್ ಗೆಲುವಿಗೆ ಕಳುಹಿಸಿದ್ದಾರೆ. ಕರ್ನಾಟಕದ ಎಲ್ಲಾ ಮಂತ್ರಿಗಳು ಕೇರಳದಲ್ಲಿ ಪ್ರಚಾರಕ್ಕೆ ಪ್ರತಿ ಜಿಲ್ಲೆಯ ಜವಾಬ್ದಾರಿ ವಹಿಸಿರುತ್ತಾರೆ. ವೀಕ್ಷಕರ ಹೆಸರಿನಲ್ಲಿ ಆಂಧ್ರದ ಕಾಂಗ್ರೆಸ್ ನಾಯಕರು ಹಣದೊಂದಿಗೆ ಕೇರಳ ರಾಜ್ಯಾದ್ಯಂತ ಸಂಚರಿಸಿದ್ದಾರೆ. ಎಡರಂಗವನ್ನು ಸೋಲಿಸಲು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದಾರೆ.

ಎಲ್‌ಡಿಎಫ್ ಸೋಲಿಸಲು ಟೊಂಕಕಟ್ಟಿ ನಿಂತ ಕೋಮುವಾದಿಗಳು, ಲಾಭಕೋರರು

ಕಾಸರಗೋಡು ಹಾಗೂ ಮಂಜೇಶ್ವರದಲ್ಲಿ ಸ್ಪರ್ಧಿಸಿ ಈ ಸಲ ವಿಧಾನಸಭೆಯಲ್ಲಿ ಖಾತೆ ತೆರೆಯುತ್ತೇವೆ ಎಂದುಹೊರಟ ಬಿಜೆಪಿ ನಾಯಕರು ಪ್ರಧಾನಿ ವಾಜಪೇಯಿ, ಗೃಹಮಂತ್ರಿ ಎಲ್.ಕೆ.ಅಡ್ವಾಣಿಯವರನ್ನು ಕರೆತಂದು ಬಹಳ ಅದ್ದೂರಿ ಪ್ರಚಾರನಡೆಸಿದರೂ ಕೇರಳದ ಜನತೆ ಈ ಪ್ರಯತ್ನವನ್ನು ವಿಫಲಗೊಳಿಸಿದ್ದಾರೆ. ಸಿಪಿಐ(ಎಂ) ನಿಂದ ಹೊರಗೆ ಹೋಗಿದ್ದ ಎಂ.ವಿ.ರಾಘವನ್, ಕೆ.ಆರ್.ಗೌರಿಯಮ್ಮ ಮುಂತಾದವರನ್ನು ಗೆಲ್ಲಿಸಲು ರಾತ್ರಿ ಹಗಲು ಆರ್.ಎಸ್.ಎಸ್. ಕಾರ್ಯಕರ್ತರು ದುಡಿದಿದ್ದಾರೆ. 120 ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧಿಸಿದ್ದರೂ ಅವರ ಒಟ್ಟು ಮತದ ಅರ್ಧದಷ್ಟು ಗಳಿಸಲಾಗಲಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಪಡೆದಿದ್ದ ಮತಗಳನ್ನೂ ಬಿಜೆಪಿ ಪಡೆಯಲಿಲ್ಲ. ಬಿಜೆಪಿ ತನ್ನ

ಮತಗಳನ್ನು ಯುಡಿಎಫ್‌ಗೆ ಮಾರಿಕೊಂಡಿದೆ. ಇತ್ತೀಚಿಗೆ ಕೇರಳ ಎಡರಂಗ ಸರ್ಕಾರ ಮದ್ಯ ಮಾರಾಟವನ್ನು ಸರಕಾರದ ನಾಗರೀಕ ಪೂರೈಕೆ ಇಲಾಖೆಗೆ ವಹಿಸಿತು.ಇದರಿಂದಾಗಿ ಮದ್ಯದ ದೊರೆಗಳಿಗೆ ವರಮಾನ ನಿಂತು ಹೋಯಿತು. ಈ ಮದ್ಯದ ಲಾಬಿ ದೊರೆಗಳು ಕೋಟ್ಯಾಂತರ ರೂಪಾಯಿಯನ್ನು ಎಡರಂಗದ ವಿರುದ್ಧ ಚೆಲ್ಲಿದ್ದಾರೆ.

ಯುಡಿಎಫ್ ನೀಡಿ ಅವರನ್ನು ಎಡರಂಗ ಸರ್ಕಾರದ ವಿರುದ್ಧನಿಲ್ಲಿಸಿತು. ಯುಡಿಎಫ್ ಅಧಿಕಾರಕ್ಕೆ ಬಂದರೆ ಹೆಂಡ ಮತ್ತು ಸಾರಾಯಿ ಮಾರಾಟವನ್ನು ಹಿಂದಿನ ರೀತಿಯಲ್ಲಿ ಆರಂಭಿಸುತ್ತೇವೆ ಎಂದು ಆಶ್ವಾಸನೆ ನೀಡಲಾಯಿತು.

1957 ರ ಕಮ್ಯುನಿಸ್ಟ್ ಸರ್ಕಾರದ ವಿರುದ್ಧ ಅಂದು ಕಾಂಗ್ರೆಸ್ ಜಾತಿ ಮತ್ತು ಕೋಮು ಸಂಘಟನೆಗಳ

ಯಾತ್ರ ಮತ್ತು ಬಿಜೆಪಿ, ಆರ್‌ಎಸ್‌ಎಸ್ ಮುಖಂಡತ್ವದಲ್ಲಿ ನಡೆದ ಕೇರಳ ರಕ್ಷಣಾ ಯಾತ್ರೆ ಇದರ ಉದ್ದೇಶ ಎಲ್ಲಾ ಜಾತಿ, ಮತ ಸಂಘಟನೆಗಳನ್ನು ಎಲ್ಲಾ ಸರ್ಕಾರದ ವಿರುದ್ಧ ಒಟ್ಟುಗೂಡಿಸುವ ತಂತ್ರವಾಗಿತ್ತು. ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿ, ಕೃಷಿ, ಕೈಗಾರಿಕಾ ನೀತಿಗಳು ಕೇರಳದ ಕೃಷಿಯ ಮೇಲೆ ಅತ್ಯಂತ ವ್ಯಾಪಕ ದುಷ್ಪರಿಣಾಮ ಬೀರಿವೆ. ಇದು ಎಲ್‌ಡಿಎಫ್ ನಿಂದ ಅಲ್ಲ. ಎನ್‌ಡಿಎ ಸರ್ಕಾರದಿಂದ ಇದು ಸಹ ಪರಿಣಾಮಉಂಟುಮಾಡಿದೆ ಎಂಬುದನ್ನು ಜನರಿಗೆ ಇನ್ನೂ ಹೆಚ್ಚು ಮನವರಿಕೆ ಮಾಡಬೇಕಿದೆ.

ಆಳ ವಿಮರ್ಶೆ ಅಗತ್ಯ

ಕೇರಳದಲ್ಲಿ ಎಡರಂಗ ಸರ್ಕಾರದ ಸೋಲು ರೈತ, ಕಾರ್ಮಿಕ ಮತ್ತು ಸಾಮಾನ್ಯ ಜನರ ರಕ್ಷಣೆಗೆ ವಿರುದ್ಧವಾಗಿದೆ. ಇದರ ಬಗ್ಗೆ ರಾಜ್ಯ ಸಮಿತಿ ಮತ್ತು ಎಲ್‌ಡಿಎಫ್ ಕೂಲಂಕುಷವಾಗಿ ಚರ್ಚೆ ಮಾಡಿ ಆಳವಾದ ವಿಮರ್ಶೆ ನಡೆಸಿ ಪರಿಹಾರ

ಎಲ್‌ಡಿಎಫ್: ಆಳವಾದ ವಿಮರ್ಶೆಗೆ ಸಕಾಲ

ಪ್ರೀ ಯೂನಿವರ್ಸಿಟಿಯನ್ನು ಸೆಕಂಡರಿ ವಿದ್ಯಾಭ್ಯಾಸಕ್ಕೆ ಸೇರಿಸಿದ ಕಾರಣ ಅಲ್ಪಸಂಖ್ಯಾತರ ಹೆಸರಿನಲ್ಲಿ ಕಾಲೇಜಗಳನ್ನು ಆರಂಭಿಸಿ ಕೋಟ್ಯಾಂತರ ರೂಪಾಯಿ ಕೊಳ್ಳೆ ಹೊಡೆಯುತ್ತಿದ್ದವರಿಗೆ ಕಷ್ಟವಾಗಿ ಈ ಲಾಬಿ ಸಹ ಎಡರಂಗದ ವಿರುದ್ಧ ನಿಂತಿತು.

ಉಪ್ಪಿನಿಂದ ಸಾಂಬ್ರಾಣಿವರೆಗೆ ಅಗತ್ಯ ವಸ್ತುಗಳನ್ನು ಸಾಮಾನ್ಯ ಜನರಿಗೆ ಕಡಿಮೆ ದರದಲ್ಲಿ ನಾಗರಿಕ ಪೂರೈಕೆ ಇಲಾಖೆ ಮೂಲಕ ಸಾವಿರಾರು ಮಳಿಗೆಗಳನ್ನು ತೆರೆದು ಮಾರಾಟ ಮಾಡಿದಾಗ, ಹೋಲ್‌ಸೇಲ್ ವ್ಯಾಪಾರಿಗಳಿಗೆ ಲಾಭ ಕಡಿಮೆಯಾಗಿ ಈ ಗುಂಪು ಸಹ ಎಡರಂಗ ಸರ್ಕಾರದ ಸೋಲಿಗೆ ಕಂಕಣ ಕಟ್ಟಿ ಇಳಿಯಿತು. ಕರಾವಳಿ ಪ್ರದೇಶಾದ್ಯಂತ ಇರುವ ಮೀನುಗಾರರ ಸಮೂಹವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಆಶ್ವಾಸನೆಯನ್ನು ಗುಪ್ತವಾಗಿ

ಹೊಂದಾಣಿಕೆಯನ್ನು ಮಾಡಿಕೊಂಡು ವಿಮೋಚನಾ

ಎಲ್‌ಡಿಎಫ್	1996	2001	ಯುಡಿಎಫ್	1996	2001
ಸಿಪಿಐ(ಎಂ)	40	23	ಕಾಂಗ್ರೆಸ್(ಐ)	37	63
ಸಿಪಿಐ	18	7	ಐಯುಎಂಎಲ್	13	16
ಜ.ದಳ	4	3	ಕೇರಳ ಕಾಂಗ್ರೆಸ್(ಯು)	5	
ಕಾಂಗ್ರೆಸ್(ಎಸ್)	3	0	ಕೇರಳಕಾಂಗ್ರೆಸ್(ಕೆ)	2	
ಕೇರಳ ಕಾಂಗ್ರೆಸ್(ಜೆ)	6	2	ಕೇರಳ ಕಾಂಗ್ರೆಸ್(ಬಿ)	1	2
ಆರ್‌ಎಸ್‌ಪಿ	5	2	ಸಿಎಂಪಿ	0	1
ಬೆಂಬಲಿತ ಪಕ್ಷೇತರರು	4	1	ಜೆ.ಎಸ್.ಎಸ್.	1	
ಎನ್‌ಸಿಪಿ	0	2			

ಸಮರ ಎಂಬ ಹೆಸರಿನಲ್ಲಿ ಕಮ್ಯುನಿಸ್ಟ್ ಸರ್ಕಾರದ ವಿರುದ್ಧ ನಡೆದ ಪ್ರಜಾಪ್ರಭುತ್ವ ವಿರೋಧಿ ಹೋರಾಟದ ತರಹ ಈಗ ಎ.ಕೆ.ಆಂಟೋನಿ ಮುಖಂಡತ್ವದಲ್ಲಿ ಕಾಸರಗೋಡಿನಿಂದ ತಿರುವಂತನಪುರದವರೆಗೆ ನಡೆದ ವಿಮೋಚನಾ

ಕಾಣಬೇಕಾಗಿದೆ.

ಮತ್ತೆ ಗೂಂಡಾಗಿರಿ ಆರಂಭ

ಚುನಾವಣೆ ಫಲಿತಾಂಶ ಬಂದ ನಂತರ ಕೇರಳ ರಾಜ್ಯದ ಎಲ್ಲಾ ಕಡೆ ಕಾಂಗ್ರೆಸ್ ಮತ್ತು ಬಿಜೆಪಿ, ಆರ್.ಎಸ್.ಎಸ್. ಗೂಂಡಾಗಳು ಸಿಪಿಐ(ಎಂ)

ಪುಟ 10 ಕ್ಕೆ

ಅಸ್ಸಾಂ

ತಿರಸ್ಕೃತಗೊಂಡ ಸಮಯಸಾಧಕರು



ಸೋತ ಮಹಂತ

ಈಶಾನ್ಯ ಭಾರತದ ಕೇಂದ್ರವಾದ ಅಸ್ಸಾಮಿನ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಎನ್‌ಡಿಎ ಕೂಟಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಅಧಿಕಾರಕ್ಕಾಗಿ ಹಾತೊರೆದು ಅವಕಾಶವಾದಿ ರಾಜಕಾರಣ ಮಾಡಲು ಹೊರಟ ಪ್ರಫುಲ್ಲಕುಮಾರ ಮಹಂತರ ಎಜಿಪಿಗೆ ಜನತೆ ಸರಿಯಾದ ಪಾಠವನ್ನು ಕಲಿಸಿದ್ದಾರೆ.

ಅಸ್ಸಾಂ ಗಣಸಂಗ್ರಾಮ್ ಪರಿಷತ್ ಮತ್ತು ಬಿಜೆಪಿ ನಡುವಿನ ಅಪವಿತ್ರ ಮೈತ್ರಿ, ಮಹಂತ ಸರ್ಕಾರದ ದಿವಾಳಿಕೋರ ಆಡಳಿತ ಮತ್ತು ಎರಡೂ ಪಕ್ಷಗಳಲ್ಲಿನ ಒಳಜಗಳವನ್ನು ಅಸ್ಸಾಮಿನ ಜನತೆ ತಿರಸ್ಕರಿಸಿದ್ದಾರೆ. ಇದರ ಲಾಭವನ್ನು ಕಾಂಗ್ರೆಸ್ ಪಡೆದು ಅಧಿಕಾರಕ್ಕೆ ಬರುವಂತಾಗಿದೆ.

ಅವಕಾಶವಾದಿ ಮೈತ್ರಿ

ಕೋಮುವಾದಿ ಬಿಜೆಪಿಯ ಪಕ್ಕಾ ವಿರೋಧಿಯಾಗಿದ್ದ ಮಹಂತರವರು ಅದೇ ನೆಲೆಯಲ್ಲಿ 1996 ರಿಂದ ಸರ್ಕಾರವನ್ನು ನಡೆಸುತ್ತಿದ್ದವರು, ಇದ್ದಕ್ಕಿದ್ದಂತೆ ಬಿಜೆಪಿಯ ಜೊತೆ ಮೈತ್ರಿ ಬೆಳೆಸಿದ್ದು ಗಮನಾರ್ಹ ವಿಚಾರ. ಕಳೆದ ಐದು ವರ್ಷಗಳ ಅಧಿಕಾರಾವಧಿಯಲ್ಲಿ ರಾಜ್ಯದ ಜನತೆಗೆ ಯಾವ ಕೊಡುಗೆಯನ್ನು ಮಹಂತ ಸರ್ಕಾರ ನೀಡಲಿಲ್ಲ. ಬಹಳ ಮುಖ್ಯವಾಗಿ ಉಲ್ಫಾ ಮತ್ತಿತರ ಶಕ್ತಿಗಳ ಪ್ರತ್ಯೇಕತಾವಾದಿ ಹಿಂಸಾಚಾರ ವನ್ನು ತಡೆಯಲಾಗಲಿಲ್ಲ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲಾಗಲಿಲ್ಲ. ಸರ್ಕಾರದ ಖಜಾನೆ ದಿವಾಳಿಯಾಗಿತ್ತು. ನಿರುದ್ಯೋಗವು 15 ಲಕ್ಷಕ್ಕೆ ಏರಿತ್ತು. ಎಜಿಪಿ ಸರ್ಕಾರದ ಇಂತಹ ವೈಫಲ್ಯಗಳ ಲಾಭವನ್ನು ಕಾಂಗ್ರೆಸ್ ಪಡೆಯಿತು. ಈ ಮಧ್ಯದಲ್ಲಿ ನಡೆದ ಮೂರು ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ತನ್ನ ಶಕ್ತಿಯನ್ನು

ವೃದ್ಧಿಸಿಕೊಂಡಿತು.ಇಂತಹ ಬೆಳವಣಿಗೆಗೆ ಬೇಕಾದ ಜನಪರ ಹೋರಾಟಗಳನ್ನು ಕಾಂಗ್ರೆಸ್ ನಡೆಸದಿದ್ದರೂ ಸರ್ಕಾರದ ವಿರೋಧಿಯಾದ ನಕಾರಾತ್ಮಕ ಮತಗಳು ಕಾಂಗ್ರೆಸ್‌ನ್ನು ಬೆಳೆಸಿತು.

ಇಂತಹ ಹಿನ್ನೆಲೆಯಲ್ಲಿ ಮಹಂತರವರು ಪುನಃ ಮುಖ್ಯಮಂತ್ರಿಯಾಗಬೇಕೆಂಬ ಹಾಗೂ ಸಂಸದೆಯೂ ಆದ ತನ್ನ ಹೆಂಡತಿ ಜಯಶ್ರೀ ಮಹಂತರನ್ನು ಕೇಂದ್ರದಲ್ಲಿ ಮಂತ್ರಿಯಾಗಿಸುವ ವ್ಯೂಹದೊಂದಿಗೆ ಬಿಜೆಪಿಯ ಎನ್‌ಡಿಎ ಕೂಟದೊಂದಿಗೆ ಕೈ ಜೋಡಿಸಿದರು. ಕೇಂದ್ರದಿಂದ ರಾಜ್ಯಕ್ಕೆ ಹೆಚ್ಚಿನ ನೆರವನ್ನು ಹೊಂದಲು ಇಂತಹ ಹೊಂದಾಣಿಕೆ ಮಾಡಲಾಗಿದೆ ಎಂದು ಪ್ರಚಾರ ನಡೆಸಿದರು. ಆದರೆ ಮೊದಲೇ ಬಿಜೆಪಿಯ ದುಷ್ಟ ನೀತಿಗಳಿಂದ ಬಸವಳಿದು ಸುಸ್ತಾಗಿರುವ ಜನತೆ ಇಂತಹ ವಾದವನ್ನು ಒಪ್ಪಲು ಸಿದ್ಧರಿರಲಿಲ್ಲ. ಮತ್ತೊಂದುಕಡೆ ಈ ಅಪವಿತ್ರ ಮೈತ್ರಿಯು ಬಿಜೆಪಿ ಮತ್ತು ಎಜಿಪಿಗಳೊಳಗೆ ಭಿನ್ನಮತವನ್ನು ಸೃಷ್ಟಿಸಿತು. ಸೀಟುಗಳ ಹಂಚಿಕೆಯಲ್ಲಾದ ಗೊಂದಲದಿಂದ ಬೇಸತ್ತು ಎರಡೂ ಪಕ್ಷಗಳ ಮುಖಂಡರು ಮತ್ತು

	1996	2001
ಎಜಿಪಿ	59	
ಸಿಪಿಐ	3	
ಸಿಪಿಐ(ಎಂ)	2	
ಎಎಸ್‌ಡಿಸಿ	5	
ಕಾಂಗ್ರೆಸ್(ಐ)	34	

ಕಾರ್ಯಕರ್ತರು ಗಣನೀಯ ಪ್ರಮಾಣದಲ್ಲಿ 10 ಕ್ಷೇತ್ರಗಳಲ್ಲಿ 'ಸ್ನೇಹಸ್ಪರ್ಧೆ' ಮಾಡಬಹುದೆಂಬ ತೀರ್ಮಾನದಿಂದಾಗಿ ಎಜಿಪಿಯ ಶಾಸಕ ಪ್ರಧಾನ್ ಬರುವಾ ಮುಂತಾದವರು ಇದನ್ನು ವಿರೋಧಿಸಿ

ಕಾಂಗ್ರೆಸ್‌ಗೆ ಸೇರಿದರು. ಇದು ಸರ್ಕಾರಕ್ಕೆ ಮಾರಕ ವಾಯಿತು. ಇದೇ ರೀತಿ ಬಿಜೆಪಿ ರಾಜ್ಯ ಘಟಕ ಒಡೆದು ಹೋಯಿತು. ರಾಜ್ಯದಲ್ಲಿ ಬಿಜೆಪಿಯ ಸಂಸ್ಥಾಪಕ ಸದಸ್ಯರಾದ ಹಿರಣ್ಯ ಭಟ್ಟಾಚಾರ್ಯ ಪಕ್ಷವನ್ನು ತೊರೆದು ಅಸ್ಸಾಂ ಬಿಜೆಪಿ ಎಂಬ ಪ್ರತ್ಯೇಕ ಪಕ್ಷವನ್ನೇ ಸ್ಥಾಪಿಸಿದರು. ಸಾಕಷ್ಟು ಸಂಖ್ಯೆಯಲ್ಲಿ ಬಿಜೆಪಿ ಕಾರ್ಯಕರ್ತರು ಪಕ್ಷ ತೊರೆದು ಇದರಲ್ಲಿ ಸೇರಿದರು. ಇವೆಲ್ಲವೂ ಬಿಜೆಪಿ ಮತ್ತು ಎಜಿಪಿಯನ್ನು ಇಕ್ಕಟ್ಟಿಗೆ ಸಿಕ್ಕಿಸಿದವು.


ಮತ್ತೊಂದು ಬೆಳವಣಿಗೆಯೆಂದರೆ, ರಾಜ್ಯದಲ್ಲಿ ಶೇ 29 ರಷ್ಟಿರುವ ಅಲ್ಪಸಂಖ್ಯಾತರು ಒಂದಾಗಿದ್ದು, ಕಳೆದ ಬಾರಿ ಎಜಿಪಿ ಮತ್ತು ಎಡಪಕ್ಷಗಳ ಮೈತ್ರಿಯನ್ನು ಬೆಂಬಲಿಸಿದ್ದ ಇವರು ಕೋಮುವಾದಿ ಬಿಜೆಪಿಯೊಂದಿಗೆ ಎಜಿಪಿಯ ಈಗಿನ ಮೈತ್ರಿಯನ್ನು ಸ್ಪಷ್ಟವಾಗಿ ತಿರಸ್ಕರಿಸಿರುವುದು ಫಲಿತಾಂಶದಿಂದ ಕಂಡು ಬರುತ್ತದೆ.

ಕೇಂದ್ರದ ಎನ್‌ಡಿಎ ಕೂಟದ ಎಲ್ಲಾ ಅನಾಚಾರ, ದುರಾಚಾರಗಳನ್ನು ದೇಶವ್ಯಾಪಿ ಜನತೆ ಯಾವ ರೀತಿ ವಿರೋಧಿಸುತ್ತಿದ್ದಾರೋ ಹಾಗೆಯೇ ಅಸ್ಸಾಮಿನ ಜನತೆಯೂ ಮಾಡಿದ್ದಾರೆ. **ಅತ್ಯಂತ ಜನವಿರೋಧಿಯಾದ ಹಾಗೂ ದೇಶದ್ರೋಹಿಯಾದ ಬಿಜೆಪಿ ಕೂಟದೊಂದಿಗೆ ಕೈ ಜೋಡಿಸುವ ಅವಕಾಶವಾದಿ ರಾಜಕಾರಣದಿಂದ ಮಹಂತ ಕೈಸುಟ್ಟುಕೊಂಡಿದ್ದಾರೆ.** ಬಿಜೆಪಿ ಕೇಂದ್ರ ಸರ್ಕಾರದ ನೀತಿಗಳು ಜನರ ತೀರ್ಮಾನದಲ್ಲಿ ನೇರ ಪರಿಣಾಮವನ್ನು ಬೀರಿವೆ. ಅಸ್ಸಾಮಿನ ಜನತೆ ಎನ್‌ಡಿಎ ಕೂಟಕ್ಕೆ ಮರೆಯಲಾಗದಂತಹ ಪೆಟ್ಟನ್ನು ನೀಡಿದ್ದಾರೆ.

ಕೆ.ಪ್ರಕಾಶ್

ಮೇ 19, ಅಪ್ರತಿಮ ಕ್ರಾಂತಿಕಾರಿ, ತೆಲಂಗಾಣ ಸಶಸ್ತ್ರ ಹೋರಾಟದ ವಿಪ್ಲವವೀರ ನಾಯಕ, ಸಂಗಾತಿ ಪಿ.ಎಸ್. ರವರು ಜನಿಸಿದ(1912) ದಿನ. ಈಸಂದರ್ಭದಲ್ಲಿ ಅವರ ಜೀವನ, ಹೋರಾಟ, ಕೊಡುಗೆಗಳಲ್ಲಿ ಕೆಲವನ್ನು ನೆನಪಿಸಿಕೊಂಡಿದ್ದಾರೆ ಜಿ.ವಿ.ಶ್ರೀರಾಮರೆಡ್ಡಿಯವರು.

ಮಹಾನ್ ಕ್ರಾಂತಿಕಾರಿ ಜನನಾಯಕ ಕಾಂ. ಪಿ.ಸುಂದರಯ್ಯ



ಪುಚ್ಚಲಪಲ್ಲಿ ಸುಂದರಯ್ಯ ಈ ಹೆಸರು ಕೇಳುವುದೇ ಒಂದು ರೋಮಾಂಚನ. ಒಂದು ನಿತ್ಯ ನಿರಂತರ ಚೇತನ. ಎಂದೆಂದಿಗೂ ಬತ್ತಿಹೋಗಲಾರದ ಸ್ಫೂರ್ತಿ. ಈ ಹೆಸರೇ ಭಾರತ ಕಮ್ಯುನಿಸ್ಟ್ ಚಳುವಳಿಯಲ್ಲಿ ಅಸಮಾನ್ಯ ತ್ಯಾಗದ ಸಂಕೇತ. ಇದರ ಪರಿಣಾಮವೇ ಇಂದಿಗೂ ಭಾರತದ ಕ್ರಾಂತಿಕಾರಿ ಚಳುವಳಿಯಲ್ಲಿನ ಸಾವಿರ ಸಾವಿರ ತ್ಯಾಗ ಜೀವಿ ಕಾರ್ಯಕರ್ತರಿಗೆ ಸ್ಫೂರ್ತಿ ಕಾಂ.ಸುಂದರಯ್ಯ.

1912 ರಲ್ಲಿ ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಅನಗಾನಿಪಾಡು ಎಂಬ ಸಣ್ಣ ಹಳ್ಳಿಯ ಜಮೀನ್ದಾರಿ ಕುಟುಂಬದಲ್ಲಿ ಹುಟ್ಟಿದ ಪಚ್ಚಲಪಲ್ಲಿ ಸುಂದರಯ್ಯನವರು ಭಾರತದಲ್ಲಿ ವಿದೇಶಗಳ ಕಮ್ಯುನಿಸ್ಟ್ ಚಳುವಳಿಯಲ್ಲಿ ಕಾಂ. ಪಿ.ಎಸ್. ಎಂದು ಅಭಿಮಾನದಿಂದ, ಹೆಮ್ಮೆಯಿಂದ ಗುರುತಿಸಲ್ಪಡುತ್ತಿದ್ದರು.

ಜಗತ್ತಿನಲ್ಲಿನ ಪ್ರತಿಯೊಂದು ವಿಷಯದ ಬಗ್ಗೆ ಕೂಡ ಸಮಗ್ರವಾಗಿ ಆಳವಾಗಿ ತಿಳಿಯಬೇಕೆಂಬ ಅವರ ಹಂಬಲಕ್ಕೆ ಅವರ ಜೀವಿತಕಾಲದಲ್ಲಿ ಅವರು ಶೇಖರಿಸಿದ್ದ ಪುಸ್ತಕಗಳೇ ಸಾಕ್ಷಿ. ಅವರ ತ್ಯಾಗ, ನಿರಾಡಂಬರತೆ ಮತ್ತು ಅವರಲ್ಲಿ ಸಹಜವಾಗಿ ಮೇಳವಿಸಿದ್ದ ಮಾನವೀಯತೆ ಅವರನ್ನು ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ ಮೇರು ನಾಯಕರನ್ನಾಗಿಸಿತ್ತು. ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ ಅಷ್ಟೇ ಅಲ್ಲ ಜಗತ್ತಿನ ಶ್ರೇಷ್ಟ ಕ್ರಾಂತಿಕಾರಿಗಳಲ್ಲಿ ಒಬ್ಬರನ್ನಾಗಿಸಿದೆ. ಕಾಂ.ಬಸವಪುನ್ನಯ್ಯ ಮತ್ತು ಕಾಂ. ಬಿ.ಟಿ.ರಣದಿವೆ ಅವರ ಮಾತಿನಲ್ಲೇ ಹೇಳುವುದಾದರೆ 'ಜಗತ್ತಿನ ಶ್ರೇಷ್ಟ ಕ್ರಾಂತಿಕಾರಿಗಳಲ್ಲಿ ಪಿ.ಎಸ್. ಒಬ್ಬರಾಗಿದ್ದರು.

ಅವರಲ್ಲಿದ್ದ ತ್ಯಾಗಮಯೀ ಹೃದಯ ಮತ್ತು ನಿರಾಡಂಬರತೆ ಮಾತ್ರವೇ ಅವರು ಭಾರತ ಮತ್ತು ಜಗತ್ತಿನ ಶ್ರೇಷ್ಟ ಕ್ರಾಂತಿಕಾರಿಗಳಲ್ಲಿ ಒಬ್ಬರನ್ನಾಗಿ ಮಾಡಲಿಲ್ಲ, ಅವರಿಗೆ ಮಾರ್ಕ್ಸ್‌ವಾದ ಮತ್ತು ಲೆನಿನ್ ವಾದಗಳಲ್ಲಿ ಇದ್ದ ಆಳವಾದ ಜ್ಞಾನ, ಅದನ್ನು ಕಾಲಕಾಲಕ್ಕೆ ಮತ್ತು ಆಯಾ ಪರಿಸ್ಥಿತಿಗಳಿಗನುಗುಣವಾಗಿ ಅಳವಡಿಸುವ ಅವರ ಸಾಮರ್ಥ್ಯ ಅವರನ್ನು ಮಹಾನ್ ಕ್ರಾಂತಿಕಾರಿಗಳಲ್ಲಿ ಒಬ್ಬರನ್ನಾಗಿಸಿದೆ. ದೇಶದ ಶೋಷಿತ ಜನರ ವಿಮೋಚನೆಯ ಬಗ್ಗೆ ಅವರಿಗಿದ್ದ ಸಮರ್ಪಣಾ ಮನೋಭಾವ ಮತ್ತು ದೇಶದ ಬಗ್ಗೆ ಅವರಿಗಿದ್ದ ಅಚಲ ನಿಷ್ಠೆ ಅವರನ್ನು ಉನ್ನತ ನಾಯಕರ ಮಟ್ಟಕ್ಕೆ ಏರಿಸಿದೆ. ಕ್ರಾಂತಿಕಾರಿ ಚಳುವಳಿಯಲ್ಲಿ ಅವರಿಗಿದ್ದ ಅಚಲ ನಂಬಿಕೆ ಮತ್ತು ನಿಷ್ಠೆ ಎಲ್ಲರಿಗೂ ಆದರ್ಶಪ್ರಾಯ.

ಭಾರತ ಕಮ್ಯುನಿಷ್ಟ್ ಚಳುವಳಿಯಲ್ಲಿನ ಧ್ರುವತಾರೆ ಆಗಿರುವ ಪಿ.ಎಸ್. ಅವರ ಜೀವನದ ಶೈಲಿ, ಅವರಿಗೆ ಕಾರ್ಯಕರ್ತರ ಬಗ್ಗೆ ಇದ್ದ ಅಸಾಮಾನ್ಯ ಪ್ರೀತಿ ಮತ್ತು ಆದರಗಳು ಈಗ ಬಹಳ ವಿರಳ. ಪಿ.ಎಸ್. ಅವರನ್ನು ಪ್ರಥಮಬಾರಿಗೆ ಭೇಟಿ ಆಗಿದ್ದು 1971 ಡಿಸೆಂಬರ್ ತಿಂಗಳಲ್ಲಿ ಕೇರಳದ ತಿರುವನಂತಪುರದಲ್ಲಿ ನಡೆದ ಎಸ್.ಎಫ್.ಐನ ಸ್ಥಾಪನಾ ಸಮ್ಮೇಳನದಲ್ಲಿ, ಕರ್ನಾಟಕದ ಪ್ರತಿನಿಧಿಗಳು ಮತ್ತು ಆಂಧ್ರದ ಪ್ರತಿನಿಧಿಗಳು ಇದ್ದ ಕ್ಯಾಂಪಿಗೆ ಪಿ.ಎಸ್. ಅವರು ಬಂದರು. ನಮ್ಮೆಲ್ಲರನ್ನು ಒಬ್ಬೊಬ್ಬರನ್ನಾಗಿ ಕರೆದು ಮಾತನಾಡಿ ನಮಗೆ ಮಾಡಿರುವ ವ್ಯವಸ್ಥೆಗಳ ಬಗ್ಗೆ ಅವರು ವಿಚಾರಿಸಿದ ರೀತಿ ನನಗೆ ಇಂದಿಗೂ ಮರೆಯಲಾಗದು. ಅಲ್ಲಿಂದ ಹೋಗುವಾಗ ಅವರು ನನ್ನ ಬುಜದ ಮೇಲೆ ಕೈಹಾಕಿ ಒಂದಷ್ಟು ದೂರ ಕರೆದು ಕೊಂಡು ಹೋಗಿ ಕರ್ನಾಟಕದಲ್ಲಿ ಬಲಿಷ್ಟವಾದ ಎಸ್.ಎಫ್.ಐ.ನ್ನು ಕಟ್ಟಬೇಕೆಂದು ನೀಡಿದ ಪ್ರೋತ್ಸಾಹ ನನ್ನಲ್ಲಿಂದಿಗೂ ಸ್ಥಿರವಾಗಿದೆ. ಭಾರತ ಕಮ್ಯುನಿಸ್ಟ್ ಚಳುವಳಿಯಲ್ಲಿ ಸಾವಿರಾರು ಜನ ಕಾರ್ಯಕರ್ತರಿಗೆ ಇಂದಿಗೂ ಪಿ.ಎಸ್. ಆದರ್ಶಪ್ರಾಯರು. ಅವರ ಬರೀ ಮಾರ್ಕ್ಸ್‌ವಾದಿ ತತ್ವಜ್ಞಾನಿ ಅಷ್ಟೇ ಅಲ್ಲ ಅವರೊಬ್ಬ ಧೀಮಂತ ಹೋರಾಟಗಾರ, ಶ್ರೇಷ್ಟ ಸಂಘಟಕರಾಗಿದ್ದರು. ಅನೇಕ ಚಳುವಳಿಗಳನ್ನು ಹುಟ್ಟಿಹಾಕಿದ ಅಪ್ರತಿಮ ಹೋರಾಟಗಾರ. ಇಡಿ ತಮ್ಮ ಜೀವನವನ್ನು ಶೋಷಿತ ಜನತೆಗಾಗಿ ಮುಡುಪಿಟ್ಟಿದ್ದ ಮಹಾನ್ ಜನನಾಯಕರು. ಭಾರತ ಕಮ್ಯುನಿಸ್ಟ್ ಚಳುವಳಿಯಲ್ಲಿ ಅತ್ಯಂತ ಹೆಚ್ಚು ಜನಪ್ರಿಯನಾಯಕರು. 1985 ಮೇ 21 ರಂದು ಅವರ ಅಂತ್ಯದರ್ಶನಕ್ಕೆ ಸೇರಿದ ಜನರೆ ಸಾಗರವೇ ಇದಕ್ಕೆ ಸಾಕ್ಷಿ.

ತನ್ನ ಬಾಲ್ಯದಲ್ಲೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಪಿ.ಎಸ್.ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ದಕ್ಷಿಣ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿದ ಕಾಂ। ಅಮೀರ್ ಹೈದರ ಖಾನ್‌ರವರ ಪರಿಚಯದಿಂದ ಕಮ್ಯುನಿಸ್ಟ್ ಚಳುವಳಿಗೆ ಆಕರ್ಷಿತರಾದರು. ಪಿ.ಎಸ್. ದಕ್ಷಿಣ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿದ ಪ್ರಥಮರಲ್ಲಿ ಒಬ್ಬರಾದರು. ಕಾಂ। ಇ.ಎಂ.ಎಸ್., ಕಾಂ। ಎ.ಕೆ.ಜಿ ಮತ್ತು ಕಾಂ। ಕೃಷ್ಣಪಿಳ್ಳೆಯವರನ್ನು ಕಮ್ಯುನಿಸ್ಟ್ ಚಳುವಳಿಗೆ ತಂದವರು. ಅದರ ಮುಖಾಂತರ ಇಡೀ ದೇಶದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಬಲಿಷ್ಟಗೊಳಿಸಲು ಚೂರು ಚೂರುಗಳಾಗಿ ಹಂಚಿ ಹೋಗಿದ್ದ ಕಮ್ಯುನಿಸ್ಟ್ ಕ್ರಾಂತಿ ಕಾರಿ ಸಂಘಟನೆಗಳನ್ನು ಒಂದುಗೂಡಿಸಿ ಒಂದು ಬಲಿಷ್ಟ ಕೇಂದ್ರೀಕೃತ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವುದರಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲಿ ಒಬ್ಬರು.

ಅಸಮಾನ್ಯ ತ್ಯಾಗ ಜೀವಿ ಕಾಂ। ಪಿ.ಎಸ್. ಶೋಷಿತ ಜನರ ವಿಮೋಚನೆಗಾಗಿ ಒಬ್ಬ ವ್ಯಕ್ತಿ ಏನೆಲ್ಲಾ ತ್ಯಾಗ ಮಾಡಬಹುದು ಎಂಬುದಕ್ಕೆ ಕಾಂ। ಪಿ.ಎಸ್. ಉತ್ತಮ ಉದಾಹರಣೆ. ಆದರ್ಶದಲ್ಲಿ ಅವರಿಗೆ ಯಾರುಸಾಟಿ ಅಲ್ಲ. ತನಗೆ ಮಕ್ಕಳಾದರೆ ಕ್ರಾಂತಿಕಾರಿ ಚಳುವಳಿಯ ಕೆಲಸಗಳಿಗೆ ಅಡಚಣೆಯುಂಟಾಗುತ್ತದೆ ಎಂಬ ಒಂದೇ ಕಾರಣದಿಂದ ಮದುವೆಯಾದ ತಕ್ಷಣ ಮಕ್ಕಳು ಆಗದ ಹಾಗೆ ತಾವೆ ಸ್ವತಃ ವ್ಯಾಸಕ್ಟಮಿ ಆಪರೇಷನ್ ಮಾಡಿಸಿಕೊಂಡವರು ಕಾಂ। ಪಿ.ಎಸ್. 1940ರ ದಶಕದಲ್ಲಿ ಇಡೀ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಲಾಗಿತ್ತು. ಆಗ ಪಕ್ಷದ ಕೇಂದ್ರವಿದ್ದದ್ದು ಮುಂಬೈನಲ್ಲಿ. ಪಕ್ಷದ ಬಹುತೇಕ ಮುಖಂಡರು ಜೈಲಿನಲ್ಲಿದ್ದರು. ಉಳಿದವರೆಲ್ಲಾ ಭೂಗತರಾಗಿದ್ದರು. ಪಕ್ಷವನ್ನು ಮತ್ತು ಪೂರ್ಣಕಾಲದ ಕಾರ್ಯಕರ್ತರನ್ನು ನಿಭಾಯಿಸುವುದೇ ಅಸಾಧ್ಯವಾಗಿತ್ತು. ಬಹಿರಂಗವಾಗಿ ಎಲ್ಲೂ ಕೂಡ ಪಕ್ಷಕ್ಕೆ ನಿಧಿಯನ್ನು ಕೂಡಿಸಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಳಿದುಳಿದ ಕೇಂದ್ರಸಮಿತಿಯ ಸದಸ್ಯರು ಸೇರಿ ಒಂದು ತೀರ್ಮಾನವನ್ನು ಮಾಡಿದರು. ಪಕ್ಷದಲ್ಲಿರುವ ಕೇಂದ್ರ ಸಮಿತಿ ಸದಸ್ಯರಿಗೆ ಯಾರಿಗೆಲ್ಲಾ ಆಸ್ತಿ ಉಂಟೋ ಅವರು ಅದನ್ನು ಮಾರಾಟ ಮಾಡಿ ಪಕ್ಷಕ್ಕೆ ನಿಧಿಯನ್ನು ಕೊಡಬೇಕೆಂದು ತೀರ್ಮಾನಿಸಲಾಯ್ತು. ಅದರಂತೆ ಮೊದಲಿಗೆ ತನ್ನ ಪಾಲಿನ ಆಸ್ತಿಯನ್ನು ಮಾರಾಟ ಮಾಡಿ ಪಕ್ಷಕ್ಕೆ ಕೊಟ್ಟವರು ಕಾಂ। ಪಿ.ಎಸ್. ಅವರು ಪಕ್ಷದ ಯಾವುದೇ ಕಾರ್ಯಕರ್ತನಿಗೆ ಯಾವುದೇ ಸಮಸ್ಯೆ ಬಂದರು ಅಥವಾ ಇದ್ದರೂ ಅದನ್ನು ತನ್ನ ಸ್ವಂತ ಸಮಸ್ಯೆಯೆಂದು ಭಾವಿಸಿ ಪರಿಹಾರಮಾಡುತ್ತಿದ್ದವರು ಕಾಂ। ಪಿ.ಎಸ್. ಅವರು ಅನಾರೋಗ್ಯ ಪೀಡಿತರಾಗಿದ್ದರೂ ಲೆಕ್ಕಿಸದೆ ಪಕ್ಷದ ಕಾರ್ಯಕರ್ತರ ವೈಯಕ್ತಿಕ ಕೌಟುಂಬಿಕ ಸಮಸ್ಯೆಗಳಿಗೆ ಸ್ಪಂದಿಸಿ, ಪರಿಹರಿಸುತ್ತಿದ್ದರು. ಇಂತಹ ಅನೇಕ ಉದಾಹರಣೆಗಳು ಇವೆ.

ಭಾರತದ ಕ್ರಾಂತಿ ಹಾದಿಯಲ್ಲಿ

ಕಾಂ। ಪಿ.ಎಸ್. ಅವರು ಸಾಮ್ರಾಜ್ಯವಾದಿ ವಿರೋಧಿ ಹೋರಾಟದ ಮುಖಾಂತರ ಕಮ್ಯುನಿಸ್ಟ್ ಚಳುವಳಿಗೆ ಬಂದವರು. ಹಾಗಾಗಿ ಸಾಮ್ರಾಜ್ಯ ಶಾಹಿ ಹೋರಾಟ ಮುಗಿದನಂತರ ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ ಬಂದ ಸೈದ್ಧಾಂತಿಕ ಸವಾಲುಗಳು, ಗೊಂದಲಗಳು ತೀವ್ರವಾಗಿದ್ದವು. ರಾಷ್ಟ್ರೀಯ ಪ್ರಜಾಪ್ರಭುತ್ವ ಕ್ರಾಂತಿ ಮುಗಿದ ಮೇಲೆ ನಮ್ಮ ದೇಶದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ನಡೆಸಲು ನಾವು ಅನುಸರಿಸಬೇಕಾಗಿದ್ದ ದಾರಿಯ ಬಗ್ಗೆ ಎದ್ದ ಹಲವಾರು ಮೂಲಭೂತವಾದ ಸೈದ್ಧಾಂತಿಕ ಪ್ರಶ್ನೆಗಳನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ಪರಿಹರಿಸುವುದರಲ್ಲಿ ಕಾಂ। ಪಿ.ಎಸ್. ಅವರ ಪಾತ್ರ ಮತ್ತು ಕೊಡುಗೆ ಅಪೂರ್ವವಾದದ್ದು. ಅದೇ ಸಂದರ್ಭದಲ್ಲಿ ಪರಿಷ್ಕರಣವಾದ ಎಡಪಂಥ ಸಾಹಸವಾದಿಗಳು ಕಮ್ಯುನಿಸ್ಟ್ ಚಳುವಳಿಯಲ್ಲಿ ತೀವ್ರ ರೀತಿಯಲ್ಲಿ ತಲೆ ಎತ್ತಿದ್ದವು. ಇವುಗಳ ವಿರುದ್ಧ ಪಕ್ಷದ ಒಳಗಡೆ ನಡೆದ ಸೈದ್ಧಾಂತಿಕ ಹೋರಾಟದಲ್ಲಿ ಸುಂದರಯ್ಯನವರ ಕೊಡುಗೆ ಅಸಾಧಾರಣವಾಗಿತ್ತು. ನಿಜವಾದ ಮತ್ತು ಸ್ಪಷ್ಟವಾದ ಕ್ರಾಂತಿಕಾರಿ ದಾರಿಗಾಗಿ ನಡೆದ ಹೋರಾಟದ ಪ್ರತಿಫಲವೆ 1964ರಲ್ಲಿ ಪರಿಷ್ಕರಣವಾದಿಗಳಿಂದ ಹೊರಬಂದು ಕ್ರಾಂತಿಕಾರಿ ಪಕ್ಷ ಸ್ಥಾಪನೆ ಆಗಿದ್ದು, ಅದರ ಪ್ರಥಮ ಪ್ರಧಾನ ಕಾರ್ಯದರ್ಶಿಯಾಗಿ ಕಾಂ। ಪಿ.ಎಸ್. ಅವರು ಕಲ್ಕತ್ತಾದಲ್ಲಿ ನಡೆದ 7ನೇ ಮಹಾಅದಿವೇಶನದಲ್ಲಿ ಆಯ್ಕೆ ಆದರು. ಆ ಸಂದರ್ಭ ಹೇಗಿತ್ತೆಂದರೆ ಜಗತ್ತಿನ ಎರಡು ಹಿರಿಯ ಮತ್ತು ಬಲಿಷ್ಠ ಕಮ್ಯುನಿಸ್ಟ್ ಪಕ್ಷಗಳಾದ ಚೀನಾದ ಸಿ.ಪಿ.ಸಿ. ಮತ್ತು ಸೋವಿಯತ್ ಮತ್ತು ಸಿ.ಪಿ.ಎಸ್.ಯು.ಗಳ ಮಧ್ಯೆ ಮತ್ತು ಜಗತ್ತಿನ ಇತರೆ ದೇಶಗಳಲ್ಲಿನ ಕಮ್ಯುನಿಸ್ಟ್ ಚಳುವಳಿಯ ತೀವ್ರ ರೀತಿಯಾದಂತಹ ಸೈದ್ಧಾಂತಿಕ ಬಿಕ್ಕಟ್ಟು ಉಂಟಾಗಿದ್ದು ಒಂದು ಕಡೆ ಸಿ.ಪಿ.ಎಸ್.ಯು ಬಲಪರಿಷ್ಕರಣವಾದವನ್ನು ಸಿ.ಪಿ.ಸಿ. ಎಡಪಂಥ ಸಾಹಸವಾದನ್ನು ಪ್ರತಿಪಾದಿಸುತ್ತಿದ್ದುದರಿಂದ ಮಾರ್ಕ್ಸ್‌ವಾದಿ ತತ್ವಕ್ಕೆ ವಿರುದ್ಧವಾದ ಈ ತಪ್ಪು ಸೈದ್ಧಾಂತಿಕ ಧೋರಣೆಗಳ ವಿರುದ್ಧ ಸಿಪಿಐ(ಎಂ) ಪಕ್ಷ ಕಾಂ। ಪಿ.ಎಸ್. ಅವರ ನಾಯಕತ್ವದಲ್ಲಿ ಸಮರ್ಥವಾಗಿ ಎದುರಿಸಿತು ಎನ್ನುವುದು ನಾವೆಲ್ಲರೂ ಇಂದು ಹೆಮ್ಮೆಪಡುವ ವಿಷಯ. ಅವರು ನಿಜವಾದ ಒಂದು ಕ್ರಾಂತಿಕಾರಿ ದಾರಿಗಾಗಿ ಮತ್ತು ಧೋರಣೆಗಾಗಿ ನಡೆಸಿದ

ಪುಟ 10 ನೋಡಿ

ತೆಲಂಗಾಣ ಹೋರಾಟದ ರೂವಾರಿ

ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ ತೆಲಂಗಾಣ ಹೋರಾಟ ವಿರೋಚಿತವಾದದ್ದು, ಅದ್ವಿತೀಯವಾದದ್ದು. ಭಾರತ ಕ್ರಾಂತಿಕಾರಿ ಚಳುವಳಿಯ ಹಲವಾರು ಸೈದ್ಧಾಂತಿಕ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟ ಹೋರಾಟ. ಅದರ ಅಗ್ರಗಣ್ಯನಾಯಕರಲ್ಲಿ ಕಾಂ। ಪಿ.ಎಸ್. ಪ್ರಥಮರು. ವೀರ ಕಿಶೋರರು ಚಿಂತಕರ ಡ್ರಾಯಿಂಗ್ ರೂಂಗಳಲ್ಲಿ ಹುಟ್ಟಿ ಬರುವುದಿಲ್ಲ ಇಲ್ಲವೆ ಅಧ್ಯಯನ ಕೇಂದ್ರಗಳಿಂದ ಮಾತ್ರವೆ ಕ್ರಾಂತಿವೀರರು ಹುಟ್ಟಿಬರುವುದಿಲ್ಲ. ಬದಲಿಗೆ ಕ್ರಾಂತಿಕಾರಿ ಸಿದ್ಧಾಂತ ಒಂದು ಸಾಮಾನ್ಯ ಮನುಷ್ಯನ ಆಯುಧವಾಗಿ ಮಾರ್ಪಟ್ಟಾಗ ಆ ಸಾಮಾನ್ಯ ಮನುಷ್ಯರಿಂದಲೇ, ಕ್ರಾಂತಿವೀರರು ಹುಟ್ಟಿ ಬರುತ್ತಾರೆ. ಇದರಿಂದ ಇವರಲ್ಲಿ ಗುಣಾತ್ಮಕ ಬದಲಾವಣೆಯನ್ನು ನೋಡುವವರಿಗೂ ಇವರು ಸಾಮಾನ್ಯ ಶೋಷಿತರೆ'' ಎಂಬ ಈ ಮಾರ್ಕ್ಸ್‌ವಾದಿ ಚಿಂತನೆಗೆ ಮೂರ್ತರೂಪಕೊಟ್ಟ ಹೋರಾಟವೆ ತೆಲಂಗಾಣ ರೈತರ ಹೋರಾಟ. ಈ ಐತಿಹಾಸಿಕ ಹೋರಾಟದ ರೂವಾರಿ ಪಿ.ಎಸ್. ಆ ಹೋರಾಟದಲ್ಲಿದ್ದ ನ್ಯೂನತೆಗಳನ್ನು ಅರ್ಥಮಾಡಿಕೊಂಡ ಕಾಂ। ಪಿ.ಎಸ್. ಹೊಸ ಸೈದ್ಧಾಂತಿಕ ದಾರಿಗೂ ರೂವಾರಿ ಆದರು ಎನ್ನುವುದು ಅವರಲ್ಲಿ ಇದ್ದ ಸೈದ್ಧಾಂತಿಕ ತಿಳುವಳಿಕೆಯ ಆಳವನ್ನು ತೋರಿಸುತ್ತದೆ. ಹಾಗಾಗಿ ಪರಿಶುದ್ಧ ಮಾರ್ಕ್ಸ್‌ವಾದಿ ಸಿದ್ಧಾಂತಕ್ಕಾಗಿ ಮತ್ತು ನಿಜವಾದ ಕ್ರಾಂತಿಕಾರಿ ಧೋರಣೆಗಾಗಿ ಕಾಂ। ಪಿ.ಎಸ್. ಅವರು ನಡೆಸಿದ ಹೋರಾಟವು ಯಶಸ್ವಿ ಆಯಿತು. ಎಂಬುದು ನಿರ್ವಿವಾದವಾಗಿದೆ.

ಸ್ವಯಂ ಟೀಕೆಯಿಂದ, ಅತಿವಿನಯದಿಂದ ಮತ್ತು ಸೌಜನ್ಯದಿಂದ ತನ್ನ ತಪ್ಪನ್ನು ತಿದ್ದಿಕೊಳ್ಳುವುದರಲ್ಲಿ ಕಾಂ। ಪಿ.ಎಸ್.ಗೆ ಪಿ.ಎಸ್. ಮಾತ್ರವೇ ಸಾಟಿ. ಪಕ್ಷದ 10ನೇ ಅಧಿವೇಶನದಲ್ಲಿ ಪಕ್ಷದ ಲೈನ್ ಬದಲಾವಣೆ ಆದಾಗ ಕಾಂ। ಪಿ.ಎಸ್. ಅವರು ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಬಿಡುಗಡೆ ಹೊಂದಿ ಆಂಧ್ರಕ್ಕೆ ಬಂದಿದ್ದೇ ಇದಕ್ಕೆ ಉದಾಹರಣೆ. ಅವರು ಎಂದು ತಾನು ಮಹಾನ್ ನಾಯಕನೆಂದು ಭ್ರಮಿಸಲೇ ಇಲ್ಲಾ. ಪಕ್ಷದ ಸಾಮೂಹಿಕ ಮತ್ತು ಬಹುಮತದ ಅಭಿಪ್ರಾಯವನ್ನು ಅತಿವಿನಯದಿಂದ ಗೌರವಿಸುತ್ತಿದ್ದರು. ಆದರೆ ಸೈದ್ಧಾಂತಿಕ ಪ್ರಶ್ನೆಗಳು ಬಂದಾಗ ಅಷ್ಟೇ ದೃಢವಾಗಿ ಪ್ರತಿಪಾದಿಸುತ್ತಿದ್ದರು. ಮತ್ತು ಎಂದಿಗೂ ಅವರ ಸೈದ್ಧಾಂತಿಕ ನಿಲುವುಗಳಲ್ಲಿ ರಾಜಿ ಮಾಡಿಕೊಳ್ಳುತ್ತಿರಲಿಲ್ಲ. ಪಕ್ಷವು ತೀರ್ಮಾನಿಸಿದ ಯಾವುದೇ ಕೆಲಸವನ್ನು ಅವರು ಅಷ್ಟೇ ಪ್ರಾಮಾಣಿಕವಾಗಿ ಶ್ರದ್ದೆಯಿಂದ ಮಾಡುತ್ತಿದ್ದರು. ಅವರು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಬಿಡುಗಡೆ ಹೊಂದಿದ ಮೇಲೆ ಆಂಧ್ರದ ಪಕ್ಷದ ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ನಾನು ಒಂದು ದಿವಸ ಅವರನ್ನು ಕಾಣಲು ವಿಜಯವಾಡಕ್ಕೆ ಹೋದೆ. ಅವರು ಪಕ್ಷದ ಕಛೇರಿಯಲ್ಲಿ ಅಲ್ಲಿನ ಎಐಕೆಎಸ್ ನ ಮುಖಂಡರೊಬ್ಬರಿಗೆ ರೈತಸಂಘದ ಸದಸ್ಯತ್ವದ ಕೌಂಟರ್ ಫೈಲನ್ನು ಮತ್ತು ಸದಸ್ಯತ್ವ ಹಣವನ್ನು ಲೆಕ್ಕ ಹಾಕಿ ಕೊಡುತ್ತಿದ್ದ ಆ ದೃಶ್ಯ ನನಗೆ ಇಂದಿಗೂ ಮರೆಯಲಾಗುತ್ತಿಲ್ಲ. ಪಕ್ಷವನ್ನು ಕಟ್ಟುವ ವಿಷಯದಲ್ಲಿ ಮತ್ತು ಚಳುವಳಿಗಳನ್ನು ರೂಪಿಸುವ ಸಂದರ್ಭಗಳಲ್ಲಿ ಅವರು ತೋರಿಸುತ್ತಿದ್ದ ಶ್ರದ್ಧೆ ಮತ್ತು ಸಮರ್ಪಣಾ ಮನೋಭಾವ ಹೆಚ್ಚಿನ ಮುಖಂಡರ ವಿರಳ.

ಧೂಳೀಪಟವಾದ ಡಿಎಂಕೆ..........

ಪುಟ 7 ರಿಂದ

ರೂಪದಲ್ಲಿ ಬಂಡಾಯ ಹೂಡಿದರು. ನೀಡಿದ ಟಿಕೆಟ್‌ಗಳೂ ಸಹ ಪಕ್ಷ ಹಾಗೂ ಜನರ ನಡುವೆ ಪ್ರಾಮುಖ್ಯತೆ ಇದ್ದವರೆಂದಲ್ಲ. ಬದಲಾಗಿ ಕರುಣಾನಿಧಿಯವರ ಉತ್ತರಾಧಿಕಾರಿಯೆಂದೇ ಬಿಂಬಿಸುತ್ತಿರುವ ಅವರ ಮಗ ಮೇಯರ್ ಸ್ಟಾಲಿನ್‌ನ ಬೇಕಾದವರಿಗೆ. ಇದು ಪಕ್ಷದಲ್ಲಿ ಬಿಕ್ಕಟ್ಟು ಸೃಷ್ಟಿಸಿತಂತೆ. ತಂದೆ ಮಕ್ಕಳ ರಾಜಕೀಯ ಪ್ರಾಬಲ್ಯದಿಂದಾಗಿಯೇ ಎಂಡಿಎಂಕೆಯ ವೈಕೊ ದೂರವಾದರಂತೆ. ಇತ್ತ, ಎಐಡಿಎಂಕೆ ಉಳ್ಳ ಸೆಕ್ಯುಲರ್ ಬಣದಲ್ಲಿ ಕಾಂಗ್ರೆಸ್,ಟಿಎಂಸಿ, ಪಿ.ಎಂ.ಕೆ. ಒಳಗೊಂಡದ್ದು ಸಿಪಿಐ(ಎಂ), ಸಿಪಿಐ ಸಹ ಸ್ಥಾನ ಹೊಂದಾಣಿಕೆ ಮಾಡಿಕೊಂಡ ಡಿಎಂಕೆ-ಎನ್‌ಡಿಎ ಕೂಟವನ್ನು ಸೋಲಿಸಲು ನಿರ್ಧರಿಸಿದರು. ಚುನಾವಣಾ ಪ್ರಚಾರದ ಸಂದರ್ಭದಲ್ಲಿಯೇ ಜನರ ಸ್ಪಂದನ ನೋಡಿದರೆ ಈ ಸೆಕ್ಯುಲರ್ ಬಣ ಭಾರಿ ವಿಜಯಶಾಲಿಯಾಗುವುದರಲ್ಲಿ ಅನುಮಾನವಿರಲಿಲ್ಲ. ಜಯಲಲಿತಾರ ನಾಮಪತ್ರ ತಿರಸ್ಕರಿಸಿದ್ದು ಸಹ ಡಿಎಂಕೆ ಗೆ ರಂಗಕ್ಕೆ ಮುಳುವಾಗುವಂತಾಯಿತು. ಜನರ ಒಲವು ತಿರುಗಿತು. ಎಐಡಿಎಂಕೆ ಸ್ಪರ್ಧಿಸಿದ 141 ರಲ್ಲಿ 132 ಸ್ಥಾನ ಪಡೆದಿದೆ. ಟಿಎಂಸಿಯ 47 ರಲ್ಲಿ 23 ಪಡೆದರೆ ಸಿಪಿಐ(ಎಂ) 8 ರಲ್ಲಿ ಸ್ಪರ್ಧಿಸಿ 6ನ್ನು ಗೆದ್ದಿದೆ. ಡಿಎಂಕೆ ಸರ್ಕಾರಗಳ ತಮಿಳುನಾಡಿನ ರಾಜಕಾರಣದಲ್ಲಿ ನಿರಂತರ ಎನ್‌ಡಿಎ ಆರ್ಥಿಕ, ರಾಜಕೀಯ, ಸಾಮಾಜಿಕ ನೀತಿಗಳ ವಿರುದ್ಧ, ದುಡಿವ ಜನಗಳ ಹಿತಗಳಿಗೆ ನಿರಂತರ ಹೋರಾಟವನ್ನು ಸಿಪಿಐಎಂ ನಡೆಸಿದೆ. ಅಪಾರ ತ್ಯಾಗ, ಬಲಿದಾನ ಗೈದಿದೆ. ಪರ್ಯಾಯ ನೀತಿಗಳಿಗಾಗಿ ಆಂದೋಲನ ಹೂಡಿದೆ. ಹಿರಿಯ ನಾಯಕರಾದ ಸಂಗಾತಿ ಸುರ್ಜಿತ್, ಸೀತಾರಾಂ ಯೆಚೂರಿ, ಪ್ರಕಾಶ್ ಕಾರಟ್, ಪಿ.ರಾಮಚಂದ್ರನ್ ಶಂಕರಯ್ಯ ಮುಂತಾದವರು ರಾಜ್ಯಾದ್ಯಂತ ಪ್ರಚಾರ ನಡೆಸಿದ್ದಾರೆ. ಸಾವಿರಾರು ಕಾರ್ಯಕರ್ತರು ದಣಿವರಿಯದೇ ರಾಜಕೀಯ ಕರ್ತವ್ಯ ಸಾಧನೆಯಲ್ಲಿ ಶ್ರಮಿಸಿ, ಜನತೆಯನ್ನು ತಲುಪಿದ್ದಾರೆ. ಈ ಆರು ಶಾಸಕರು ಜನರ ನಡುವಿನಿಂದ ಬಂದವರು.ರಾಜಕೀಯದಲ್ಲಿ ಸಿಪಿಐ(ಎಂ) ಪರಿಣಾಮ ಬೀರಬಲ್ಲದು. ಸಿಪಿಐ 5 ಪಡೆದಿದೆ.

ತಮಿಳುನಾಡಿನ ಜನ ಎನ್‌ಡಿಎ-ಡಿಎಂಕೆ ಯ ಕೂಟದ ನೀತಿಗಳಿಗೆ ಪರ್ಯಾಯವಾಗಿ ಹೊಸ ಸರ್ಕಾರವನ್ನು ಆರಿಸಿದ್ದಾರೆ.

ಕೇರಳ: ಯುಡಿಎಫ್ ಅಧಿಕಾರಕ್ಕೆ

ಪುಟ 8 ರಿಂದ

ಕಾರ್ಯಕರ್ತರ ಮೇಲೆ ಹೀನಾಯವಾಗಿ ಹಲ್ಲೆ ಮಾಡಿರುತ್ತಾರೆ. ಕಣ್ಣೂರು ಜಿಲ್ಲೆಯಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಮನೆ ಮೇಲೆ ಬಾಂಬ್ ಹಾಕಿರುತ್ತಾರೆ. ಸಿಪಿಐ(ಎಂ)ಬ್ರಾಂಚ್ ಸೆಕ್ರೇಟರಿಯನ್ನು ಮತ್ತು ಕಾರ್ಯಕರ್ತರುಗಳನ್ನು ಹಲವಾರು ಕಡೆ ಕಡಿದು ಹಾಕಿರುತ್ತಾರೆ. ಪಾಲಕಾಡ್ ಜಿಲ್ಲೆಯಲ್ಲಿ ಹಲವು ಕಡೆ ಬಿಜೆಪಿ ಮತ್ತು ಕಾಂಗ್ರೆಸ್(ಐ) ಗೂಂಡಾಗಳು ಸಿಪಿಐ(ಎಂ) ಕಾರ್ಯಕರ್ತರ ಮನೆ ಮನೆಗೆ ನುಗ್ಗಿ ಹಲ್ಲೆ ನಡೆಸಿರುತ್ತಾರೆ. ಹಲವು ಹೆಣ್ಣು ಮಕ್ಕಳಿಗೆ ಹಾಗೂ ಚಿಕ್ಕ ಮಕ್ಕಳಿಗೆ ಗಾಯವಾಗಿದೆ. ತಲಚೇರಿಯಲ್ಲಿ ಸಿಪಿಐ(ಎಂ) ನ ಬ್ರಾಂಚ್ ಸೆಕ್ರೇಟರಿ ಮನೆಗೆ ನುಗ್ಗಿ ಮನೆಯಲ್ಲಿರುವವರಿಗೆ ಒಡೆದು, ಟಿ.ವಿ., ಗ್ಯಾಸ್ ಸಿಲಿಂಡರ್, ಅಡುಗೆ ಮಾಡುವ ಪಾತ್ರೆಗಳನ್ನು ಎತ್ತಿ ಬಾವಿಗೆ ಹಾಕಿದ್ದಾರೆ.

ಕೊಲ್ಲಂ ಜಿಲ್ಲೆಯಲ್ಲಿ ಮಾಜಿ ಎಂ.ಎಲ್.ಎ. ಮರ್ಸಿ ಕುಟ್ಟಿಯಮ್ಮರವರ ಮನೆಯ ಮೇಲೆ ಆಸಿಡ್ ಬಲ್ಪ್ ಮತ್ತು ಕಲ್ಲು ತೂರಾಟ ಮಾಡಿದ್ದಾರೆ. ರಾಜ್ಯದ ಎಲ್ಲಾ ಕಡೆ ಸಿಪಿಐ(ಎಂ) ಮತ್ತು ಎಡಪಕ್ಷಗಳ ಕಛೇರಿಗಳ ಮೇಲೆ ಆಕ್ರಮಣಗಳನ್ನು ನಡೆಸಿದ್ದಾರೆ. ಇದು ಕಾಂಗ್ರೆಸ್ ಮತ್ತು ಕೋಮುವಾದಿಗಳ ದುರಾಡಳಿತ ಆರಂಭಗೊಂಡಿದೆ.

- ಇ.ಕೆ.ಎನ್.ರಾಜನ್

ಜನನಾಯಕ ಸುಂದರಯ್ಯ

ಪುಟ 9ರಿಂದ

ಹೋರಾಟ ಅಸಮಾನ್ಯವಾಗಿತ್ತು.

ಕ್ರಾಂತಿಕಾರಿ ಶಿಸ್ತು, ಮಾರ್ಗದರ್ಶನ

ಕಾಂ। ಪಿ.ಎಸ್.ರ ಕರಾರುವಕ್ಕಾದ ಲೆಕ್ಕಾಚಾರಗಳು ಮತ್ತು ಕ್ಲಿಷ್ಟ ಸಂದರ್ಭಗಳಲ್ಲಿ ಅವರು ತೆಗೆದುಕೊಳ್ಳುತ್ತಿದ್ದ ತೀರ್ಮಾನಗಳು ಎಷ್ಟು



ಇ.ಎಂ.ಎಸ್., ಸುರ್ಜಿತ್‌ರೊಂದಿಗೆ ಪಿ.ಎಸ್.

ಅದ್ಭುತವಾಗಿರುತ್ತಿತ್ತು ಎನ್ನುವುದಕ್ಕೆ ತೆಲಂಗಾಣ ಹೋರಾಟದ ಸಂದರ್ಭದಲ್ಲಿನ ಒಂದು ಘಟನೆ ಬಹಳ ಮುಖ್ಯವಾಗಿದೆ. ಆಗ ಆಂಧ್ರ ಮಹಾಸಭಾದ ಮೇಲೆ ನಿಷೇದವಿತ್ತು. ಹೋರಾಟದ ಬಗ್ಗೆ ಚರ್ಚಿಸಲು ಒಂದು ಸಮಾವೇಶವನ್ನು ನಡೆಸಬೇಕಿತ್ತು. ಆ ಸಮಾವೇಶವನ್ನು ಗುಪ್ತವಾಗಿ ನಡೆಸಲು ತೀರ್ಮಾನಿಸಲಾಗಿತ್ತು. ಹಗಲು ಯಾರೂ ಪ್ರಯಾಣ ಮಾಡಲು ಸಾಧ್ಯವಿಲ್ಲವಾಗಿ ರಾತ್ರಿಯ ಹೊತ್ತು ನಡೆದುಕೊಂಡು ಹೋಗಬೇಕಾಗಿತ್ತು. ಹಾಗಾಗಿ ಕಾಂ। ಪಿ.ಎಸ್. ಮತ್ತು 20 ಜನ ಸಂಗಾತಿಗಳು ರಾತ್ರಿ ಸಮಯಕ್ಕೆ ನಡುಗೆ ಪ್ರಾರಂಭ ಮಾಡಿದರೆ ಸೂರ್ಯ ಹುಟ್ಟುವುದಕ್ಕೆ ಮೊದಲು ಸಮಾವೇಶ ನಡೆಯುವ ಜಾಗಕ್ಕೆ ಹೋಗಬಹುದೆಂದು ತೀರ್ಮಾನಿಸಿ ರಾತ್ರಿ 8 ಘಂಟೆಗೆ ನಡಿಗೆ ಪ್ರಾರಂಭ ಮಾಡಿದರು. ಸುಮಾರು 4 ತಾಸುಗಳ ನಡೆಯುವ ಹೊತ್ತಿಗೆ ವಿಪರೀತವಾದ ಮಳೆ ಪ್ರಾರಂಭವಾಯ್ತು. ಸತತವಾಗಿ 2 ಘಂಟೆಗಳು ಬಿದ್ದ ಮಳೆಯಿಂದಾಗಿ 2 ಘಂಟೆ ನಡೆಯಲು ಸಾಧ್ಯವಾಗಲಿಲ್ಲ. ಹಾಗಾಗಿ ಯೋಜಿಸಿದ ರೀತಿಯಲ್ಲಿ ನಿಗದಿತ ಸ್ಥಳಕ್ಕೆ ಸೇರಬೇಕಾದರೆ ಏನು ಮಾಡಬೇಕೆಂದು ದಿಕ್ಕು ತೋಚದ ಆ ಸಂಗಾತಿಗಳೆಲ್ಲರು ಆಲೋಚಿಸುತ್ತಿದ್ದಾಗ ಕಾಂ। ಪಿ.ಎಸ್. ತಟ್ಟನೆ ಒಂದು ಸಲಹೆ ಕೊಟ್ಟರು ತಡವಾಗಿ ಹೋದರೆ ಬೆಳಕು ಹರಿಯುತ್ತದೆ ವರ್ಗ ಶತ್ರುಗಳು ಮತ್ತು ಪೋಲೀಸರು ನಮ್ಮನ್ನು ನೋಡುತ್ತಾರೆ. ಹಾಗಾಗಿ ಮಳೆಯ ಕಾರಣದಿಂದ ನಷ್ಟವಾಗಿರುವ ಎರಡು ಘಂಟೆಗಳನ್ನು ಸರಿದೂಗಿಸಬೇಕಾದರೆ ನಾವೆಲ್ಲರು ಓಡಬೇಕಾಗುತ್ತದೆ ಬೇರೆ ಯಾವುದೇ ದಾರಿಯಿಲ್ಲ ಎಂದು ಹೇಳಿದರು. ತಕ್ಷಣ ಅವರ ಅಭಿಪ್ರಾಯವನ್ನು ಅನುಮೋದಿಸಿದ ಆ ಸಂಗಾತಿಗಳು ಓಡಿದರು. ಸಮಯಕ್ಕೆ ಸರಿಯಾಗಿ ಸಮಾವೇಶಕ್ಕೆ ಸೇರಿದರು. ಇದವರ ಕರಾರುವಕ್ಕು ಶಿಸ್ತಿನ ಕೆಲಸದ ವಿಧಾನಕ್ಕೆ ನಿದರ್ಶನ. ಇದರಿಂದಾಗಿ ಕಾಂ। ಪಿ.ಎಸ್. ಎಲ್ಲರಿಗೂ ಆದರ್ಶಪ್ರಾಯರು ಮತ್ತು ಗೌರವಾನ್ವಿತರಾಗಿದ್ದಾರೆ.

ಮಹಿಳಾ ಸಮ್ಮೇಳನದಲ್ಲಿ ಕೇಳಿಬಂದ ಕಿಡಿನುಡಿಗಳು

'ಕಟ್ಟಿಕೊಂಡ ಗಂಡ ಎಂಥವನಾದರೂ, ಗಂಡನ ಜೋಪಾನ ಮಾಡೇ ನನ್ನವ್ವ' ಎನ್ನುವವರ ಮಧ್ಯೆ 'ಸಿರಿ' ಓರ್ವ ಸಿಡಿಲು, ಆಕೆ ಒಲ್ಲದ ಕೌಟುಂಬಿಕ ಕಟ್ಟಳೆಯ ಹೊರೆ-ಪೊರೆ ಕಳಚಿ ಕೆಟ್ಟ ಗಂಡನಿಗೆ ವಿಚ್ಛೇದನ ನೀಡಿದ ಸಿರಿ, ಸಾಕು ತಂದೆಯ ಶವ ಸಂಸ್ಕಾರವನ್ನು ತಾನೇ ಮಾಡಿದವಳು. ಸಾಂಪ್ರದಾಯಿಕ ಒಳತೋಟಿಯನ್ನು ಧಿಕ್ಕರಿಸಿದ ದಿಟ್ಟ ಮಹಿಳೆಯ ಬಗ್ಗೆ ಪ್ರತಿಯೊಬ್ಬರೂ ಪ್ರಸ್ತಾಪಿಸಿದರು, ದೃಷ್ಟಾಂತ ನೀಡಿದರು.

★ ★ ★

ಭಾರತವೆಂಬ ಕಸದ ಬುಟ್ಟಿ?

ಕೇಂದ್ರ ಸರ್ಕಾರ 4000 ಕ್ಕೂ ಹೆಚ್ಚು ಉತ್ಪನ್ನಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲು 'ಜೀ ಹುಜೂರ್' ಎಂದಿದೆ. ದೇಶೀಯ ಕೃಷಿ ನಾಶವಾಗಿ ತೀವ್ರ ಬೆಲೆ ಕುಸಿತಕ್ಕೆ ಕಾರಣವಾಗಿದೆ. ಹೊರ ದೇಶಗಳಿಗೆ ಬೇಡದ ತಾಜ್ಯವಸ್ತು ಎಲ್ಲ ಇಂದು 'ಭಾರತವೆಂದ ಕಸದ ಬುಟ್ಟಿ'ಗೆ ತುರುಕುತ್ತಿದ್ದಾರೆ!

★ ★ ★

Heartless ನೀತಿಗಳು

ನಮ್ಮ ಸರ್ಕಾರಗಳು ತಮ್ಮ ಆಲೋಚನೆಗಳಿಂದ ನೀತಿಗಳನ್ನು ತರದೇ ಯುಎಸ್‌ಎ ನೇತೃತ್ವದ ಸಾಮ್ರಾಜ್ಯಶಾಹಿ ನಿರ್ದೇಶನದ ನೀತಿಗಳನ್ನು ಜಾರಿಗೆ ತಂದಿರುವುದು. World Bank ಹಾಗೂ LPG ನೀತಿಗಳೇ ಸಂಪೂರ್ಣವಾಗಿ Heartless - ಅಮಾನವೀಯವಾಗಿವೆ.

★ ★ ★

ಟಾನ್ನಿತಾಲಾಬ್ ನೀರು ಬಡವರಿಗಲ್ಲ!

ಮಹಾರಾಷ್ಟ್ರದ ತಾನ್ಸಿ ಕೆರೆಯ ತುಂಬ ನೀರಿದೆ. ಸುತ್ತಮುತ್ತ ಆದಿವಾಸಿಗಳು, ದಲಿತರು ಬಡವರೇ ಅಲ್ಲಿಯ ನಿವಾಸಿಗಳು. ಅವರಿಗೆ ಈ ಕೆರೆಯ ನೀರು ಸರ್ಕಾರ ಕೊಡಲ್ಲವಂತೆ! ಆಶ್ಚರ್ಯ ಅಲ್ಲವೇ? ಈ ನೀರು ಕೊಳಚೆ ಅಲ್ಲ. ಬದಲಾಗಿ ಬಹುರಾಷ್ಟ್ರೀಯ ಕಂಪನಿಯಾಗ ಕೊಕೊಕೋಲಾ ಕಂಪನಿಗೆ ಈ ಕೆರೆ ನೀರನ್ನು ಸಂಪೂರ್ಣವಾಗಿ ಮಾರಾಟ ಮಾಡಲಾಗಿದೆಯಂತೆ. ಹೇಗಿದೆ ಸ್ವತಂತ್ರ ಭಾರತದಲ್ಲಿ ನೀರು ಕುಡಿಯಲೂ ತತ್ವಾರ!

ಜಾತಿ, ಧರ್ಮಾಧಾರಿತ ಶೋಷಣೆ ವಿರೋಧಿಸಲೇಬೇಕು

ಸಾಮಾಜಿಕ ಅಸಮಾನತೆಯೇ ಮೈವೆತ್ತು ನಿಂತಿರುವ ಭಾರತದ ಅತ್ಯಂತ ಬಡವರಲ್ಲಿಬಡವಿ ದಲಿತ ಮಹಿಳೆ. ಶೇ 66 ಭೂರಹಿತರು ದಲಿತರೇ. ಆರ್ಥಿಕ ಶೋಷಣೆ ದಲಿತರ ಮೇಲೇ. ಹಿಂದೂ ಧರ್ಮದವರೆಲ್ಲಾ ಒಂದು ಎನ್ನುವವರಿಂದು ಕೇಂದ್ರದಲ್ಲಿ ಅಧಿಕಾರದ ನೇತೃತ್ವ ವಹಿಸಿದವರಿಗೆ ದಲಿತರು(ಹಿಂದೂ ಧರ್ಮದ ಒಂದು ಭಾಗ) ಅನುಭವಿಸುವ ಸಂಕಷ್ಟ ಕಾಣಿಸದೇಕೆ?ಎಂದು ಕಟುವಾಗಿ ಟೀಕಿಸಿದರು.

ಲಿಂಗಾಧಾರಿತ ತಾರತಮ್ಯ, ಜಾತಿ ತಾರತಮ್ಯ ಇರುವ ಸಂದರ್ಭದಲ್ಲಿ ತುಳಿತಕ್ಕೊಳಗಾದ ಮಹಿಳೆಯರನ್ನು ಬಿಟ್ಟು ನಮ್ಮ ಐಕ್ಯತೆಯಿಲ್ಲ. ದಲಿತರ ಬಿಡುಗಡೆಗಾಗಿ ಎಲ್ಲ ಮಹಿಳೆಯರನ್ನು

'ದಲಿತ ಮಹಿಳೆ' ಪುಸ್ತಕ ಬಿಡುಗಡೆ ಮಾಡಿದ ಬೃಂದಾಕಾರಟ್

ಬಿಡುಗಡೆ ಮಾಡಿ ಸಾಮಾಜಿಕ ಮುಕ್ತಿಗೊಳಿಸಬೇಕಿದೆ. ಮುಸ್ಲಿಂ ವೈಯಕ್ತಿಕ ಕಾನೂನಿಂದ ಮುಸ್ಲಿಂ ಮಹಿಳೆಯರು ಹಾಗೂ ಹಿಂದೂ ಮನುವಾದಿಗಳಿಂದಾಗುವ ಧರ್ಮಾಧಾರಿತ ಶೋಷಣೆಯ ಎಳೆಯನ್ನು ಗುರುತಿಸಿ ಹೇಳಿದರು.

2000ನೇ ಇಸ್ವಿ ಬಜೆಟ್‌ನಲ್ಲಿ 3 ಕೋಟಿ ರೂ. ಮಹಿಳಾ ಕೋಶಕ್ಕೆ ನೀಡಿ 2001 ರಲ್ಲಿ ಮಹಿಳಾ ಸಶಕ್ತೀಕರಣ ವರ್ಷಕ್ಕೆ ಕೇವಲ ಒಂದು ಕೋಟಿ ರೂ. ಮೀಸಲಿಟ್ಟಿದ್ದು, ಶೇ 33 ಮೀಸಲಾತಿ ಮಸೂದೆ ನೆನೆಗುದಿಗೆ ತಳ್ಳಿದ್ದು ಕೇಂದ್ರ ಸರ್ಕಾರ ಮಹಿಳೆಗೆ ನೀಡಿದ ಕೊಡುಗೆ ಎಂದೇ ಎಂದು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದವರು ಕಾಂ. ಕೆ.ಎಸ್.ವಿಮಲಾ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಬಡವರನ್ನು ಇನ್ನಷ್ಟು ಬಡವರನ್ನಾಗಿಸುವ ಸಮಯದಲ್ಲಿ ನಮ್ಮ ಸಮ್ಮೇಳನ ನಡೀತಿದೆ. ಬಡತನ ಕೂಡ ಲಿಂಗತಾರತಮ್ಯ ಮಾಡುತ್ತಿದೆ ಎನ್ನುವುದಕ್ಕೆ ಚಿಂಚೋಳಿಯಲ್ಲಾದ ಹೆಣ್ಣು ಮಕ್ಕಳ ಮಾರಾಟವೇ ಸಾಕ್ಷಿ. ಇದೆಲ್ಲವನ್ನು ಮೀರಿ, ಎದುರಿಸಿ ಜೆಎಂಎಸ್ ಅಳಿಸಲಾಗದ ಹೆಜ್ಜೆ ಮೂಡಿಸಿದೆ ಎಂದರು.

ಪ್ರಾರಂಭದಲ್ಲಿ ದ.ಕ.ಜಿಲ್ಲಾ ಜೆಎಂಎಸ್ ನಾಯಕಿ, ಮಾಜಿ ಜಿ.ಪಂ.ಸದಸ್ಯರೂ ಆದ ಕಾಂ. ಪದ್ಮಾವತಿ ಧ್ವಜಾರೋಹಣ ಮಾಡಿ ಮಾತನಾಡಿದರು. ಸಂಗಾತಿ ಸತ್ಯ ಕಾರ್ಯಕ್ರಮ ನಿರೂಪಿಸಿದರೆ ಕೆ.ಎಸ್.ಲಕ್ಷ್ಮಿ ಕ್ರಾಂತಿಗೀತೆ ಹಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷೆ ಸಾಹಿತಿ ಸಾರಾ ಅಬೂಬ್ಕರ್ ಸ್ವಾಗತ ಭಾಷಣ ಮಾಡಿದರು. ರಾಜ್ಯ ಕಾರ್ಯದರ್ಶಿ ಕೆ.ನೀಲಾ ಅಗಲಿತ ಗಣ್ಯರಿಗೆ ಶ್ರದ್ಧಾಂಜಲಿ ನಿರ್ಣಯ ಮಂಡಿಸಿದರು.



ರಾಷ್ಟ್ರೀಯ ಕ್ಷಿಪಣಿ ರಕ್ಷಣೆ ಎಂಬ

ಮರಿ ತಾರಾ ಸಮರ

ಏನಿದು? ಯಾಕಿದು!

ಶರತ್‌ಚಂದ್ರ

ಅಮೆರಿಕದ ಅಧ್ಯಕ್ಷ ಬುಶ್ ಹೊಸ ರಕ್ಷಣಾ ನೀತಿ ಘೋಷಿಸಿದ್ದಾರೆ. ಅದು 80 ರದಶಕದಲ್ಲಿ ಆಗಿನ ಅಧ್ಯಕ್ಷ ರೇಗನ್ ಪ್ರಕಟಿಸಿದ ಕುಖ್ಯಾತ 'ತಾರಾಸಮರ'ದ ಮರಿಯಂತಿರುವ 'ರಾಷ್ಟ್ರೀಯ ಕ್ಷಿಪಣಿ ರಕ್ಷಣೆ'(NMD-National Misile Defence) ಯೋಜನೆ ಮೇಲೆ ಆಧರಿಸಿದ್ದು. ರಕ್ಷಣೆಯ ಹೆಸರಲ್ಲಿ ಆಕ್ರಾಮಕ ಶಸ್ತ್ರಗಳ ಹೊಸ ಪೈಪೋಟಿ ಆರಂಭಿಸುತ್ತದೆ ಈ ನೀತಿ. ಅಮೆರಿಕದ ನಿಕಟ ಸಹಚರರಾದ ಕೆನಡಾ, ಯುರೋಪು, ಜಪಾನುಗಳೇ ಈ ಯೋಜನೆಯನ್ನು ಸ್ವಾಗತಿಸದಿರುವುದು ಮಾತ್ರವಲ್ಲ ಟೀಕಿಸಿದ್ದಾರೆ. ಶಾಂತಿಪ್ರಿಯ, ಅಮೆರಿಕದ ಜನರು ಇದನ್ನು ವಿರೋಧಿಸಿದ್ದಾರೆ. ಹೀಗಿರುವಾಗ 30 ವರ್ಷಗಳ 'ಕ್ಷಿಪಣಿ-ವಿರೋಧಿ ಒಪ್ಪಂದ'ವನ್ನು ಬಿಸಾಕಿ, ಇಡೀ ಜಗತ್ತನ್ನು ಹಲವು ಬಾರಿ ನಾಶ ಮಾಡಬಹುದಾದ ಅಣ್ವಸ್ತ್ರಗಳು ಇದ್ದರೂ ವ್ಯಾಪಕವಾಗಿದ್ದ ವಿಶ್ವಶಾಂತಿಯನ್ನು ಕದಡುವ ಬುಶ್ ತಾಳಕ್ಕೆ ನಮ್ಮ ಪ್ರಧಾನಿ ವಾಜಪೇಯಿ ಕುಣಿದು ವಿಶ್ವದ ಎಲ್ಲರಿಗೂ ನಮ್ಮ ದೇಶ ನೋಡಿ ನಗುವಂತೆ ಮಾಡಿದ್ದಾರೆ. ನಮ್ಮ ದೇಶದ ದಶಕಗಳ ಸ್ವತಂತ್ರ ರಕ್ಷಣಾ ನೀತಿ, ವಿಶ್ವಶಾಂತಿಯ, ಅಣ್ವಸ್ತ್ರ ಕಡಿತ ಮಾಡುತ್ತಾ ಅದನ್ನು ಇಲ್ಲದಂತೆ ಮಾಡುವ ನೀತಿಯನ್ನು ಗಾಳಿಗೆ ತೂರಿದ್ದಾರೆ - ವಾಜಪೇಯಿ. ಬುಶ್ ಮೆಚ್ಚಿಸುವ ಭರದಲ್ಲಿ. NMD ಎಂದರೇನು? ಬುಶ್‌ರ ಹೊಸ ರಕ್ಷಣಾ ನೀತಿಯ ಹೂರಣ ಏನು? ನಾವುಯಾಕೆ ಅದನ್ನು ವಿರೋಧಿಸಬೇಕು? ಎಂದು ತಿಳಿದುಕೊಳ್ಳಬೇಕಾದರೆ ಮುಂದೆ ಓದಿ

ಮೇ ದಿನದಂದು ಎಲ್ಲಾ ಕಡೆ ಎಲ್ಲರೂ ಕಾರ್ಮಿಕರ ಪರ, ಜನ-ಪರ ಕಾರ್ಯಕ್ರಮಗಳನ್ನು ಘೋಷಿಸುವುದು ಕ್ರಮವಾದರೆ, ಅಮೆರಿಕದ ಅಧ್ಯಕ್ಷ ಬುಶ್ 'ಹೊಸ ರಕ್ಷಣಾ ನೀತಿ' ಯನ್ನು ಘೋಷಿಸಿ ಎಲ್ಲರನ್ನು ಗೊಂದಲ, ಆತಂಕಕ್ಕೆ ಗುರಿ ಮಾಡಿದ್ದಾರೆ. ಈ ನೀತಿಯನ್ನು ಬ್ರಿಟನ್, ಫ್ರಾನ್ಸ್‌ನಂತಹ ನಾಟೋ ಮಿಲಿಟರಿ ಕೂಟದಲ್ಲಿ ಅಮೆರಿಕದ ನಿಕಟ ಸಹಚರ ದೇಶಗಳು ವಿರೋಧಿಸಿವೆ. ಜಪಾನ್, ದ.ಕೊರಿಯದಂತಹ ಏಶ್ಯಾದ ಸಹಚರರೂ ಸಾರ್ವಜನಿಕವಾಗಿ ಟೀಕೆ ಮಾಡದಿದ್ದರೂ ಸರ್ಕಾರಿ ಚಾನೆಲ್‌ಗಳ ಮೂಲಕ ಅತೃಪ್ತಿ ವ್ಯಕ್ತಪಡಿಸಿದೆ. ಕೆನಡಾ ಸಹ ಇದನ್ನು ವಿರೋಧಿಸಿದೆ. ಚೀನಾ, ರಶ್ಯಾಗಳಂತೂ ಇದನ್ನು ಬಲವಾಗಿ ಪ್ರತಿಭಟಿಸಿವೆ. ಇಂತಹ ಸನ್ನಿವೇಶದಲ್ಲಿ ಇಡೀ ಜಗತ್ತಿನಲ್ಲಿ ಏಕಮಾತ್ರ ಸರ್ಕಾರ ಈ ನೀತಿಯ ಕೆಲವು ಅಂಶಗಳನ್ನು ಸ್ವಾಗತಿಸುವ ಮೂಲಕ ನಗೆಪಾಟಲಾಗಿದೆ. ಅದೇ ನಮ್ಮ ವಾಜಪೇಯಿ ಸರಕಾರ. ಬುಶ್ ಘೋಷಣೆಯ 24 ಗಂಟೆಗಳ ಒಳಗೆ, ಬುಶ್ ಅಧಿಕೃತ ಪ್ರತಿನಿಧಿ ವ್ಯಕ್ತಿಗತವಾಗಿ ಬಂದು ಅದರ ಬಗ್ಗೆ ವಿವರಣೆಗೂ ಕಾಯದೆ ಈ ನಿಲುವು ತೆಗೆದುಕೊಂಡಿದ್ದು ಎಲ್ಲರನ್ನು ಆಶ್ಚರ್ಯ, ಆತಂಕಕ್ಕೆ ಈಡು ಮಾಡಿದೆ. ಯಾಕೀ ತರಾತುರಿ? ಎಂಬುದು ಯಾರಿಗೂ ಅರ್ಥವಾಗದ ಚಿದಂಬರ ರಹಸ್ಯ. ಅಮೆರಿಕದಲ್ಲೂ ವಿರೋಧಿ ಡೆಮೊಕ್ರೆಟಿಕ್ ಪಕ್ಷ ಈ ನೀತಿಯನ್ನು ವಿರೋಧಿಸಿದೆ. ಹಲವು ಉದಾರವಾದಿಗಳು,ಶಾಂತಿ ಮತ್ತು ಪರಿಸರದ ಚಳುವಳಿಯ ಬೆಂಬಲಿಗರು ವಿರೋಧಿಸಿದ್ದಾರೆ. 'ಫೆಡರೇಷನ್ ಆಫ್ ಅಮೆರಿಕನ್ ಸೈಂಟಿಸ್ಟ್' ಎಂಬ ಪ್ರಸಿದ್ಧ ವಿಜ್ಞಾನಿಗಳ ಸಂಘಟನೆ ಈ ನೀತಿಯನ್ನೂ ಇದರ ಮುಖ್ಯ ಭಾಗವಾದ NMD(ರಾಷ್ಟ್ರೀಯ ಕ್ಷಿಪಣಿ ರಕ್ಷಣೆ) ಯೋಜನೆಯನ್ನು 'ಕಾರ್ಯಸಾಧ್ಯವಲ್ಲದ್ದು' ಮತ್ತು 'ಶಾಂತಿಭಂಗ' ಮಾಡುವಂತಹದ್ದು, 'ಅನಗತ್ಯ' ಎಂದು ಟೀಕಿಸಿದೆ.

ಹೊಸ ನೀತಿಯಾದರೂ ಏನು?

ಬುಶ್ ಘೋಷಿಸಿದ ಹೊಸ ನೀತಿಯಾದರೂ ಏನು?ಇದು ಎರಡನೇ ಮಹಾಯುದ್ಧ ಮತ್ತು ಅಣ್ವಸ್ತ್ರಗಳ ಬೆಳವಣಿಗೆಯ ಸಂದರ್ಭದಲ್ಲಿ ಅಮೆರಿಕ ಮತ್ತು ರಶ್ಯಾ ಅಂಗೀಕರಿಸಿದ ರಕ್ಷಣಾ ನೀತಿಯಲ್ಲಿ ದೊಡ್ಡ ಬದಲಾವಣೆ. 1970ರ ದಶಕದ ಆರಂಭದ ಹೊತ್ತಿಗೆ ಅಮೆರಿಕ, ರಶ್ಯಾ ಪರಸ್ಪರ ಮತ್ತು ಇಡೀ ಜಗತ್ತನ್ನು ಪೂರ್ಣ ನಾಶ ಮಾಡುವಷ್ಟು ಅಣ್ವಸ್ತ್ರ ಮತ್ತು ಅದನ್ನು ಜಗತ್ತಿನ ಯಾವುದೇ ಜಾಗಕ್ಕೆ ಉಡಾಯಿಸಬಲ್ಲ ಕ್ಷಿಪಣಿಯನ್ನು ಹೊಂದಿದ್ದವು. ಅಮೆರಿಕ ಅಥವಾ ರಶ್ಯಾ ಇವುಗಳಲ್ಲಿ ಯಾವುದಾದರೂ ಒಂದು ಇದನ್ನು ಬಳಸಿದರೆ, ಇನ್ನೊಂದು ಎದುರೇಟು ಹಿಡಿದು ಇಬ್ಬರೂ ಪೂರ್ಣ ನಾಶವಾಗುವ ಭಯದ ತಳಹದಿ ಮೇಲೆ ಕಳೆದ ಸುಮಾರು ಮೂರು ದಶಕಗಳ ಕಾಲ ಅಣ್ವಸ್ತ್ರ ಬಳಕೆ ಮಾಡದೆ ಸಾಧ್ಯವಾದ ವಿಶ್ವಶಾಂತಿ ನಿಂತಿದೆ. 70 ರ ದಶಕದ ಆರಂಭದ ಹೊತ್ತಿಗೆ ಈ ಎರಡು ಸೂಪರ್ ಪವರ್‌ಗಳ ಆದ ಇನ್ನೊಂದು ಪ್ರಮುಖ ಒಪ್ಪಂದ ABM(ಖಂಡಾಂತರ ಕ್ಷಿಪಣಿ ನಿಯಂತ್ರಣ ಒಪ್ಪಂದ - Anti ballistic millels treaty) ಈ ಅಣ್ವಸ್ತ್ರ ಕ್ಷಿಪಣಿ ಸಾಮರ್ಥ್ಯದಲ್ಲಿ ಸಮಾನತೆಯನ್ನು ಕಾಪಾಡಬೇಕು. ಇದನ್ನು ಬದಲಾಯಿಸಬಹುದಾದ ಯಾವುದೇ ಹೊಸ ರೀತಿಯ ಶಸ್ತ್ರಾಸ್ತ್ರ ಬೆಳವಣಿಗೆ ಮಾಡಬಾರದು. ಬದಲಾಗಿ ಈ ಅಣ್ವಸ್ತ್ರ - ಕ್ಷಿಪಣಿಗಳಲ್ಲಿ ಕಡಿತ ಮಾಡುತ್ತಾ ಹೋಗಬೇಕು ಎಂಬುದು ABM ಒಪ್ಪಂದದ ತಿರುಳಾಗಿತ್ತು. ಈ ಒಪ್ಪಂದ ಆ ದೇಶಗಳ ಇಡೀ ಜಗತ್ತಿನ ಶಾಂತಿಪ್ರಿಯ ಜನರ ಒತ್ತಾಯದಿಂದ ಸಾಧ್ಯವಾಗಿದ್ದು. ಭಾರತದ ಜನತೆ ಮಾತ್ರವಲ್ಲ ಸರ್ಕಾರಗಳು ಇದರಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಅಲಿಪ್ತ ಚಳುವಳಿಯ ನಾಯಕನಾಗಿ ಭಾರತ ಪ್ರಮುಖ ಕೊಡುಗೆ ನೀಡಿತ್ತು.

ಈಗ ಬುಶ್ ಹೊಸ ರಕ್ಷಣಾ ನೀತಿ ಈ ಎಲ್ಲವನ್ನು ಏಕ ಪಕ್ಷೀಯವಾಗಿ ಬದಲಾಯಿಸಲು ಹೊರಟಿದೆ. ಈ ನೀತಿ ಪ್ರಕಾರ ಅಣ್ವಸ್ತ್ರಗಳಲ್ಲಿ ಕಡಿತ ಮಾಡಲಾಗುತ್ತದೆ (ಸುಮಾರು 7000 ದಿಂದ 2000)ಕ್ಕೆ. ಆದರೆ ಹೊಸ ರೀತಿಯ ಬಾಹ್ಯಾಕಾಶದಲ್ಲಿ ಸ್ಥಾಪಿಸುವ ಶಸ್ತ್ರಾಸ್ತ್ರಗಳನ್ನು ಬೆಳೆಸಲಾಗುತ್ತದೆ. ಬುಶ್ ಪ್ರಕಾರ ಇದಕ್ಕೆ ಕಾರಣ, ಅಮೆರಿಕ ಮತ್ತು ಅದರ ಸಹಚರರು ಎದುರಿಸುತ್ತಿರುವ 'ಬೆದರಿಕೆ'ಯ ಸ್ವರೂಪ ಬದಲಾಗಿದೆ. 'ವೈರಿಗಳು' ಬದಲಾಗಿದ್ದಾರೆ. ಮೊದಲು ರಶ್ಯಾ ಮತ್ತು ಅದರ 'ವಾರ್ಸಾ ಒಪ್ಪಂದ' ಸಹಚರರಾದ ಪೂರ್ವಯೂರೋಪಿನ ದೇಶಗಳು ಮೊದಲ ವೈರಿಗಳಾಗಿದ್ದರು. ಈಗ ಅವರ ಪ್ರಮುಖ 'ವೈರಿಗಳಾಗಿ' ಬೆದರಿಕೆಯಾಗಿ ಉಳಿದಿಲ್ಲ. ಆದರೆ ಹಲವು ಸಣ್ಣ ಸಣ್ಣ 'ಪುಂಡು' ದೇಶಗಳು ಹೊಸ ರೀತಿಯ ಬೆದರಿಕೆ ಒಡ್ಡಿವೆ. ಬುಶ್ ಪ್ರಕಾರ ಇರಾಕ್, ಲಿಬ್ಯಾ, ಉತ್ತರಕೊರಿಯಾ, ಕ್ಯೂಬಾ ಮುಂತಾದ ದೇಶಗಳು. ಇದಲ್ಲದೆ ಚೀನಾ ಅಮೆರಿಕದ ಸೂಪರ್ ಪವರ್ ಸ್ಥಾನಕ್ಕೆ ಸವಾಲು ಒಡ್ಡಬಹುದಾದ ದೇಶ. ಇವುಗಳ ಬೆದರಿಕೆ ಎದುರಿಸಲು ಪ್ರತಿದಾಳಿಯ ಬದಲು, ಅವು ಕಳಿಸುವ ಅಣ್ವಸ್ತ್ರ-ಕ್ಷಿಪಣಿಗಳನ್ನು ಇನ್ನೂ ಅವು ಗುರಿಮುಟ್ಟುವ ಮೊದಲೇ, ಬಾಹ್ಯಾಕಾಶದಲ್ಲೇ, ದಾರಿಯಲ್ಲೇ ನಾಶ ಮಾಡಬಲ್ಲ ಹೊಸ ರೀತಿಯ ಶಸ್ತ್ರಾಸ್ತ್ರಗಳನ್ನು ಬೆಳೆಸಬೇಕು. ಅಮೆರಿಕ ಮತ್ತು ಅದರ ಪ್ರಮುಖ ಸಹಚರರ ದೇಶಗಳ ಸುತ್ತ ಇಂತಹ ಬಾಹ್ಯಾಕಾಶ ಆಧಾರಿತ ಶಸ್ತ್ರಾಸ್ತ್ರಗಳ 'ವ್ಯೂಹ' ರಚಿಸಬೇಕು. ಇಂತಹ ವ್ಯೂಹವನ್ನು ಅಮೆರಿಕ ಮತ್ತು ಏಶ್ಯಾ-ಪೆಸಿಫಿಕ್ ಪ್ರದೇಶದಲ್ಲಿ ತೈವಾನ್ ಇತ್ಯಾದಿ ದೇಶಗಳಿಗೆ ಒದಗಿಸಲಾಗುತ್ತದೆ.

ಮರಿ ತಾರಾ ಸಮರ

ಬುಶ್ ಘೋಷಿಸಿರುವ ರಾಷ್ಟ್ರೀಯ ಕ್ಷಿಪಣಿ ರಕ್ಷಣಾ ಯೋಜನೆ(NMD) ಹಿಂದೆ 80 ದಶಕದಲ್ಲಿ ರೇಗನ್‌ರ ಕುಖ್ಯಾತ 'ತಾರಾಸಮರ'ದ ಮರಿ ಸ್ವರೂಪದ್ದು. ಹೆಚ್ಚು ಕಡಿಮೆ ಇದೇ ಉದ್ದೇಶ 'ತಾರಾಸಮರ' ವಿಶ್ವವ್ಯಾಪಾರಿ ವ್ಯೂಹ ರಚಿಸುವ ಉದ್ದೇಶ ಹೊಂದಿತ್ತು. ಆದರೆ ಅದನ್ನು ಅಮೆರಿಕದ ಒಳಗೆ, ಹೊರಗೆ ಭಾರಿ ಪ್ರತಿಭಟನೆಯ ನಂತರ 'ಭಾರಿ ದುಬಾರಿ','ಶಾಂತಿ ಭಂಜಕ', 'ಕಾರ್ಯಸಾಧ್ಯವಲ್ಲದ್ದು' ಎಂಬ ಕಾರಣಕ್ಕೆ ಕೈಬಿಡಲಾಗಿತ್ತು. ಬುಶ್‌ರ NMD ತಾರಾ ಸಮರದ ಮಿನಿ ರೂಪ. ಇದು ಅಮೆರಿಕದ ಮತ್ತು ಅದರ ಜತೆ ಸಹಕರಿಸುವ ಕೆಲವು ದೇಶಗಳ ಸುತ್ತ ಮಾತ್ರ ವ್ಯೂಹ ರಚಿಸುವ ಉದ್ದೇಶ ಹೊಂದಿದೆ.

ಈ ಮರಿ ತಾರಾಸಮರವನ್ನು ಸರಳವಾಗಿ ಹೀಗೆ ಹೇಳಬಹುದು. ಯಾರಾದರೂ ನಿಮ್ಮತ್ತ ಗುಂಡು ಹಾರಿಸಿದರೆ, ಅವರಿಗೆ ವಾಪಾಸು ಗುಂಡು ಹೊಡೆಯುವ ಬದಲು ಗುಂಡು ನಿಮ್ಮನ್ನು ಮುಟ್ಟುವ ಮೊದಲು ಇನ್ನೊಂದು ಗುಂಡಿನಿಂದ ಬರುತ್ತಿರುವ ಗುಂಡನ್ನು ಬೀಳಿಸುವುದು. ಇಂದಿನ ತಂತ್ರಜ್ಞಾನದಲ್ಲಿ ಗುಂಡಿನ ಮಟ್ಟಿಗೆ ಇದು ಸಾಧ್ಯವಾಗದ ಮಾತು. NMD ಅದನ್ನು ಅಣ್ವಸ್ತ್ರ-ಸಜ್ಜಿತ ಕ್ಷಿಪಣಿಗೆ ಅನ್ವಯಿಸಲು ಹೊರಟಿದೆ. ಈ ಯೋಜನೆಯ ಪ್ರಕಾರ ಮೂರು ಪ್ರಕಾರದ ಹೊಸ ತಂತ್ರಜ್ಞಾನ ಬೆಳೆಸಬೇಕಾಗುತ್ತದೆ. ಒಂದು ವೈರಿ ಜಗತ್ತಿನ ಯಾವುದೇ ಭಾಗದಿಂದ ಕ್ಷಿಪಣಿ ಹಾರಿಸಿದ ಕೂಡಲೇ ಅದನ್ನು ಪತ್ತೆಹಚ್ಚಬೇಕು. ಹಲವು ಖಂಡಗಳನ್ನು ಕೆಲವು ಸೆಕೆಂಡುಗಳಲ್ಲಿ ದಾಟಬಲ್ಲ ಕ್ಷಿಪಣಿಗಳನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯ. ಇದಕ್ಕಾಗಿ ಬಾಹ್ಯಾಕಾಶ ತುಂಬ ಮಿಲಿಟರಿ ಉಪಗ್ರಹಗಳ ಜಾಲವನ್ನೇ ಹಬ್ಬಿಸಬೇಕಾಗುತ್ತದೆ. ಎರಡನೆಯದಾಗಿ ಹಾರಿದ ಕ್ಷಿಪಣಿಯನ್ನು ಪತ್ತೆ ಹಚ್ಚಬೇಕು. ಮಾತ್ರವಲ್ಲ ಅದರ 'ಸಾಗುವದಾರಿ'ಯನ್ನು ಸತತವಾಗಿ ಕಂಡು ಹಿಡಿಯಬೇಕು. ಇದಕ್ಕಾಗಿ ಪುನಃ ಬಾಹ್ಯಾಕಾಶ ಆಧಾರಿತ ಉಪಗ್ರಹಗಳಲ್ಲಿರುವ ಕಂಪ್ಯೂಟರ್‌ಗಳ ಜಾಲಗಳು 'ಸಾಗುವದಾರಿ'ಯನ್ನು ಗಣಿತ ಬಳಸಿ ಲೆಕ್ಕ ಹಾಕಬೇಕು. ಮೂರನೆಯದಾಗಿ ಈ ಕ್ಷಿಪಣಿಯನ್ನು 'ವೈರಿ ಪ್ರದೇಶ'ದಲ್ಲಿರುವಾಗಲೇ ಹೊಡೆದು ಉರುಳಿಸಬೇಕು. ಇದಕ್ಕಾಗಿ ಬಾಹ್ಯಾಕಾಶದಲ್ಲಿರುವ ಉಪಗ್ರಹಗಳಲ್ಲೇ ಪ್ರಬಲ ಲೇಸರ್ ಗನ್ ಮತ್ತು ವೇಗದ ಕಣಗಳ ಮೇಲೆ ಆಧಾರಿತ ಹೊಸ ರೀತಿಯ ಶಸ್ತ್ರಾಸ್ತ್ರಗಳನ್ನು ಸಜ್ಜುಗೊಳಿಸಬೇಕು.

NMD ಗೆ ಸುರಕ್ಷಿತವೇ ಅಲ್ಲದ ರಕ್ಷಣಾವ್ಯೂಹ

ಈ ಮೂರು ರೀತಿಯ ತಂತ್ರಜ್ಞಾನ ಇನ್ನೂ ಬೆಳೆಸಬೇಕಷ್ಟೆ. ಈ ಬಗ್ಗೆ ಸಣ್ಣ ಪ್ರಮಾಣದ ಪ್ರಯೋಗಗಳು ನಡೆಯುತ್ತಿದ್ದು, ಈವರೆಗಿನ ಎಲ್ಲಾ ಪ್ರಯೋಗಗಳು ವಿಫಲವಾಗಿದ್ದು, ಪ್ರಬಲ ಲೇಸರ್ ಗನ್, ವೇಗದ ಕಣಗಳ ಹೊಸ ಶಸ್ತ್ರಾಸ್ತ್ರಗಳ ಬೆಳವಣಿಗೆ ಆಗಿದ್ದರೂ ಅವು ಹಾರಿದ ಕ್ಷಿಪಣಿಯನ್ನು ಗುರಿಮುಟ್ಟುವ ಮೊದಲು ಗುರಿ ಇಟ್ಟು ನಿರ್ನಾಮ ಮಾಡುವುದು ಪ್ರಯೋಗ ಮಟ್ಟದಲ್ಲೂ ಸಾಧ್ಯವಾಗಿಲ್ಲ. ಬುಶ್ ಪ್ರಕಾರವೇ ಇದು ಕನಿಷ್ಟ 5 ವರ್ಷಗಳ ಕಾಲ ತೆಗೆದುಕೊಳ್ಳುತ್ತದೆ ಮತ್ತು 200 ಶತಕೋಟಿ ಡಾಲರು ವೆಚ್ಚವಾಗುತ್ತದೆ.


ಅಮೆರಿಕದ ವಿಜ್ಞಾನಿಗಳ ಸಂಘಟನೆಯೊಂದು ಇದರ ವಿರುದ್ಧ ಸತತ ವಿರೋಧ ಮಾಡುತ್ತಾ ಬಂದಿದೆ. ದುಬಾರಿ, ಕಾರ್ಯಸಾಧ್ಯವಲ್ಲದ್ದು ಮಾತ್ರವಲ್ಲದೆ, ಇಂತಹ ವ್ಯೂಹವನ್ನು ಕೆಲಸ ಮಾಡುತ್ತದೆಯೋ ಎಂಬುದು ಪರೀಕ್ಷಿಸುವುದು ಅಸಾಧ್ಯದ ಮಾತು. ತಲೆಕೆಟ್ಟಿರುವ ಸರ್ಕಾರ ಇಂತಹ ವ್ಯೂಹವನ್ನು ಬೆಳೆಸಿ, ಕೆಲಸಕ್ಕೆ ಹಚ್ಚಿದರೂ, ನಿಜವಾದ ಕ್ಷಿಪಣಿ ದಾಳಿ ನಡೆದಾಗ ಅದು ಕೆಲಸ ಮಾಡದೆ ಹೋಗುವ ಸಾಧ್ಯತೆ ಹೆಚ್ಚು ಎನ್ನುತ್ತಾರೆ. ಇದಲ್ಲದೆ ಇಂತಹ ವ್ಯೂಹದ ಕಾರ್ಯಕ್ಷಮತೆ ತಿಳಿದುಕೊಳ್ಳಲು, ಅಭೇದ್ಯವೇ ಎಂದು ಪರೀಕ್ಷಿಸಲು ಅಣ್ವಸ್ತ್ರ ಕ್ಷಿಪಣಿ ಹಾರಿಸುವ ಸಾಧ್ಯತೆ ಹೆಚ್ಚುತ್ತದೆ. ಅದು ಮಾತ್ರವಲ್ಲ ಒಂದು ವೇಳೆ ಈ ವ್ಯೂಹ ಕೆಲಸ ಮಾಡಿದರೂ ನಾಶವಾದ ಕ್ಷಿಪಣಿ ಅಮೆರಿಕದ ಮೇಲೆ ಬೀಳುವುದಿಲ್ಲ ಅಂತ ಯಾವ ಗ್ಯಾರಂಟಿ ಇದೆ? ಬಾಹ್ಯಾಕಾಶದಲ್ಲಿರುವ ಇಂತಹ 'ರಕ್ಷಣಾ ವ್ಯೂಹ'ವನ್ನೇ ವೈರಿ ದೇಶ ನಿರ್ನಾಮ ಮಾಡಲು ಪ್ರಯತ್ನಿಸಿದರೆ? ಇಂತಹ 'ರಕ್ಷಣಾ ವ್ಯೂಹ' ಎಲ್ಲ ಅಣ್ವಸ್ತ್ರ ದೇಶಗಳು ಬೆಳೆಸಿದರೆ? ಇಂತಹ 'ರಕ್ಷಣಾ ವ್ಯೂಹ' ಇದ್ದ ಮೇಲೆ (ಅದು ನಿಜವಾಗಿ ಕೆಲಸ ಮಾಡುತ್ತದೋ ಬಿಡುತ್ತದೋ) ಅಣ್ವಸ್ತ್ರ ದಾಳಿ ಚಪಲ ಹೆಚ್ಚುವುದಿಲ್ಲವೇ? ಅಮೆರಿಕ ಮೊದಲು ಇಂತಹ ವ್ಯೂಹ ಬೆಳೆಸಿದರೆ (ಉಳಿದವರು ಯಾರ ಹತ್ತಿರ ಇಂತಹ ವ್ಯೂಹ ಇಲ್ಲದಿದ್ದರೆ) ಅಮೆರಿಕವೇ ಈವರೆಗೆ ಬಳಸಲು ಹೆದರುತ್ತಿದ್ದ ಅಣ್ವಸ್ತ್ರ ಬೀಳಿಸುವ ಚಪಲ ಹೆಚ್ಚುವುದಿಲ್ಲವೇ?ಬೇರೆ ದೇಶಗಳ ಮೇಲೆ ಅಣ್ವಸ್ತ್ರ ದಾಳಿಗೆ ಅಮೆರಿಕದ ಜನರನ್ನು (ಪ್ರತಿದಾಳಿಯ ಬೆದರಿಕೆ ಇಲ್ಲದಿದ್ದರೆ) ತಯಾರು ಮಾಡುವುದು ಸುಲಭವಾಗುವುದಿಲ್ಲವೆ? ಇಂತಹ ಹಲವಾರು ಪ್ರಶ್ನೆಗಳನ್ನು ಅಮೆರಿಕ ವಿಜ್ಞಾನಿಗಳು, ಮಾತ್ರವಲ್ಲ ಇಡೀ ಜಗತ್ತಿನ ಶಾಂತಿಪ್ರಿಯ ಜನತೆ ಕೇಳುತ್ತಿದ್ದಾರೆ.



NMD ಜನವಿರೋಧಿ

NDM ಮತ್ತು ಹೊಸ ರಕ್ಷಣಾ ನೀತಿಯ ನಿಜವಾದ ಹೂರಣ ಈವರೆಗೂ ಶಾಂತಿ ಮತ್ತು ಶಸ್ತ್ರಾಸ್ತ್ರ ಸಮಾನತೆಯನ್ನು ಭೇದಿಸಿ ಹೊಸ ಆಕ್ರಾಮಕ ನೀತಿ ಅನುಸರಿಸುವುದು ಅಮೆರಿಕಕ್ಕೆ ಎಲ್ಲರನ್ನು ಬೆದರಿಸಬಲ್ಲ ಶಸ್ತ್ರಾಸ್ತ್ರ ಮೇಲುಗೈ ಒದಗಿಸುವುದು. ಇದು ಅಮೆರಿಕದ 'ರಕ್ಷಣೆ'ಗಾಗಲಿ ವಿಶ್ವಶಾಂತಿ ಕಾಪಾಡಲಾಗಲಿ ಅಲ್ಲ. ಇದು ಮಾತ್ರವಲ್ಲ ಇದು ಅಮೆರಿಕದ ದೈತ್ಯ ಶಸ್ತ್ರಾಸ್ತ್ರ ಕಂಪನಿಗಳಿಗೆ ದುಡ್ಡು ಮಾಡುವ ವಿಧಾನ ಪ್ರಮುಖವಾಗಿ ಒಟ್ಟಾರೆ 'ಬೆದರಿಕೆ' ಕಡಿಮೆಯಾಗದ ಸಂದರ್ಭದಲ್ಲಿ 'ಪುಂಡು ದೇಶ'ಗಳ ಬೆದರಿಕೆಯ ಗುಮ್ಮವನ್ನು ಸೃಷ್ಟಿಸಲಾಗುತ್ತಿದೆ. ಊ್ಹ ರಕ್ಷಣಾತ್ಮಕ ಅಲ್ಲ. ಬಾಹ್ಯಾಕಾಶದ ಮಿಲಿಟರೀಕರಣ. ಹೊಸ ಶಸ್ತ್ರಾಸ್ತ್ರ ಪೈಪೋಟಿ ಆರಂಭದ ಮಂತ್ರ. ಅನಗತ್ಯ ಶಸ್ತ್ರಾಸ್ತ್ರ ಮೇಲೆ ದುಬಾರಿ ವೆಚ್ಚ ಮಾಡುವ ತಂತ್ರ. ಅಗತ್ಯ ಬೆಳವಣಿಗೆಯ ಸಂಪನ್ಮೂಲಗಳನ್ನು ಶಸ್ತ್ರಾಸ್ತ್ರಗಳ ಕಡೆಗೆ(ಅಮೆರಿಕದ್ದು ಮಾತ್ರವಲ್ಲ, ಅದರ ಪ್ರತಿಯ ಇನ್ನೂ ಹಲವು ದೇಶಗಳಲ್ಲಿ) ಹರಿಯಬಿಡುವ ಜನವಿರೋಧ ದಾರಿ.

ಇಂತಹ ಯೋಜನೆಯನ್ನು ವಾಜಪೇಯಿ ಸರ್ಕಾರ ಸ್ವಾಗತಿಸುವುದು ಹಾಸ್ಯಾಸ್ಪದ ಮಾತ್ರವಲ್ಲ, ಅತ್ಯಂತ ಗಂಭೀರ ಅಪಾಯಕಾರಿ ಬೆಳವಣಿಗೆ. ಅಮೆರಿಕದ ಜೂನಿಯರ್ ಪಾರ್ಟನರ್ ಆಗಲು ತುದಿಗಾಲಲ್ಲಿ ನಿಂತಿರುವ ಇವರು ಏನನ್ನು ಮಾಡಲು ಹೇಸದು. NMD ಯನ್ನು ಪಾಕಿಸ್ತಾನದ ವಿರುದ್ಧ ಬಳಸುವ ಅಸಹ್ಯ-ಹುನ್ನಾರ ಹಾಕಿದೆ. ಆದರೆ ಇಂಡಿಯಾಕ್ಕೆ ಅಮೆರಿಕದ ಬಾಡಿಗೆ ಸಂಬಂಧಕ್ಕೆ ಧಕ್ಕೆ ಬಂದು, ರಕ್ಷಣಾ ಆತಂಕಗಳು ಹೆಚ್ಚುವ ಸಾಧ್ಯತೆ ಇದೆ. NMD ಬಗ್ಗೆ ಸರ್ಕಾರ ನೇರವಾಗಿ ಬೆಂಬಲಿಸದಿದ್ದರೂ, ಬುಶ್ ನೀತಿಯ ಮುಖ್ಯ ಭಾಗ NMD ಎಂಬುದನ್ನು ಮರೆಯುವಂತಿಲ್ಲ. ಇದು ಮಾತ್ರವಲ್ಲ, ಭಾರತದ ಸ್ವತಂತ್ರ ರಕ್ಷಣಾ ನೀತಿ ರೂಪಿಸುವ ಹಕ್ಕು, ವಿಶ್ವಶಾಂತಿಯ ಅಗ್ರಣಿ ನಾಯಕನ ಪಾತ್ರದ ಅಮೋಘ ಪರಂಪರೆಯನ್ನು ವಾಜಪೇಯಿ ಸರ್ಕಾರ ಈ ಮೂಲಕ ಅಡವಿಟ್ಟಿದೆ.



ಅಣ್ವಸ್ತ್ರ ವಿರೋಧಿಸಿ ಶಾಂತಿ ಚಳುವಳಿ

ಸಿನಿಮಾ

ಅತಿರೇಕ, ಹೊಯ್ದಾಟಗಳ ಧಾರಾಳ ಚಿತ್ರ

ಜಿಪುಣ ನನ್ನ ಗಂಡ

ಚಿತ್ರದ ನಾಯಕ ಖಾಸಗಿ ಕಂಪನಿಯಲ್ಲಿ ಕೈತುಂಬ ಸಂಬಳ ದುಡಿಯುವ ಮನುಷ್ಯ. ಆದರೂ... ಪಂಚೆ ಹರಿದರೆ ಅದನ್ನೇ ಟವೆಲ್ ಮಾಡಿಕೊಳ್ಳಬೇಕು, ಟವೆಲ್ಲು ಹರಿದರೆ ಅದರಲ್ಲೇ ಕರ್ಚಿಫು ಮಾಡಿ ಬಳಸಬೇಕು ಎನ್ನುವ ಜಿಪುಣತನ. ಮಾತ್ರವಲ್ಲ ಪೇಪರ್ ಹಂಚುವ ಹುಡುಗನಿಗೆ 50 ಪೈಸೆ ಆಸೆ ತೋರಿಸಿ ಪುಕ್ಕಟ್ಟೆ ಪೇಪರ್ ಓದುವ, ತನ್ನ ಮನೆಯ ಕಿಟಕಿಯಿಂದಲೇ ಪಕ್ಕದ ಮನೆಯ ಟಿ.ವಿಯಲ್ಲಿ ಬರುವ ಎಲ್ಲ ಚಾನಲ್‌ಗಳನ್ನು ನೋಡಿ ತೃಪ್ತಿ ಹೊಂದುವ ಮನಸ್ಸು. ಕಛೇರಿಯಲ್ಲಿ, ಮನೆಯ ಸುತ್ತ-ಮುತ್ತ ಜನರಿಂದಲೂ ಜಿಪುಣ, ಜಿಪುಣ ಎಂದು ನಾಮಾಂಕಿತಗೊಂಡು ಯಾವುದೋ ಕಾರ್ಯ ಸಾಧನೆಗಾಗಿ ಪೈಸೆ, ಪೈಸೆ ಹಣ ಜೋಡಿಸುತ್ತಾ ಹೆಣಗಾಡುವ ಚಿತ್ರವೇ 'ಜಿಪುಣ ನನ್ನ ಗಂಡ'

ಜಗ್ಗೇಶ್ ಅಭಿನಯದ ಹಿಂದಿನ ಚಿತ್ರಗಳಿಗೆ ಹೋಲಿಸಿದರೆ ಈ ಚಿತ್ರ ತುಸು ಭಿನ್ನವಾಗಿಯೇ ಕಂಡರೂ ಬಹುಶಃ ಅಭಿಮಾನಿಗಳ ಸಂತೋಷಪಡಿಸಲು ಮಾಮೂಲಿ, ಅಸಂಬದ್ಧ ಸಂಭಾಷಣೆ, ಅಭಿನಯಗಳನ್ನು ತುರುಕಿ ಚಿತ್ರ ಹೊಯ್ದಾಡುವಂತೆ ಮಾಡಲಾಗಿದೆ.

ಈ ಚಿತ್ರ ತುಸು ಭಿನ್ನವಾಗಿಯೇ ನಿಲ್ಲಬಹುದಾದ ಅಂಶಗಳನ್ನು ಒಳಗೊಂಡಿದ್ದರೂ ನಿರ್ದೇಶಕ ಜೆ.ಜೆ.ಕೃಷ್ಣ ಆ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಚಿತ್ರ ಕೊನೆಗೂ ಜಗ್ಗೇಶ್ ರೂಪದಲ್ಲೇ ಬೀಳುತ್ತದೆ.

ನಾಯಕ ಪದ್ಮನಾಭನಿಗೆ ಒಳ್ಳೆಯ ಆದಾಯವಿದ್ದರೂ ಖರ್ಚು ಮಾಡುವ ಹಾಗಿಲ್ಲ. ಮದುವೆ, ಮಕ್ಕಳು, ಸಂಸಾರ ಇವೆಲ್ಲಾ ಅನವಶ್ಯಕ ಖರ್ಚೆಂಬ ಜಾಯಮಾನ ಅವನದು. ಹೀಗಾಗಿ ಬೇರೆಯವರ ದೃಷ್ಟಿಯಲ್ಲಿ ಅತ್ಯಂತ ಜಿಪುಣ. ಆದರೆ ಬಾಲ್ಯದಲ್ಲಿ ತಂದೆ-ತಾಯಿಯೊಂದಿಗೆ ಬೆವರು ಹರಿಸಿ ಕಟ್ಟಿದ್ದ ಮನೆಯು, ತಂದೆಯ ಅಕಾಲಿಕ ಮರಣದೊಂದಿಗೆ ಸಾಲ ನೀಡಿದ್ದ ಮಾರ್ವಾಡಿ(ಮುಖ್ಯಮಂತ್ರಿ ಚಂದ್ರು) ಪಾಲಾಗುತ್ತದೆ. ತಾಯಿಯೊಂದಿಗೆ ಬೀದಿಗೆ ಬಿದ್ದ ನಾಯಕ, ದೊಡ್ಡವನಾದ ಮೇಲೆ ಸಾಲ ತೀರಿಸಿ ಆ ಮನೆಯನ್ನು ಪುನ ತನ್ನದಾಗಿಸಿಕೊಂಡು ಆ ಮೂಲಕ ತನ್ನ ತಾಯಿಯ ಆಸೆಯನ್ನು ಈಡೇರಿಸಲು ನಡೆಸುವ ಕಸರತ್ತೇ ಈ ಚಿತ್ರದ ಪ್ರಧಾನ ಅಂಶ.

'ಜಿಪುಣ ನನ್ನ ಗಂಡ' ಭಾವನಾತ್ಮಕವಾಗಿ ಪ್ರೇಕ್ಷಕರನ್ನು ಸೆಳೆದುಕೊಳ್ಳುವಲ್ಲಿ ಸಫಲವಾದರೂ ಜಗ್ಗೇಶ್ ಸಿನಿಮಾದಲ್ಲಿರಬಹುದಾದ ಎಲ್ಲ 'ನವರಸ'ಗಳನ್ನೂ ಬೆರೆಸಿ ಕೇವಲ ಅತಿಯಾದ ಮಾತು ಮತ್ತು ವಾಚಾಳಿತನಗಳೇ ನಡುನಡುವೇ ಚಿತ್ರವನ್ನು ಅರ್ಥ ಹೀನವನ್ನಾಗಿಸಿವೆ. ಬ್ಯಾಂಕ್ ಜನಾರ್ದನ್, ಸಾಧುಕೋಕಿಲಾ ಅಭಿನಯಗಳು ಅನವಶ್ಯಕವಾಗಿ ತುರುಕಿದ ಅರಚಾಟಗಳಾಗಿವೆ.

ಉತ್ತಮ ಅಭಿನಯದ ಮೂಲಕ 'ಸೈ' ಎನಿಸಿಕೊಳ್ಳುವ ಸಾಧ್ಯತೆ ಇರುವ ಉಮಾಶ್ರೀ ಈಗಲೂ ಇಂತಹದೇ ಕಿರುಚಾಟದ ಪಾತ್ರಗಳಿಗೆ ಶರಣಾಗುತ್ತಿರುವುದು ವಿಪರ್ಯಾಸ. ಇನ್ನು ಜಗ್ಗೇಶ್ ಅಭಿನಯವಂತೂ ಅಭಿಮಾನಿಗಳಿಗೆ ನಿರಾಶೆ ತಂದಿಲ್ಲವೆನಿಸುತ್ತದೆ. ಆದರೆ ಚಿತ್ರದ ಕಥೆಯನ್ನು ಜಗ್ಗೇಶ್ ವರ್ಚಸ್ಸಿಗೆ ಹೊಂದಿಕೊಂಡೆ ಎಲ್ಲಾ ಮಸಾಲೆಗಳನ್ನು ಸೇರಿಸಿ ನಿರೂಪಿಸಿದ್ದರಿಂದ ಈ ಚಿತ್ರ ತುಸು ಭಿನ್ನವಾಗಿಯೇ ನಿಲ್ಲಬಹುದಾದ ಅಂಶಗಳನ್ನು ಒಳಗೊಂಡಿದ್ದರೂ ನಿರ್ದೇಶಕ ಜೆ.ಜೆ.ಕೃಷ್ಣ ಆ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಚಿತ್ರ ಕೊನೆಗೂ ಜಗ್ಗೇಶ್ ರೂಪದಲ್ಲೇ ಬೀಳುತ್ತದೆ.

ಸಂಯಮದ ಅಭಿನಯದ ಮೂಲಕ ಮುಖ್ಯಮಂತ್ರಿ ಚಂದ್ರು ಗಮನ ಸೆಳೆದಿದ್ದಾರೆ. ಹಾಗೆ ನಾಯಕಿ ರವಳಿ ಹಾಡಿನ ದೃಶ್ಯಗಳಲ್ಲಿ ತನ್ನ ವೈಯ್ಯಾರದಿಂದ ಹೊಂದಿಕೊಳ್ಳಲು ಸಾಧ್ಯವಾಗದಿದ್ದರೂ ಅಭಿನಯದಲ್ಲಿ ಯಶ ಸಾಧಿಸಿದ್ದಾಳೆ. ನವನಟಿ ಕೃತಿಕಾ ಉತ್ತಮ ಪ್ರವೇಶವಾದರೂ 'ಕುಂದಾಪುರದ ಕನ್ನಡ' ಕಲಿಯಲು ಸರ್ಕಸ್ ಮಾಡಿದಂತಿದೆ.




ರವಳಿ, ಜಗ್ಗೇಶ್

ಇನ್ನು ಈ ಚಿತ್ರದ ಮೂಲಕ ಜಗ್ಗೇಶ್ ಬಹುಶ ರಾಜ್‌ಕುಮಾರ್ ಕುಟುಂಬದಂತೆ ತನ್ನದೇ ಬಳಗವನ್ನು ಚಿತ್ರ ತಯಾರಿಕೆಗೆ ಬಳಸಿಕೊಳ್ಳಲು ಹೊರಟಂತಿದೆ. ಹೀಗಾಗಿ ಇದೊಂದು ಜಗ್ಗೇಶ ಕುಟುಂಬದ ಸಿನಿಮಾ ಎಂಬ ಅಪವಾದಕ್ಕೆ ಗುರಿಯಾಗಿದೆ. ಚಿತ್ರದಲ್ಲಿ ಜಗ್ಗೇಶ್ ತಮ್ಮ ಮತ್ತು ಮಗ ಒಂದೊಂದು ಪಾತ್ರದಲ್ಲಿ ಕಾಣಿಸಿಕೊಂಡರೆ ಜಗ್ಗೇಶ್ ಭಾವನೇ ಈ ಚಿತ್ರದ ನಿರ್ಮಾಪಕ. ಅಲ್ಲದೆ ಸ್ವತಃ ಜಗ್ಗೇಶ್ ಹಿನ್ನೆಲೆ ಗಾಯಕರಾಗಿದ್ದಾರೆ. ಕೆಲವು ಹಾಡುಗಳು ಅನವಶ್ಯಕವಾಗಿದ್ದರೆ ಒಂದರೆಡು ಹಾಡುಗಳು ಕಿವಿಗೆ ಇಂಪು ನೀಡುತ್ತವೆ.

ಒಟ್ಟಿನಲ್ಲಿ ಹಲವು ಅನವಶ್ಯಕ ಕಿರಿಚಾಟ, ಅತಿರೇಕ ಮತ್ತು ಹೊಯ್ದಾಟಗಳ ನಡುವೆಯೂ ಈ ಚಿತ್ರ ಪ್ರೇಕ್ಷಕರನ್ನು 'ಬೋರ್' ಮಾಡುವುದಿಲ್ಲ ಎನ್ನುವುದೇ ಇದರ ಪ್ಲಸ್ ಪಾಯಿಂಟ್

- ಕೆ. ಮಹಾಂತೇಶ್

ಹೊಸ ಇತಿಹಾಸ ಬರೆದ ಓ ಬಂಗಾಳದ ಜನರೇ ನಿಮಗಿದೋ ಕೋಟಿ ಕೋಟಿ ಅಭಿನಂದನೆ, ಕೆಂಪು ವಂದನೆ.



ಸಮರಕ್ಕೆ ಸಜ್ಜುಗಳಿಸುತ್ತಿರುವ ಜ್ಯೋತಿ ಬಾಬು





ಐತಿಹಾಸಿಕ ದಾಖಲೆಯ ಗೆಲುವಿನ ವಿಜಯೋತ್ಸವದಲ್ಲಿ ಸಂಭ್ರಮಿಸುತ್ತಿರುವ ಪಶ್ಚಿಮ ಬಂಗಾಳದ ಜನತೆ

ಸಾದರ ಸ್ವೀಕಾರ

● ಗುರುಗ್ರಹದಲ್ಲಿ ದೀಪಾವಳಿ	ಲೇಖಕರು :ನಾಗೇಶ ಹೆಗಡೆ	ಬೆಲೆ	80 ರೂ
● ಕೃತಿ ಶೋಧ	ಲೇ : ಸುಬ್ರಾಯ ಚೊಕ್ಕಾಡಿ	ಬೆಲೆ	70 ರೂ
● ಮುಂಬೈ ಡೈರಿ	ಲೇ : ಉಮಾರಾವ್	ಬೆಲೆ	60 ರೂ
● ರಾಕೆಟ್ ಕಥೆ	ಲೇ : ಎನ್.ಶಂಕರಪ್ಪ	ಬೆಲೆ	55 ರೂ
● ತೆಂಗು ಸಂರಕ್ಷಣೆ	ಲೇ : ಬಿ.ಮಹಂತೇಶ್	ಬೆಲೆ	50 ರೂ
● ರೇಡಿಯೋ ದಿಂದ ವಿಡಿಯೋದವರೆಗೆ	ಲೇ : ಅನಂತ ಕಲ್ಲೋಳ	ಬೆಲೆ	35 ರೂ
● ಸಿಂಡ್ರೆಲಾ - ಅಂಬ್ರೆಲಾ	ಲೇ : ಚಿಂತಾಮಣಿ ಕೊಡ್ಲಕೆರೆ	ಬೆಲೆ	20 ರೂ
● ವೈದ್ಯಕೀಯ ನಿರ್ಲಕ್ಷ್ಯ	ಲೇ : ವೈ.ಜಿ.ಮುರುಳಿಧರ್	ಬೆಲೆ	16 ರೂ

ಪ್ರಕಾಶಕರು

ನವಕರ್ನಾಟಕ ಪಬ್ಲಿಕೇಷನ್ ಪ್ರೈವೆಟ್ ಲಿಮಿಟೆಡ್

ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001.

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್ ವೈ ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಪವಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : S.Y.GURUSHANTH